# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ ಭಾನುವಾರ, ನವೆಂಬರ್ 08, 2020

ಸಂಪುಟ : 47 ಸಂಚಿಕೆ : 189 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com



BSC® B.S.CHANNABASAPPA & SONS DAVANGERE


ಮದುವೆ ಜವಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ

ಬಿ.ಎಸ್.ಚನ್ನಬಸಪ್ಪ & ಸನ್ಸ್®

ಕಾಳಿಕಾದೇವಿ ರಸ್ತೆ * ಪಿ.ಜೆ.ಬಡಾವಣೆ * ಡೆಂಟಲ್ ಕಾಲೇಜ್ ರಸ್ತೆ, ದಾವಣಗೆರೆ.


# ಜೋ ಬಿಡೆನ್ ಅಮೆರಿಕದ ಅಧ್ಯಕ್ಷ

## ಮೊದಲ ಕಪ್ಪು ವರ್ಣೀಯ ಉಪಾಧ್ಯಕ್ಷೆಯಾಗಿ ಕಮಲಾ ಹ್ಯಾರಿಸ್




ವಾಷಿಂಗ್ಟನ್, ನ. 7 – ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಡೆಮೊಕ್ರಾಟ್ ಅಭ್ಯರ್ಥಿ ಜೋ ಬಿಡೆನ್ ಅವರು ಗೆಲುವು ಸಾಧಿಸಿದ್ದಾರೆ. ಅವರು ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ತುರುಸಿನ ಸ್ಪರ್ಧೆಯಲ್ಲಿ ಪರಾಭವಗೊಳಿಸಿದ್ದಾರೆ.

77 ವರ್ಷದ ಬಿಡೆನ್ ಅವರು ಈ ಹಿಂದೆ ಬರಾಕ್ ಒಬಾಮಾ ಸರ್ಕಾರದಲ್ಲಿ ಉಪಾಧ್ಯಕ್ಷರಾಗಿದ್ದರು. ಅವರೀಗ 77ನೇ ವಯಸ್ಸಿನಲ್ಲಿ ಅಮೆರಿಕದ 46ನೇ ಅಧ್ಯಕ್ಷರಾಗಲಿದ್ದಾರೆ ಎಂದು ಸಿ.ಎನ್.ಎನ್. ವರದಿ ಮಾಡಿದೆ. ಪೆನ್ಸಿಲ್ವೇನಿಯಾ ರಾಜ್ಯದಲ್ಲಿ ಅವರು ಗೆಲುವು ಸಾಧಿಸಿದ ನಂತರ, ಅಧ್ಯಕ್ಷರಾಗಲು ಬೇಕಾದ 270 ಸ್ಥಾನಗಳ ಗಡಿಯನ್ನು (6ನೇ ಪುಟಕ್ಕೆ)

# ಹರಪನಹಳ್ಳಿ ಪುರಸಭೆ ಬಿಜೆಪಿ ವಶ

**ಅಧ್ಯಕ್ಷ ಮಂಜುನಾಥ ಇಜಂತಕರ್, ಉಪಾಧ್ಯಕ್ಷರಾಗಿ ಎನ್. ಭೀಮವ್ವ**

ಹರಪನಹಳ್ಳಿ, ನ.7- ಬದಲಾದ ಮೀಸಲಾತಿಯಿಂದ ತೀವ್ರ ಕುತೂಹಲ ಕೆರಳಿಸಿದ್ದ ಸ್ಥಳೀಯ ಪುರಸಭೆ ಬಿಜೆಪಿ ವಶವಾಗಿದ್ದು, ಅಧ್ಯಕ್ಷರಾಗಿ ಪಟ್ಟಣದ 18ನೇ ವಾರ್ಡ್‌ನ ಬಿಜೆಪಿ ಸದಸ್ಯ ಮಂಜುನಾಥ ಇಜಂತಕರ್ ಹಾಗೂ ಉಪಾಧ್ಯಕ್ಷರಾಗಿ 26 ನೇ ವಾರ್ಡ್‌ನ ಬಿಜೆಪಿ ಸದಸ್ಯರಾದ ಎನ್. (5ನೇ ಪುಟಕ್ಕೆ)

# ಬೀರಲಿಂಗೇಶ್ವರ ದೇವಸ್ಥಾನದ ಬಾಗಿಲು ತೆರೆಯಲು ವಿರೋಧ



**ಹಳೇ ಅರ್ಚಕನ ಬಂಧನ: ದೇವಸ್ಥಾನದ ಬಾಗಿಲು ತೆಗೆಸಿ ಹೊಸ ಅರ್ಚಕರಿಂದ ಪೂಜೆ ಮಾಡಿಸಿದ ಜಿಲ್ಲಾಡಳಿತ**

ದಾವಣಗೆರೆ, ನ.7- ನಗರದ ಪಿಬಿ ರಸ್ತೆಯ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಬಾಗಿಲು ತೆಗೆಯಲು ವಿರೋಧ ವ್ಯಕ್ತಪಡಿಸಿದ್ದ ಹಳೇ ಅರ್ಚಕ ಮತ್ತವರ ಸಂಬಂಧಿಕರು ಸೇರಿದಂತೆ ಸುಮಾರು 20ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿ, ದೇವಸ್ಥಾನದ ಬಾಗಿಲು ತೆಗೆಸಿ ಹೊಸ ಅರ್ಚಕರಿಂದ ಜಿಲ್ಲಾಡಳಿತವು ಪೂಜೆ ಮಾಡಿಸಿರುವ ಘಟನೆ ಇಂದು ನಡೆಯಿತು.

ಮುಜರಾಯಿ ಇಲಾಖೆಗೆ ಸೇರಿದ ಈ ದೇವಸ್ಥಾನದ (5ನೇ ಪುಟಕ್ಕೆ)


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 07-11-2020ರ ಶನಿವಾರ ನಿಧನರಾದ ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷರಾದ

**ಶ್ರೀ ಎನ್. ಗೋದೆಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಡಿ. ಬಸವರಾಜಪ್ಪ, ಅಧ್ಯಕ್ಷರು

ನಿರ್ದೇಶಕರುಗಳು : ♦ ಆರ್. ಶಂಕರ್ ♦ ಎನ್.ಪ್ರಕಾಶ್ ♦ ಎಸ್ ರುದ್ರಪ್ಪ ♦ ಎಲ್. ನಾಗರಾಜ್ ♦ ಆರ್. ವೆಂಕಟಾಚಲಮೂರ್ತಿ ♦ ಟಿ. ಸುರೇಶ್ ♦ ಶ್ರೀಮತಿ ಅನಂತಮ್ಮ ♦ ಬಿ.ಪಿ. ಮಂಜುನಾಥ್ ♦ ಎಲ್.ಎಸ್.ಸುಧಾಕರ್ ♦ ಎಸ್.ಎಂ. ನಾಗರಾಜನ್, ವಿಶೇಷ ಆಹ್ವಾನಿತರು

♦ ಡಿ. ಪಾವನಮೂರ್ತಿ, ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗದವರು ಮತ್ತು ಪಿಗ್ಮಿ ಸಂಗ್ರಹಕಾರರು

**ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

ನಂ. 175/2, ಶ್ರೀ ವಿನಾಯಕ ಕಾಂಪ್ಲೆಕ್ಸ್, ವಸಂತ ರಸ್ತೆ, ದಾವಣಗೆರೆ.



ಗ್ರಾಹಕರ ಸೇವೆಯನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡಿರುವ ನಿಮ್ಮ 'ರವಿತೇಜ'

ಗ್ರಾಹಕರ ಅಪೇಕ್ಷೆಯ ಮೇರೆಗೆ ಅನುಕೂಲವಾಗುವಂತೆ ನಮ್ಮ ಹೊಸ ಶೋ ರೂಂಗಳನ್ನು

ವಿಜಯಲಕ್ಷ್ಮಿ ರಸ್ತೆ ಹಾಗೂ ಚೇತನಾ ಹೋಟೆಲ್ ರಸ್ತೆಯಲ್ಲಿ ನೂತನವಾಗಿ ಆರಂಭಿಸಲಾಗಿದೆ.

ದೀಪಾವಳಿಯನ್ನು ನಮ್ಮೆಲ್ಲಾ ಅಂಗಡಿಗಳಲ್ಲಿ ಸಂಭ್ರಮಿಸಿ... ಆನಂದಿಸಿ...

ನವನವೀನತೆಯ ಉಡುಪುಗಳಿಗಾಗಿ ಇಂದೇ ಭೇಟಿ ಕೊಡಿ

Raviteja Textiles

Silk Sarees | Mens Wear | Kids Wear

Chamarajpet Ph. : 82963 50074

Raviteja Garments Chamarajpet Ph. : 98800 32999

Raviteja's Vidyanagar Ph. : 98803 82611

Raviteja Fashion Chetana Hotel Road Road Ph. : 95916 33871

Raviteja Silks & Sarees, Vijayalakshmi Road Ph. : 98444 66844, 97419 53993



Toll Free No. 1800-102-4707

ಸುಪ್ರೀಮ್ Supreme® Since 1942

People who know plastics best

Total piping solution

Lifeline C-PVC · SILTANK · SKY RISE · Nu-Drain · Ultra PLUS · SAFECARD

SMARTER PLUMBING & DRAINAGE SOLUTIONS FOR FUTURE READY SMART CITIES!

Download the App Supreme Pipes

AUTHORISED DISTRIBUTORS : UPVC Plumbing Pipes & Fittings, CPVC Plumbing Pipes & Fittings, SWR Pipes & Fittings, PVC (Agri) Pipes & Fittings, PPR Pipes & Fittings, HDPE Pipes & Fittings, Eco-Drain (Drainage) Pipes, SePtic Tank, Overhead, Loft & Sump Water Tanks, Taps, Showers & Bath Fittings, Sprinkler Irrigation System, Column (Borewell) Pipes, Readymade Toilet & Urinals Block

HULLUMANE PROPERTIES & POWER PVT LTD.

# 389/25, Sri Srinivasa Tirtha, S.S. Hospital Road, Jayanagara A-Block, Davangere-577 004. Karnataka, e-mail : hullumaneproperties_pwr@yahoo.com

Ph. : 95135 03000, 97392 15000



FREE LONG TERM NEET COACHING

FREE NEET ಕೋಚಿಂಗ್ ಮೊದಲು ಬಂದ 50 ವಿದ್ಯಾರ್ಥಿಗಳಿಗೆ ಮಾತ್ರ

GM 400 ಕ್ಕಿಂತ ಹೆಚ್ಚು ಅಂಕಗಳು, OBC 350 ಕ್ಕಿಂತ ಹೆಚ್ಚು ಅಂಕಗಳು, SC / ST 300 ಕ್ಕಿಂತ ಹೆಚ್ಚು ಅಂಕಗಳು ಪಡೆದವರು

Golden Jubilee SIDDAGANGA

GIVE A MISSED CALL TO 9982230899

Siddaganga Academy of Medical Sciences

## ನಂದಿಗುಡಿ : ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿಗೆ ಗುರು ನಮನ



ಹೊನ್ನಾಳಿ, ನ.7- ತಾಲ್ಲೂಕಿನ ಹಿರೇಗೋಣಿಗೆರೆ ಗ್ರಾಮದಲ್ಲಿ ನಡೆದ ಸಮಾರಂಭದಲ್ಲಿ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಗ್ರಾಮಸ್ಥರು ಗುರು ನಮನ ಸಲ್ಲಿಸಿದರು. ನೊಳಂಬ ವೀರಶೈವ-ಲಿಂಗಾಯತ ಯುವ ವೇದಿಕೆಯ ಅಧ್ಯಕ್ಷ ಜೀನಹಳ್ಳಿ ಎಂ.ಬಿ. ಚನ್ನೇಶ್, ತಾ.ಪಂ. ಸದಸ್ಯ ಸಿ.ಆರ್. ಶಿವಾನಂದ್, ವೇದಿಕೆಯ ನಿಕಟಪೂರ್ವ ಅಧ್ಯಕ್ಷ ಮಹೇಶ್ ಹುರ್ಡೇದ್, ತಾಲ್ಲೂಕು ರೈತ ಸಂಘ-ಹಸಿರು ಸೇನೆ ಅಧ್ಯಕ್ಷ ಎಚ್. ಕಡದಕಟ್ಟೆ ಎಂ.ಎಸ್. ಜಗದೀಶ್, ಚನ್ನವೀರಪ್ಪ, ಹಿರೇಗೋಣಿಗೆರೆ ಗ್ರಾಮದ ನೊಳಂಬ ಸಮಾಜದ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

## ಮಲೇಬೆನ್ನೂರಿನಲ್ಲಿ ದೊಡ್ಡ ಎಡೆ ಜಾತ್ರೆ



ಮಲೇಬೆನ್ನೂರು, ನ. 7- ಇಲ್ಲಿನ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ವಿಜಯದಶಮಿ ಹಾಗೂ ಮರಿಬನ್ನಿ ಅಂಗವಾಗಿ ದೊಡ್ಡ ಎಡೆ ಜಾತ್ರೆ ಇತ್ತೀಚೆಗೆ ಕಾಗಿನಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸರಳವಾಗಿ ಜರುಗಿತು. ಕೊರೊನಾ ಕಾರಣ ಈ ಬಾರಿ ಸಾಮೂಹಿಕ ವಿವಾಹಗಳನ್ನು ಏರ್ಪಡಿಸಿರಲಿಲ್ಲ. ಆದರೆ, ಸ್ವಾಮಿಯ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಮಹಾ ಪ್ರಸಾದ ವಿನಿಯೋಗವನ್ನು ಎಂದಿನಂತೆ ನೆರವೇರಿಸಲಾಯಿತು ಎಂದು ಕೆ.ಪಿ. ಗಂಗಾಧರ್ ತಿಳಿಸಿದ್ದಾರೆ.

## ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಮೇಯರ್ ಅಜಯ್ ಕುಮಾರ್ ಭೇಟಿ



ದಾವಣಗೆರೆ, ನ.7- ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತುಗಳ ಸಂಸ್ಕರಣಾ ಘಟಕಕ್ಕೆ ಇಂದು ಭೇಟಿ ನೀಡಿ ಪರಿಶೀಲಿಸಿ, ಕಸ ವಿಲೇವಾರಿ ಬಗ್ಗೆ ನಗರ ಪಾಲಿಕೆ ಮಹಾಪೌರರಾದ ಬಿ.ಜಿ.ಅಜಯ್ ಕುಮಾರ್ ಮಾಹಿತಿ ಪಡೆದರು. ಸಂಸ್ಕರಣಾ ಘಟಕದಲ್ಲಿರುವ ಸುಮಾರು ಐದು ಲಕ್ಷ ಟನ್ ಕಸವನ್ನು ಗೊಬ್ಬರವಾಗಿ ತಯಾರಿಸಿ ವಿಲೇವಾರಿ ಮಾಡುವ ಕುರಿತು ಮತ್ತು ತ್ಯಾಜ್ಯದಿಂದ ಬರುವ ವಾಸನೆ ತಡೆಯುವ ಬಗ್ಗೆ ಕೆಲ ಸೂಚನೆಗಳನ್ನು ಅಧಿಕಾರಿಗಳಿಗೆ ನೀಡಿದರು.

ಈ ವೇಳೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಎಸ್.ಟಿ.ವೀರೇಶ್, ಜಯಮ್ಮ ಗೋಪಿ ನಾಯ್ಕ್, ಪಾಲಿಕೆ ಸದಸ್ಯರಾದ ಸ್ವಾಗಿ ಶಾಂತ ಕುಮಾರ್, ಎಲ್.ಡಿ. ಗೋಣೆಪ್ಪ, ಮುಖಂಡರಾದ ನರೇಂದ್ರ ಕುಮಾರ್, ಯೋಗೀಶ್ (ಯಗ್ಗಪ್ಪ), ಜಯಪ್ರಕಾಶ್ ಸೇರಿದಂತೆ ಇತರರು ಇದ್ದರು.

## ಕದಳಿ ವೇದಿಕೆಯಿಂದ ಜಿಲ್ಲೆಯ ಮಹಿಳೆಯರಿಗೆ ಪ್ರಬಂಧ ಸ್ಪರ್ಧೆ

ದಾವಣಗೆರೆ,ನ.7- ಕದಳಿ ಮಹಿಳಾ ವೇದಿಕೆಯಿಂದ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ದಾವಣಗೆರೆ ಜಿಲ್ಲೆಯ ಮಹಿಳೆಯರಿಗಾಗಿ 'ಕನ್ನಡ ಸಾಹಿತ್ಯಕ್ಕೆ ಶರಣರ ಕೊಡುಗೆ' ವಿಷಯ ಕುರಿತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಕಾರ್ಯದರ್ಶಿ ಮಮತಾ ನಾಗರಾಜ್ ತಿಳಿಸಿದ್ದಾರೆ.

ಎರಡು ಪುಟಗಳಿಗೆ ಮೀರದಂತೆ ಬರೆದ ಪ್ರಬಂಧವನ್ನು ಇದೇ ದಿನಾಂಕ 20ರೊಳಗೆ ಶ್ರೀಮತಿ ವಿಜಯಲಕ್ಷ್ಮಿ ಬಸವರಾಜ್, ಮನೆ ಸಂ. 1847/65, 1ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ. ಮೊ. 9481288775 ಇಲ್ಲಿಗೆ ಕಳುಹಿಸಿಕೊಡಬೇಕು.

# ನಾಟಕೋತ್ಸವದ ಮೂಲಕ ನೊಂದ ಮನಸುಗಳಿಗೆ ಸಾಂತ್ವನ: ಶ್ಲಾಘನೆ



**ರಾಷ್ಟ್ರೀಯ ಅಂತರ್ಜಾಲ ನಾಟಕೋತ್ಸವದ ಸಮಾರೋಪ ಸಮಾರಂಭದಲ್ಲಿ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್ ಕಿರಣ್ ಕುಮಾರ್**

ಸಾಣೇಹಳ್ಳಿ, ನ. 7- ಸಾಣೇಹಳ್ಳಿ ಪಂಡಿತಾರಾಧ್ಯ ಶ್ರೀಗಳು ನಾಟಕೋತ್ಸವದ ಮೂಲಕ ಮಾನವ ತನ್ನ ಸುತ್ತಲಿನ ದೈನಂದಿನ ಪ್ರಾಕೃತಿಕ ವಿದ್ಯಮಾನಗಳನ್ನು ಅರಿಯಲು ಮತ್ತು ಪ್ರಗತಿಯ ವೇಗದಲ್ಲಿ ಆಗುತ್ತಿರುವ ಕಷ್ಟ-ನಷ್ಟ-ತೊಂದರೆಗಳಿಂದ ಪಾರಾಗಲು ಬೇಕಾದ ಅರಿವನ್ನು, ನೊಂದ ಮನಸ್ಸುಗಳಿಗೆ ಸಾಂತ್ವನವನ್ನು ಹೇಳುತ್ತಿರುವ ಕೆಲಸ ಅಭಿನಂದನಾರ್ಹವಾದುದು ಎಂದು ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆಯ ವಿಶ್ರಾಂತ ಅಧ್ಯಕ್ಷ ಎ.ಎಸ್ ಕಿರಣ್‌ಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಷ್ಟ್ರೀಯ ಅಂತರ್ಜಾಲ ನಾಟಕೋತ್ಸವದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವಚನಕಾರ ಅಲ್ಲಮ ಪ್ರಭುಗಳು ಹೇಳುವಂತೆ ಅರಿವು ಸಾಮಾನ್ಯವಲ್ಲ. ಇಂತಹ ಅರಿವನ್ನು ಹೇಗೆ ಹೆಚ್ಚಿಸಿಕೊಳ್ಳಬೇಕು, ಅದರಿಂದ ನಮ್ಮ ದೈನಂದಿನ ಜೀವನವನ್ನು ಹೇಗೆ ಸುಖಮಯ ಮಾಡಿಕೊಳ್ಳಬಹುದು ಎನ್ನುವ ನಿಟ್ಟಿನಲ್ಲಿ ಭಾರತೀಯ ಬಾಹ್ಯಾಕಾಶ ಸಂಸ್ಥೆಯೂ ಅನೇಕ ವೈಜ್ಞಾನಿಕ ಪ್ರಯತ್ನಗಳನ್ನು ಮಾಡಿದೆ. ಈ ಕಾರಣಕ್ಕೆ ಭೂಮಿಯಿಂದ ಮುಗಿಲಿಗೆ ಅನೇಕ ಉಪಗ್ರಹಗಳನ್ನು ಕಳುಹಿಸಿ, ಇಲ್ಲಿ ನಡೆಯುತ್ತಿರುವ ಪ್ರಾಕೃತಿಕ ವಿದ್ಯಮಾನಗಳನ್ನು ಸಂಬಂಧಪಟ್ಟವರ ಗಮನಕ್ಕೆ ತರುತ್ತಿದೆ ಎಂದು ಹೇಳಿದರು.

ಭೂಮಿಯ ಮೇಲೆ ಆಗುವ ಪರಿಸರ ಮಾಲಿನ್ಯದ ಪ್ರಮಾಣ ತಿಳಿಯಲು, ಪರಿಹಾರೋಪಾಯಗಳನ್ನು ಕಂಡುಕೊಳ್ಳಲು, ರೈತರ ಜಮೀನಿನಲ್ಲಿರುವ ನೀರಿನ ತೇವಾಂಶ, ಭೂಮಿಯ ಗುಣಮಟ್ಟ, ಅಲ್ಲಿ ಯಾವ ರೀತಿಯ ಬೆಳೆ ಬೆಳೆಯಬಹುದು ಎನ್ನುವ ಮೊದಲಾದ ಮಾಹಿತಿಗಳನ್ನು ಪತ್ತೆ ಮಾಡುವುದು ಬಾಹ್ಯಾಕಾಶ ಉಪಗ್ರಹಗಳ ಮೂಲಕ ಸಾಧ್ಯವಾಗುತ್ತಿದೆ ಎಂದರು.


ಮನುಷ್ಯರು ವೈಜ್ಞಾನಿಕವಾಗಿ ಎಷ್ಟೇ ಮುಂದುವರೆದಿದ್ದರೂ ಇಂದು ಇಡೀ ಜಗತ್ತು ಕೋವಿಡ್-19ರ ಪ್ರಕೋಪಕ್ಕೆ ಒಳಗಾಗಿ ತತ್ತರಿಸುತ್ತಿದೆ. ಇಂಥ ಪ್ರಾಕೃತಿಕ ವಿಕೋಪಗಳನ್ನು ಯಾವ ರೀತಿ ಎದುರಿಸಬಹುದು, ಯಾವ ರೀತಿ ಕಡಿಮೆ ಮಾಡಬಹುದು ಎನ್ನುವುದನ್ನು ಅರಿಯಲು ವೈಜ್ಞಾನಿಕ ತಂತ್ರಜ್ಞಾನ ಸಹಾಯಕ್ಕೆ ಬರುತ್ತಿದೆ. ಮಹಾಮಾರಿಯ ಸಂದರ್ಭದಲ್ಲಿ ಪ್ರಕೃತಿಯನ್ನು ಗೌರವಿಸುವ, ಪ್ರಕೃತಿ ಪ್ರಕೋಪಕ್ಕೆ ಹೋಗದಂತೆ ನಮ್ಮ ಬೆಳವಣಿಗೆಗಳನ್ನು ಹಿತಮಿತವಾಗಿ ನಡೆಸುವುದರ ಕಡೆ ಮನುಷ್ಯ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದರು.

**'ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ' ಎನ್ನುವುದು ಈ ವರ್ಷದ ನಾಟಕೋತ್ಸವದ ಧ್ಯೇಯ ವಾಕ್ಯ:** 'ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ' ಎನ್ನುವುದು ಈ ವರ್ಷದ ನಾಟಕೋತ್ಸವದ ಧ್ಯೇಯ ವಾಕ್ಯವಾಗಿದೆ ಎಂದು ರಾಷ್ಟ್ರೀಯ ಅಂತರ್ಜಾಲ ನಾಟಕೋತ್ಸವದ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ತಿಳಿಸಿದರು.

ಹಿಂದಣ ಹೆಜ್ಜೆ ಎಂದರೆ ಹಿಂದಿನ ಇತಿಹಾಸ ಮತ್ತು ವ್ಯಕ್ತಿಗತ ಅನುಭವಕ್ಕೆ ಸಂಬಂಧಿಸಿದ್ದು. ನೋಡುವುದು ಬಹಿರಂಗಕ್ಕೆ ಸಂಬಂಧಿಸಿದ್ದು. ಕಾಣುವುದು ಅಂತರಂಗಕ್ಕೆ ಸಂಬಂಧಿಸಿದ್ದು. ಹೊರಗೆ ನೋಡುವುದು ಅನುಭವ. ಒಳಗೆ ಕಾಣುವುದು ದರ್ಶನ ಅಥವಾ ಅನುಭಾವ. ಅನುಭವ ಯಾರಿಗೆ ಬೇಕಾದರೂ ಆಗಬಹುದು. ದರ್ಶನ ಎಲ್ಲರಿಗೂ ಸಾಧ್ಯವಾಗದು. ಶರಣರೆಲ್ಲರೂ ಲೌಕಿಕದ ಮೂಲಕ ಅಲೌಕಿಕ ಅನುಭವ ಪಡೆದು ಇಹ, ಪರದ ಅಭ್ಯುದಯ ಮಾಡಿಕೊಂಡವರು. ಶರಣರ ಪಥದಲ್ಲಿ ಸಾಗಿದಾಗ ಆತ್ಮ ಕಲ್ಯಾಣದ ಜೊತೆಗೆ ಲೋಕಕಲ್ಯಾಣವೂ ಸಾಧ್ಯವಾಗುವುದು ಎಂದು ವಿವರಿಸಿ ಹೇಳಿದರು.

ಅತಿಥಿಗಳಾಗಿ ಭಾಗವಹಿಸಿದ್ದ ಪ್ರವಾಸೋದ್ಯಮ ಸಚಿವ ಸಿ.ಟಿ. ರವಿ ಮಾತನಾಡಿದರು. 'ಎಳೆಯ ಮನ ಸಾಹಿತ್ಯ ವನ' ಆಲೋಚನೆಯಡಿ ಸಂಗ್ರಹಿಸಿದ್ದ ಮಕ್ಕಳ ಕವನ ಸಂಕಲನ 'ಎಳೆ ಚಿಗುರು' ಕೃತಿಯನ್ನು ಶಾಸಕ ಗೂಳಿಹಟ್ಟಿ ಡಿ. ಶೇಖರ್ ಲೋಕಾರ್ಪಣೆಗೊಳಿಸಿದರು. ಕೃತಿಯ ಸಂಪಾದಕ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಲ್. ಜಯಪ್ಪ ಕೃತಿ ಕುರಿತು ಮಾತನಾಡಿದರು.

### ಸಾಣೇಹಳ್ಳಿ ನಾಟಕೋತ್ಸವ ನಾಡಹಬ್ಬ ಇದ್ದಂತೆ: ಸಿಎಂ



ಸಾಣೇಹಳ್ಳಿ ಸುಮಾರು 350 ಮನೆಗಳಿರುವ ಪುಟ್ಟ ಹಳ್ಳಿ. ಆದರೆ ಅದು ಇಂದು ಕರ್ನಾಟಕದ ಮನೆ-ಮಾತಾಗಿದೆ. ಅದಕ್ಕೆ ಕಾರಣ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳ ರಂಗಾಸಕ್ತಿ. ಅವರ ಗುರುಗಳಾಗಿದ್ದ ಪೂಜ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ಕರ್ನಾಟಕದ ಮಠಾಧೀಶರಲ್ಲೇ ಕ್ರಾಂತಿಕಾರಿಗಳಾಗಿದ್ದರು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗ ಮಿಸಿದ್ದ ಅವರು, ನಾಟಕೋತ್ಸವಕ್ಕೆ ಹತ್ತಾರು ಜಿಲ್ಲೆಯಿಂದ ಹತ್ತಾರು ಸಾವಿರ ಜನ ಪ್ರತಿದಿನ ಬರುತ್ತಾರೆ. ಆದರೆ ಈ ವರ್ಷ ಕೊರೊನಾ ಕಾರಣದಿಂದ ಕಾರ್ಯಕ್ರಮದ ಸ್ವರೂಪ ಸ್ವಲ್ಪ ಬದಲಾಗಿದೆ. ಅಂತರ್ಜಾಲದ ಮೂಲಕ ಈ ನಾಟಕೋತ್ಸವ ನಡೆಯುತ್ತಿದೆ. ಪಂಡಿತಾರಾಧ್ಯ ಸ್ವಾಮಿಗಳವರು ಏನೇ ಮಾಡಿದರೂ ಅದರಲ್ಲಿ ಒಂದು ಹೊಸತನ ಇದ್ದೇ ಇರುತ್ತದೆ ಎನ್ನುವುದನ್ನು ಕರ್ನಾಟಕದ ಜನರು ಬಲ್ಲರು. ಕಳೆದ ವರ್ಷ ಅವರು ಕರ್ನಾಟಕದ 30 ಜಿಲ್ಲಾ ಕೇಂದ್ರಗಳಲ್ಲಿ ಮಾಡಿದ 'ಮತ್ತೆ ಕಲ್ಯಾಣ' ಅಭಿಯಾನ ವಿಶಿಷ್ಟವಾದುದು. ಶರಣರ ಸಂದೇಶವನ್ನು ಸಾರುವಲ್ಲಿ ಶ್ರೀಗಳು ಹೀಗೆ ಹೊಸ ಹೊಸ ಯೋಜನೆ ಗಳನ್ನು ಹಾಕಿಕೊಳ್ಳುತ್ತಾ ಬಂದಿದ್ದಾರೆ.

ಸಾಣೇಹಳ್ಳಿಯ ನಾಟಕೋತ್ಸವ ಒಂದು ನಾಡಹಬ್ಬ ಇದ್ದಂತೆ. ಅಲ್ಲಿ ನಡೆಯುವ ನಾಟಕೋತ್ಸವಕ್ಕೆ ಒಮ್ಮೆ ಹೋಗಿ ಬಂದರೆ ಅಲ್ಲಿಯ ಶಿಸ್ತು, ಅಚ್ಚುಕಟ್ಟುತನ, ಕಾರ್ಯಕ್ರಮದ ಸ್ವರೂಪ, ಮಕ್ಕಳ ನೃತ್ಯರೂಪಕಗಳು, ಸುಶ್ರಾವ್ಯವಾದ ವಚನ ಸಂಗೀತ, ನಾಟಕಗಳು ನಮ್ಮೆಲ್ಲ ನೋವುಗಳನ್ನು ಮರೆಸುತ್ತವೆ, ಮತ್ತೆ ಮತ್ತೆ ಇಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎನ್ನುವ ಆಶಾಭಾವನೆ ಮೂಡಿಸುತ್ತವೆ. ಈ ನಾಟಕೋತ್ಸವ ಇನ್ನೂ ಫಲಪ್ರದವಾಗಿ ನಡೆಯಲಿ, ನಮ್ಮ ಸರ್ಕಾರ ಬೇಕಾದ ನೆರವನ್ನು ಖಂಡಿತಾ ನೀಡುತ್ತದೆ ಎನ್ನುವ ಭರವಸೆಯನ್ನು ನೀಡುವೆ ಎಂದರು.

## ಅನರ್ಬ್ ಬಂಧನ ಖಂಡಿಸಿ ಪ್ರತಿಭಟನೆ




ದಾವಣಗೆರೆ, ನ.7- ರಾಷ್ಟ್ರವಾದಿ ಪತ್ರಕರ್ತ ಅನರ್ಬ್ ಗೋಸ್ವಾಮಿ ಅವ ರನ್ನು ಅಸಂವಿಧಾನಿಕವಾಗಿ ಬಂಧಿಸಿರುವುದನ್ನು ಖಂಡಿಸಿ, ನಗರದಲ್ಲಿ ಹಿಂದೂ ಜಾಗರಣ ವೇದಿಕೆ ವತಿಯಿಂದ ನಿನ್ನೆ ಪ್ರತಿಭಟನೆ ನಡೆಸಲಾಯಿತು.

ಜಯದೇವ ವೃತ್ತದಲ್ಲಿ ಸಂಜೆ ಜಮಾಯಿಸಿದ್ದ ವೇದಿಕೆ ಪದಾಧಿಕಾರಿಗಳು, ಮಹಾರಾಷ್ಟ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ವೇದಿಕೆಯ ವಿಭಾಗ ಸಂಪರ್ಕ ಪ್ರಮುಖ್ ಸತೀಶ್ ಪೂಜಾರಿ, ಪ್ರಾಂತ ಅಧ್ಯಕ್ಷ ಎಸ್. ಜಯಕುಮಾರ್, ವಿನಾಯಕ ರಾನಡೆ, ಜಯಣ್ಣ, ಗಣೇಶ್, ಕಲ್ಲೇಶ್, ವೀರೇಶ್, ಮಂಜುನಾಥ್, ಚೇತನ್, ಯೋಗೇಶ್, ಗಣೇಶ್, ಎಸ್. ಕುಮಾರ, ಕಿರಣ್, ದ್ಯಾಮೇಶ್, ಕೃಷ್ಣಮೂರ್ತಿ, ರಂಗಸ್ವಾಮಿ, ಅಣ್ಣಪ್ಪ, ನಂದಕುಮಾರ್, ನಾಗರಾಜ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಅಂಗಡಿಗಳು-ಮಾಲ್‌ಗಳಿಗೆ ದಿಢೀರ್ ಭೇಟಿ



**ಪಾಲಿಕೆ ಆಯುಕ್ತರ ನೇತೃತ್ವದಲ್ಲಿ ಕೋವಿಡ್ ಮಾರ್ಗಸೂಚಿಗಳ ಪರಿಶೀಲನೆ**

ದಾವಣಗೆರೆ, ನ.7- ಕೋವಿಡ್-19 ಮಾರ್ಗ ಸೂಚಿಗಳನ್ನು ಅನುಸರಿಸುತ್ತಿರುವ ಬಗ್ಗೆ ನಗರದ ಹದಡಿ ರಸ್ತೆಯಲ್ಲಿನ ಹಲವು ಅಂಗಡಿಗಳು ಹಾಗೂ ಶಾಪಿಂಗ್ ಮಾಲ್ ಗಳಿಗೆ ನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ ನೇತೃತ್ವದಲ್ಲಿ ಪಾಲಿಕೆ ಆರೋಗ್ಯಾಧಿಕಾರಿಗಳ ತಂಡದಿಂದ ನಿನ್ನೆ ದಿಢೀರ್ ಭೇಟಿ ನೀಡಿ ಪರಿಶೀಲಿಸಲಾಯಿತು.

ಪರಿಶೀಲನೆ ಸಮಯ ದಲ್ಲಿ ಸಾರ್ವಜನಿಕರಿಗೆ ಸ್ಯಾನಿಟೈಸರ್ ನೀಡುತ್ತಿರುವ ಬಗ್ಗೆ, ಮಾಸ್ಕ್ ಧರಿಸಿರುವ ಬಗ್ಗೆ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಂಡಿ ರುವ ಬಗ್ಗೆ ಪರಿಶೀಲಿಸಿ ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡು ದಂಡ ವಿಧಿಸಲಾಯಿತು. ಕೋವಿಡ್-19ರ ಮಾರ್ಗ ಸೂಚಿಗಳನ್ನು ಅನುಸರಿಸದಿದ್ದಲ್ಲಿ ಅಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚಿಸಲಾಗುವುದು ಎಂದು ಆಯುಕ್ತರು ಅಂಗಡಿ ಮಾಲೀಕರಿಗೆ ಎಚ್ಚರಿಕೆ ನೀಡಿದ್ದಾರೆ.

ಆರೋಗ್ಯಾಧಿಕಾರಿಗಳು, ಕಂದಾಯ ಅಧಿಕಾರಿಗಳು ಹಾಗೂ ಆರೋಗ್ಯ ನಿರೀಕ್ಷಕರು ಭಾಗವಹಿಸಿದ್ದರು.

## ನಗರದಲ್ಲಿಂದು ಶಿವಸಿಂಪಿ ಸಮಾಜದಿಂದ ರಾಜ್ಯೋತ್ಸವ

ಜಿಲ್ಲಾ ಶಿವಸಿಂಪಿ ಸಮಾಜದ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಇಂದು ಮಧ್ಯಾಹ್ನ 12.30ಕ್ಕೆ ಸಮಾಜದ ಕಚೇರಿಯಲ್ಲಿ ಆಚರಿಸಲಾಗುವುದು ಎಂದು ಸಮಾಜದ ಕಾರ್ಯದರ್ಶಿ ಪ್ರಕಾಶ್ ಬೂಸ್ನೂರ್ ತಿಳಿಸಿದ್ದಾರೆ.

ಶ್ರೀ ಬಸವಪ್ರಭು ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಲಿದ್ದಾರೆ. ಚಿತ್ರದುರ್ಗ ಮುರುಘಾ ಮಠದಲ್ಲಿ ಈಚೆಗೆ ನಡೆದ ಶರಣ ಸಂಸ್ಕೃತಿ ಉತ್ಸವದಲ್ಲಿ ಚಿತ್ರದುರ್ಗದ ಶಿವಸಿಂಪಿ ಸಮಾಜದ ಹಿರಿಯರೂ, ಮುಖಂಡರೂ ಆದ ಷಣ್ಮುಖಪ್ಪ ಅವರಿಗೆ 'ಮುರುಘಾ ಶ್ರೀ ಪ್ರಶಸ್ತಿ' ನೀಡಲಾಗಿದ್ದು, ಅವರನ್ನು ಈ ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಗುವುದು.

## ನಗರದಲ್ಲಿ ಇಂದು ಮಹಾಲಕ್ಷ್ಮಿ ಕ್ರೆಡಿಟ್ ಸೊಸೈಟಿ ಸಭೆ

ಮಹಾಲಕ್ಷ್ಮಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ವಾರ್ಷಿಕ ಮಹಾಸಭೆಯು ಇಂದು ಮಧ್ಯಾಹ್ನ 12.15ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಕೆ.ಎನ್. ಶಿವಲಿಂಗಪ್ಪ ವಹಿಸುವರು.

## ವೀರಶೈವ ಮಹಾಸಭಾದ ನಗರ ಯುವ ಘಟಕದ ಅಧ್ಯಕ್ಷರಾಗಿ ಶಂಭು ಉರೇಕೊಂಡಿ





ದಾವಣಗೆರೆ, ನ.7- ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ದೇವಮನಿ ಶಿವಕುಮಾರ್ ಅವರ ಆದೇಶದ ಮೇರೆಗೆ ಮಹಾಸಭಾದ ಜಿಲ್ಲಾ ಯುವ ಘಟಕದ ಅಧ್ಯಕ್ಷ ಆರ್.ಟಿ. ಪ್ರಶಾಂತ್ ಹಾಗೂ ನಗರ ಯುವ ಘಟಕದ ಅಧ್ಯಕ್ಷ ಶಂಭು ಉರೇಕೊಂಡಿ ಅವರುಗಳು ನಗರ ಯುವ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ನೇಮಕ ಮಾಡಿದ್ದಾರೆ.

ಯುವ ಘಟಕಕ್ಕೆ ಶಂಭು ಎಸ್.ಉರೇಕೊಂಡಿ ಅಧ್ಯಕ್ಷರಾಗಿದ್ದು, ಅಭಿಷೇಕ್ ಪಿ.ಎಳೆಹೊಳೆ, ಸಂಜಯ್ ಚಾರ್ಮನಿ, ರಾಜು ನೀಲಗುಂದ, ಅನಿಲ್‌ಗೌಡ, ಕಿರಣ್, ಗುರುಸೋಗಿ ಉಪಾಧ್ಯಕ್ಷರುಗಳಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಗಳಾಗಿ ಶ್ರೀಕಾಂತ್ ನೀಲಗುಂದ, ಅವಿನಾಶ್ ಬಂಡೋಳ, ಖಜಾಂಚಿ ದರ್ಶನ್ ಕೆ.ಬಿ. ಶಾಮನೂರು, ಸಂಘಟನಾ ಕಾರ್ಯದರ್ಶಿಗಳಾಗಿ ರತನ್ ಶಿವಣ್ಣ, ಅಖಿಲೇಶ್ ಕೋಗುಂಡಿ, ನಾಗರಾಜ್ ಬೆಳವನೂರು, ಆರ್.ಸಂಜಯ್, ಗಣೇಶ್ ಹಾದಿಮನೆ, ಸಂತೋಷ, ಹರೀಶ್. ಕಾರ್ಯದರ್ಶಿಗಳಾಗಿ ಕೆ.ಬಿ. ನರೇಂದ್ರ, ಎಂ.ಎನ್. ವಿನಯ್‌ಕುಮಾರ್, ಕಾರ್ತಿಕ್ ಹಿರೇಮಠ್, ಪ್ರತೀಕ್ ಕಂಚಿಕೆರೆ, ಹಿತೇಶ್ ಪ್ರಸನ್ನ, ಮಯೂರ್ ಅಕ್ಕಮ್ಮನವರ್, ಅಶೋಕ್ ಮಹಾಂತ್ ಶೆಟ್ಟರ್, ಎ.ವಿ.ನಾಗರಾಜು, ಚೇತನ್, ಅಶೋಕ್ ನೇಮಕಗೊಂಡಿದ್ದಾರೆ.

ನಿರ್ದೇಶಕರುಗಳು : ರವಿತೇಜ, ಜಿ.ಡಿ. ಅರುಣ್, ಶಿವರಾಜ್ ಬಾವಿಕಟ್ಟಿ, ಮಂಜು ಕುಂದುವಾಡ, ರಜತ್ ಪಟೇದ, ಪ್ರದೀಪ್, ವಿಜಯ್, ತಿಪ್ಪೇಶ್, ಬಸವನಗೌಡ, ವಿಶ್ವನಾಥ್, ದರ್ಶನ್, ವಿರೇಶ್, ಭರತ್, ಶಿವಕುಮಾರ್, ಕೊಟ್ರೇಶ್, ಗಣೇಶ್, ಅಮರೇಶ್, ಸಚಿನ್.

## ಜಿ.ಎಂ.ಐ.ಟಿ. ಕಾಲೇಜಿಗೆ ಪ್ರಶಸ್ತಿ



ದಾವಣಗೆರೆ, ನ. 7- ನಗರದ ಜಿ.ಎಂ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ ಮತ್ತು ಉದ್ಯೋಗಾಧಿಕಾರಿಗಳಿಗೆ ದಿ ಗ್ಲೋರಿಯಸ್ ಆರ್ಗನೈಸೇಷನ್ ಫಾರ್ ಅಗ್ಜಿಲರೇಟೆಡ್ ಲಿಟರಸಿ ವತಿಯಿಂದ ನೀಡಲಾಗುವ ಐಕೊನಿಕ್ ಎಜುಕೇಷನಿಸ್ಟ್ ಅವಾರ್ಡ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಜಿ.ಎಂ.ಐ.ಟಿ ಕಾಲೇಜಿನ ಪ್ರಾಂಶುಪಾಲ ಡಾ. ವೈ. ವಿಜಯ ಕುಮಾರ್ ಅವರಿಗೆ 'ದಿ ಬೆಸ್ಟ್ ಪ್ರಿನ್ಸಿಪಾಲ್ ಅಂಡ್ ಹೈಯರ್ ಎಜುಕೇಷನಲ್ ಡೆವಲಪ್‌ಮೆಂಟ್ ಸರ್ವೀಸಸ್ ಪ್ರಶಸ್ತಿ' ಮತ್ತು ಉದ್ಯೋಗಾಧಿಕಾರಿ ಟಿ.ಆರ್. ತೇಜಸ್ವಿ ಕಟ್ಟಿಮನಿ ಅವರಿಗೆ 'ದಿ ಮೋಸ್ಟ್ ಪ್ರೊಮಿಸಿಂಗ್ ಎಜುಕೇಷನಿಸ್ಟ್ ಅಂಡ್ ಎಜುಕೇಷನಲ್ ಡೆವಲಪ್‌ಮೆಂಟ್ ಸರ್ವೀಸಸ್ ಪ್ರಶಸ್ತಿ' ಲಭಿಸಿದೆ.

## ಮಲೇಬೆನ್ನೂರು : ಪುರಸಭೆ ಅಧ್ಯಕ್ಷರಿಂದ ಅಧಿಕಾರ ಸ್ವೀಕಾರ



ಮಲೇಬೆನ್ನೂರು, ನ.7- ಇಲ್ಲಿನ ಪುರಸಭೆ ಕಾರ್ಯಾಲಯದಲ್ಲಿ ಇಂದು ಬೆಳಿಗ್ಗೆ ನೂತನ ಅಧ್ಯಕ್ಷೆ ಶ್ರೀಮತಿ ನಾಹೀದಾ ಅಂಜುಂ ಸೈಯದ್ ಇಸ್ರಾರ್ ಮತ್ತು ಉಪಾಧ್ಯಕ್ಷೆ ಶ್ರೀಮತಿ ಅಂಜಿನಮ್ಮ ವಿಜಯಕುಮಾರ್ ಅವರು ಅಧಿಕಾರ ಸ್ವೀಕರಿಸಿದರು. ಪುರಸಭೆ ಸದಸ್ಯರಾದ ಮಾಸಣಗಿ ಶೇಖರಪ್ಪ, ಯುಸೂಫ್ ಮತ್ತಿತರರು ಈ ವೇಳೆ ಹಾಜರಿದ್ದರು.

## ರಸ್ತೆ ಅಪಘಾತದಲ್ಲಿ ಮಹಿಳೆ ಸಾವು

**ಅರೆ ಪ್ರಜ್ಞಾವಸ್ಥೆಯಲ್ಲಿದ್ದ ಕೂಲಿಕಾರರ ಜೀವ ಉಳಿಸಲು ಮುಂದಾದ ಲಾರಿ ಕ್ಲೀನರ್**


ದಾವಣಗೆರೆ, ನ.7- ದ್ವಿಚಕ್ರ ವಾಹನದಲ್ಲಿ ಸಾಗುವಾಗ ಅಪಘಾತವಾಗಿ ಅರೆ ಪ್ರಜ್ಞಾವಸ್ಥೆಯಲ್ಲಿ ರಸ್ತೆಯಲ್ಲಿ ಬಿದ್ದಿದ್ದ ಇಬ್ಬರು ಕೂಲಿ ಕಾರ್ಮಿಕರ ಜೀವ ಉಳಿಸಲು ಪ್ರಯತ್ನಿಸುವ ಮೂಲಕ ಲಾರಿ ಕ್ಲೀನರ್ ಓರ್ವ ಮಾನವೀಯತೆ ಮೆರೆದಿದ್ದು, ಅಪಘಾತದಿಂದ ಕೂಲಿ ಕಾರ್ಮಿಕ ಮಹಿಳೆ ಬದುಕುಳಿಯದ ಘಟನೆ ನಗರದಲ್ಲಿ ನಡೆದಿದೆ.

ಶಾಮನೂರು ಗ್ರಾಮದ ಮದಕರಿ ವೃತ್ತದ ವಾಸಿ ಕೂಲಿ ಕಾರ್ಮಿಕರಾದ ನಿಂಗಮ್ಮ (37) ಮೃತಪಟ್ಟಿದ್ದು, ಈಕೆ ಅದೇ ಗ್ರಾಮದ, ಸಂಬಂಧಿ ಜಿ.ಎಸ್. ರವಿ ಜೊತೆಗೆ ದ್ವಿಚಕ್ರ ವಾಹನದಲ್ಲಿ ನಿನ್ನೆ ಬೆಳಿಗ್ಗೆ ಶಾಮನೂರು ಹತ್ತಿರ ಬರುವ ಕೋಳಿ ಫಾರಂ ಮುಂಭಾಗದ ಮಿಟ್ಲಕಟ್ಟೆ ರಸ್ತೆಯಲ್ಲಿ ಸಾಗುವಾಗ ಅಪಘಾತವಾಗಿ ರಸ್ತೆಯಲ್ಲಿ ಅರೆ ಪ್ರಜ್ಞಾವಸ್ಥೆಯಲ್ಲಿ ಬಿದ್ದಿದ್ದರು. ಸಾಲಕಟ್ಟೆ ಗ್ರಾಮದಿಂದ ಶಾಮನೂರಿಗೆ ಲಾರಿಯಲ್ಲಿ ಸಾಗುತ್ತಿದ್ದ ಅದೇ ಗ್ರಾಮದ ಲಾರಿ ಕ್ಲೀನರ್ ಹೆಚ್. ಸುರೇಶ ಇದನ್ನು ಕಂಡು ಆಟೋದಲ್ಲಿ ಚಿಕಿತ್ಸೆಗಾಗಿ ಈ ಇಬ್ಬರನ್ನು ಸಿಜಿ ಆಸ್ಪತ್ರೆಗೆ ದಾಖಲಿಸಿದ್ದು, ನಿಂಗಮ್ಮ ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಳು.

ಅಜಾಗರೂಕತೆಯ ಚಾಲನೆಯೋ ಅಥವಾ ಯಾವುದೋ ವಾಹನದ ಡಿಕ್ಕಿಯಿಂದಲೋ ಈ ಅಪಘಾತ ಸಂಭವಿಸಿದೆ ಎಂದು ಶಂಕಿಸಲಾಗಿದೆ.

ಈ ಸಂಬಂಧ ದಕ್ಷಿಣ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಪೂಜಾರ್ ಗೌರಮ್ಮ ನಿಧನ



ದಾವಣಗೆರೆ ದೇವರಾಜ್ ಅರಸ್ ಬಡಾವಣೆ ಸಿ ಬ್ಲಾಕ್, 3ನೇ ಮೇನ್, 2ನೇ ಕ್ರಾಸ್ , ಎ.ಸಿ.ಎಂ.ಸ್ಕೂಲ್ ಹಿಂಭಾಗದ ವಾಸಿ ದಿ॥ **ದುಗ್ಗಪ್ಪನವರ ಧರ್ಮಪತ್ನಿ ದುಗ್ಗಮ್ಮ ದೇವಸ್ಥಾನದ ಪೂಜಾರ್ ಶ್ರೀಮತಿ ಗೌರಮ್ಮ** (90) ಅವರು ದಿನಾಂಕ 07-11-2020ರ ಶನಿವಾರ ರಾತ್ರಿ 8.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಓರ್ವ ಪುತ್ರ, 5 ಜನ ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 08-11-2020ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ನಗರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

**- ದುಃಖತಪ್ತ ಕುಟುಂಬ ವರ್ಗ, ಮೊ. 9448128308**

### ಜಿ.ಆರ್. ಬಸಪ್ಪ ನಿಧನ



ದಾವಣಗೆರೆ ತರಳಬಾಳು ಬಡಾವಣೆ, 7ನೇ ಕ್ರಾಸ್, ವಾಣಿ ರೈಸ್‌ಮಿಲ್ ಹಿಂಭಾಗ, (#1042/23) ಕಲ್ಲೇಶ್ವರ ನಿಲಯದ ವಾಸಿ ಜಿ. ರಾಮಪ್ಪ ಬಾಡ ಇವರ ಪುತ್ರ **ಶ್ರೀ ಜಿ.ಆರ್. ಬಸಪ್ಪ** (78 ವರ್ಷ) ಅವರು ದಿನಾಂಕ 7.11.2020ರ ಶನಿವಾರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 8.11.2020ರ ಭಾನುವಾರ ಮಧ್ಯಾಹ್ನ 12.30ಕ್ಕೆ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ. : 7975841748, 9448697938, 9886339984**

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 05-11-2020ರ ಗುರುವಾರ ನಿಧನರಾದ ನಮ್ಮ ಆತ್ಮೀಯರು ಮತ್ತು ಶ್ರೀ ಸುಪಾರ್ಶ್ವನಾಥ ಜೈನ ಶ್ವೇತಾಂಬರ್ ಮೂರ್ತಿ ಪೂಜಕ್ ಸಂಘದ ಟ್ರಸ್ಟಿಗಳೂ ಆದ

**ಶ್ರೀ ಸಂಘವಿ ಶೇಜ್‌ಮಲ್ ದೀಪ್‌ಚಂದ್‌ಜೀ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರೀ ಮಂಜುನಾಥ ಗನ್ನಿ ಮರ್ಚೆಂಟ್ಸ್**
**ಷಾ ಸರ್ದಾರ್ ಮಲ್ ಕಸ್ತೂರ್ ಚಂದ್‌ಜೀ**

॥ ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ॥

### ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ




ದಾವಣಗೆರೆ ಜಿ॥, ತಾ॥, ಕಕ್ಕರಗೊಳ್ಳ ಗ್ರಾಮದ ವಾಸಿ **ರಾಮನಗೌಡ್ರು ಶ್ರೀ ದಿ॥ ಆರ್. ಚನ್ನಬಸಪ್ಪ, ನಿವೃತ್ತ ಶಿಕ್ಷಕರು, ಶ್ರೀಮತಿ ಕೊಟ್ರಮ್ಮ ಮತ್ತು ಮಕ್ಕಳು** ಮಾಡುವ ವಿಜ್ಞಾಪನೆಗಳು.

ತಾ॥ 01.11.2020 ನೇ ಭಾನುವಾರ ರಾತ್ರಿ 9-00ಕ್ಕೆ ನಮ್ಮ ಮಗ ಆರ್.ಸಿ. ನಾಗರಾಜ ಇವರ ಧರ್ಮಪತ್ನಿ **ಶ್ರೀಮತಿ ಎಂ.ಸುಧಾ** ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಸಮಾರಾಧನೆ' ಯನ್ನು ದಿನಾಂಕ : 09.11.2020ನೇ ಸೋಮವಾರ ಬೆಳಿಗ್ಗೆ 11-00 ಕ್ಕೆ ದಾವಣಗೆರೆ ತಾ॥, ಕಕ್ಕರಗೊಳ್ಳ ಗ್ರಾಮದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ರಾಮನಗೌಡ್ರು ಶ್ರೀಮತಿ ಕೊಟ್ರಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ರಾಮನಗೌಡ್ರು ವಂಶಸ್ಥರು, ಹಳೇಬಾತಿ ವಂಶಸ್ಥರು, ಕಕ್ಕರಗೊಳ್ಳ**


ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

### ಬಾವಿಕಟ್ಟೆ ನಾಗರಾಜಪ್ಪ ನಿಧನ



ಹರಿಹರ ತಾಲ್ಲೂಕು ಕುಣೆಬೆಳಕೆರೆ ಗ್ರಾಮದ ವಾಸಿ ಬಾವಿಕಟ್ಟೆ ದಿ. ಕಾಡಪ್ಪನವರ ಧರ್ಮಪತ್ನಿ ದಿ. ಮಹದೇವಮ್ಮನವರ ದ್ವಿತೀಯ ಪುತ್ರನಾದ ಶ್ರೀ ನಾಗರಾಜಪ್ಪ (64) ಇವರು ದಿನಾಂಕ 7.11.2020 ರ ಶನಿವಾರ ಮಧ್ಯಾಹ್ನ 2.15ಕ್ಕೆ ನಿಧನರಾಗಿರುತ್ತಾರೆ, ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ 8.11.2020ರ ಭಾನುವಾರ ಬೆಳಿಗ್ಗೆ 10.30ಕ್ಕೆ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು.

### ಅವಲಕ್ಕಿ ವ್ಯಾಪಾರಿ ಬೂಸ್ನೂರು ಜಯಪ್ಪ ನಿಧನ



ದಾವಣಗೆರೆ ಆನೆಕೊಂಡ ಕೆರೆ ಮರಡಿ ಬಸವೇಶ್ವರ ದೇವಸ್ಥಾನದ ಎದುರು ವಾಸಿ ಬೂಸ್ನೂರು ಜಯಪ್ಪ (71) ಅವರು, ದಿನಾಂಕ 7.11.2020 ರ ಶನಿವಾರ ರಾತ್ರಿ 11.00 ಗಂಟೆಗೆ ನಿಧನರಾದರು. ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 8.11.2020 ರ ಭಾನುವಾರ ಮಧ್ಯಾಹ್ನ 2.00 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.




## ಕೋವಿಡ್ 19 ಜಾಗೃತಿ ಜಾಥಾಕ್ಕೆ ಮೇಯರ್ ಚಾಲನೆ

ದಾವಣಗೆರೆ. ನ.7- ಕೋವಿಡ್ 19 ಜಾಗೃತಿ ಜಾಥಾಕ್ಕೆ ಕ್ಕೆ ಮಹಾನಗರ ಪಾಲಿಕೆ ಆವರಣದಲ್ಲಿ ಮೇಯರ್ ಬಿ.ಜೆ. ಅಜಯ್ ಕುಮಾರ್ ಹಸಿರು ಬಾವುಟ ತೋರಿಸುವ ಮೂಲಕ ಚಾಲನೆ ನೀಡಿದರು. ಕಡ್ಡಾಯವಾಗಿ ಪ್ರತಿಯೊಬ್ಬರೂ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವ ಮೂಲಕ ಕೊರೊನಾ ತಡೆಯಲು ಸಾರ್ವಜನಿಕರು ಸಹಕರಿಸುವಂತೆ ಮೇಯರ್ ಅಜಯ್ ಮನವಿ ಮಾಡಿದರು. ಜಾಥಾವು ಎವಿಕೆ ಕಾಲೇಜು ರಸ್ತೆ, ಜಯದೇವ ವೃತ್ತದ ಮೂಲಕ ಸಾಗಿ ಮರಳಿ ಪಾಲಿಕೆ ಆವರಣಕ್ಕೆ ಬಂದು ತಲುಪಿತು. ಸ್ಥಾಯಿ ಸಮಿತಿ ಅಧ್ಯಕ್ಷರಾದ ಜಯಮ್ಮ ಗೋಪಿನಾಯ್ಕ, ಎಸ್.ಟಿ. ವೀರೇಶ್, ಸದಸ್ಯ ಎಲ್.ಡಿ.ಗೋಣೆಪ್ಪ, ಆಯುಕ್ತ ವಿಶ್ವನಾಥ್ ಮುದಜ್ಜಿ ಮತ್ತು ಪಾಲಿಕೆ ಅಧಿಕಾರಿಗಳು ಭಾಗವಹಿಸಿದ್ದರು.

# ಮಾಹಿತಿ ತಂತ್ರಜ್ಞಾನಕ್ಕೆ ತಕ್ಕಂತೆ ಕನ್ನಡವನ್ನು ಸಜ್ಜುಗೊಳಿಸಬೇಕಿದೆ

ಬೆಂಗಳೂರು, ನ.7 - ಆಧುನಿಕ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನ ನಮ್ಮ ಬದುಕಿನಲ್ಲಿ ಶರವೇಗದಲ್ಲಿ ಆವರಿಸಿಕೊಳ್ಳುತ್ತಿದೆ ಎಂದಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅದಕ್ಕೆ ತಕ್ಕಂತೆ ನಮ್ಮ ಭಾಷೆಯನ್ನು ಸಜ್ಜುಗೊಳಿಸುವ ಅನಿವಾರ್ಯತೆ ಇದೆ ಎಂದು ಹೇಳಿದ್ದಾರೆ.

ನಗರದ ರವೀಂದ್ರ ಕಲಾ ಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ ಸಾಧಕರಿಗೆ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರ ಸ್ಥಾನ. ಕನ್ನಡವನ್ನು ನಾವು ಬೆಳೆಸಬೇಕು. ಭಾಷೆಯ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದರು.

ಕನ್ನಡದ ಸೌಂದರ್ಯ ಅದರ ಸತ್ವವನ್ನು ಕಾಪಾಡುವುದು ನಮ್ಮೆಲ್ಲರ ಹೊಣೆ ನಮ್ಮ ಮೇಲಿದೆ ಎಂದ ಮುಖ್ಯಮಂತ್ರಿಯವರು, ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾದ ಎಲ್ಲರೂ ನಾಡು ನುಡಿಗೆ ಶ್ರಮಿಸಿದ ಸಾಧಕರು ಎಂದು ಬಣ್ಣಿಸಿದರು.



ಕನ್ನಡ ಭಾಷೆಯ ಅಭಿವೃದ್ಧಿಗೆ ರಾಜ್ಯ ಸರ್ಕಾರ ಸದಾ ಬದ್ಧವಾಗಿರುತ್ತದೆ. ಕನ್ನಡ ಭಾಷೆ ಮತ್ತು ಸಾಹಿತ್ಯ ಹಾಗೂ ಕಲೆಗಳ ಬೆಳವಣಿಗೆಗೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಇದೇ ನವೆಂಬರ್‌ನಿಂದ 21ನೇ ಅಕ್ಟೋಬರ್ 31ನೇ ವರೆಗೆ ಕನ್ನಡ ಕಾಯಕ ವರ್ಷವನ್ನಾಗಿ ಆಚರಿಸಲಾಗುವುದು ಎಂದರು.

ವ್ಯವಹಾರದಲ್ಲಿ ಕನ್ನಡವನ್ನು ಬಳಸುವ ಮೂಲಕ ನಮ್ಮ ಭಾಷೆಯನ್ನು ಮತ್ತಷ್ಟು ಆಡಳಿತದಲ್ಲಿ ವಿಸ್ತರಿಸಲಾಗುವುದು. ಕನ್ನಡ ಭಾಷೆ ಹೃದಯದ ಭಾಷೆ. ವ್ಯವಹಾರದ ಭಾಷೆಯೂ ಆಗಬೇಕು. ದೈನಂದಿನ ವ್ಯವಹಾರಗಳಲ್ಲಿ ಹೆಚ್ಚು ಹೆಚ್ಚು ಕನ್ನಡ ಬಳಕೆ ಮಾಡುವಂತೆ ಕರೆ ನೀಡಿದರು.

# ನಾಳೆ ಜಗಳೂರು ಪ.ಪಂ. ಚುನಾವಣೆ

## ಬಹುಮತ ಹೊಂದಿರುವ ಬಿಜೆಪಿ : ಅಧ್ಯಕ್ಷರಾಗಿ ಆರ್.ತಿಪ್ಪೇಸ್ವಾಮಿ ಆಯ್ಕೆ ಸಂಭವ

ಜಗಳೂರು, ನ.-7 ಪಟ್ಟಣ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಕ್ಕೆ ನಾಡಿದ್ದು ದಿನಾಂಕ 9 ರ ಸೋಮವಾರ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಬಹುಮತ ಹೊಂದಿರುವ ಬಿಜೆಪಿ ಪಕ್ಷದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಆಕಾಂಕ್ಷಿಗಳು ತೆರೆಮರೆಯಲ್ಲಿ ತೀವ್ರ ಕಸರತ್ತು ನಡೆಸುತ್ತಿದ್ದಾರೆ.

ಪಟ್ಟಣ ಪಂಚಾಯ್ತಿ ಸದಸ್ಯರ ಆಯ್ಕೆ ಚುನಾವಣೆ ನಡೆದು ಸುಮಾರು 2 ವರ್ಷಗಳು ಕಳೆದ ನಂತರ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಮೀಸಲಾತಿಯನ್ನು ಸರಕಾರ ಪ್ರಕಟಿಸಿದ್ದು, ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮತ್ತು ಉಪಾಧ್ಯಕ್ಷ ಸ್ಥಾನವು ಸಾಮಾನ್ಯ ವರ್ಗದ ಮಹಿಳೆಗೆ ಮೀಸಲಾಗಿದೆ. ಪಟ್ಟಣ ಪಂಚಾಯಿತಿಯಲ್ಲಿ ಒಟ್ಟು 18 ಜನ ಸದಸ್ಯರಿದ್ದು, ಬಿಜೆಪಿ 11 ಸದಸ್ಯ ಬಲದೊಂದಿಗೆ ಬಹುಮತ ಪಡೆದಿದೆ.ಶಾಸಕರು ಹಾಗೂ ಸಂಸದರ ಮತವೂ ಸಿಗಲಿದೆ. ಉಳಿದಂತೆ 5 ಜನ ಕಾಂಗ್ರೆಸ್, ಇಬ್ಬರು ಜೆಡಿಎಸ್ ಪಕ್ಷದ ಸದಸ್ಯರಿದ್ದಾರೆ.



ಅಧ್ಯಕ್ಷ ಸ್ಥಾನವು ಸಾಮಾನ್ಯವರ್ಗಕ್ಕೆ ಮೀಸಲಾಗಿರುವುದರಿಂದ ಸಹಜವಾಗಿಯೇ ಬಿಜೆಪಿಯ ಎಲ್ಲಾ ಸದಸ್ಯರು ಅಧ್ಯಕ್ಷ ಸ್ಥಾನ ಪಡೆಯಲು ಶಾಸಕರು ಮತ್ತು ಸಂಸದರ ಬಳಿ ಪ್ರಯತ್ನ ನಡೆಸಿದ್ದಾರೆ. ಈಗಾಗಲೇ ಶಾಸಕ ರಾಮಚಂದ್ರ ಅವರು ಸದಸ್ಯರ ಸಭೆ ನಡೆಸಿ ಯಾರೂ ನನ್ನ ಮೇಲೆ ಒತ್ತಡ ಹಾಕಬಾರದು. ಪಕ್ಷದ ಎಲ್ಲಾ ಸದಸ್ಯರಿಗೂ ಸೂಕ್ತ ಸ್ಥಾನಮಾನ ನೀಡುತ್ತೇನೆ. ನಮ್ಮದೇ ಸರಕಾರವಿದೆ. ಪಟ್ಟಣ ಪಂಚಾಯ್ತಿಯಲ್ಲಿ ನಮ್ಮ ಪಕ್ಷಕ್ಕೆ ಬಹುಮತವಿದೆ. ಪಟ್ಟಣ ಅಭಿವೃದ್ದಿಗೆ ಕೆಲಸ ಮಾಡಿ ಎಂದು ತಿಳಿಸಿದ್ದಾರೆ.

ನ. 8ರಂದು ಎಲ್ಲ 11 ಜನ ಸದಸ್ಯರಿಗೆ ಪಕ್ಷದಿಂದ ವಿಪ್ ಜಾರಿಗೊಳಿಸುವ ನಿರೀಕ್ಷೆ ಇದೆ. ಪ್ರಥಮವಾಗಿ ಯಾರು ಅಧ್ಯಕ್ಷ, ಉಪಾಧ್ಯಕ್ಷರಾಗುತ್ತಾರೆ ಎಂಬುದನ್ನು ಹೈಕಮಾಂಡ್ ತೀರ್ಮಾನಿಸಿಲ್ಲ. 5 ನೇ ವಾರ್ಡಿನಲ್ಲಿ ಪರಿಶಿಷ್ಟ ವರ್ಗಕ್ಕೆ ಮೀಸಲಿರಿಸಿದ್ದ ಸ್ಥಾನದಿಂದ ಜಯಗಳಿಸಿ ಸತತ ಮೂರು ಭಾರಿ ಸದಸ್ಯರಾಗಿರುವ ಆರ್. ತಿಪ್ಪೇಸ್ವಾಮಿ, 17 ನೇ ವಾರ್ಡಿನ ಸಾಮಾನ್ಯ ಮಹಿಳೆ ಸ್ಥಾನದಿಂದ ಗೆದ್ದಿರುವ ಟಿ. ಲಲಿತ ಶಿವಣ್ಣ, 3 ನೇ ವಾರ್ಡ್‌ನ ರೇವಣ್ಣ, ಸರೋಜಮ್ಮ, ಮಂಜಮ್ಮ ಅಧ್ಯಕ್ಷ ಸ್ಥಾನದ ಪೈಪೋಟಿಯಲ್ಲಿದ್ದಾರೆ.

ಸತತ ಮೂರು ಬಾರಿ ಸದಸ್ಯರಾಗಿರುವ ಬಿಜೆಪಿ ಪಕ್ಷದ ಹಿರಿಯ ಕಾರ್ಯಕರ್ತರಾಗಿರುವ ಆರ್.ತಿಪ್ಪೇಸ್ವಾಮಿ ಅವರಿಗೆ ಅಧ್ಯಕ್ಷ ಸ್ಥಾನ ಸಿಗುವ ಸಂಭವ ಹೆಚ್ಚು ಇದೆ. ಈ ವಿಷಯದಲ್ಲಿ ಶಾಸಕ ಎಸ್.ವಿ. ರಾಮಚಂದ್ರ ಅವರ ತೀರ್ಮಾನವೇ ಅಂತಿಮವಾಗಲಿದೆ ಎಂದು ಹೇಳಲಾಗುತ್ತಿದೆ. ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಿದ್ದರೂ ಸಹ ಅಷ್ಟೇನು ಪೈಪೋಟಿ ನಡೆಯುತ್ತಿಲ್ಲ. ದಿನಾಂಕ 9 ರಂದು ನಡೆಯುವ ಚುನಾವಣೆ ಸಹಜವಾಗಿಯೇ ಕುತೂಹಲ ಮೂಡಿಸಿದೆ.

# ಸಿಗಂಧೂರು ಮೇಲುಸ್ತುವಾರಿ ಗೊಂದಲ ನಿವಾರಣೆಗೆ ಸ್ವಾಮೀಜಿಗಳ ನಿಯೋಗದಿಂದ ಮುಖ್ಯಮಂತ್ರಿ ಭೇಟಿ



ಬೆಂಗಳೂರು, ನ. 7- ಸಿಗಂಧೂರು ಗೊಂದಲ ವಿಚಾರ ಕುರಿತಂತೆ ಶಾಸಕ ಹರತಾಳು ಹಾಲಪ್ಪ ಶ್ರೀ ರೇಣುಕಾನಂದ ಸ್ವಾಮೀಜಿ ನೇತೃತ್ವದಲ್ಲಿ ಸುಮಾರು 20 ವಿವಿಧ ಜನಾಂಗಗಳ ಸ್ವಾಮೀಜಿಗಳ ನಿಯೋಗ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ದೇವಾಲಯದಲ್ಲಿ ಸದ್ಯ ಎದ್ದಿರುವ ಮೇಲುಸ್ತುವಾರಿ ಸಮಿತಿ ಕುರಿತ ಗೊಂದಲ ನಿವಾರಣೆ, ಭಕ್ತರು ನೀಡುವ ಹಣಕಾಸು, ದೇಣಿಗೆ ವಿಚಾರದಲ್ಲಿ ಪಾರದರ್ಶಕತೆ ತರುವ ಬಗ್ಗೆ ಪ್ರಮುಖವಾಗಿ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಯಿತು.

ಈ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ಬಿ. ಎಸ್.ಯಡಿಯೂರಪ್ಪ, ದೇವಾಲಯವನ್ನು ಯಾವುದೇ ಕಾರಣಕ್ಕೂ ಮುಜರಾಯಿ ವ್ಯಾಪ್ತಿಗೆ ತರುವ ಪ್ರಶ್ನೆಯೇ ಇಲ್ಲ. ಇಲ್ಲಿ ಭಕ್ತರು ನೀಡುವ ಹಣಕಾಸು ವಿಚಾರದಲ್ಲಿ ಪಾರದರ್ಶಕತೆ ತರಬೇಕು ಎಂಬುದು ಭಕ್ತರ ಇಚ್ಛೆಯಾಗಿದ್ದರಿಂದ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಲಹಾ ಸಮಿತಿ ರಚನೆ ಮಾಡಲಾಗಿದೆ. ಈಗ ರಚನೆಯಾಗಿರುವ ಸಮಿತಿಯಲ್ಲಿ ತಮ್ಮ ಮನವಿಯಂತೆ ಈಡಿಗ ಜನಾಂಗಕ್ಕೆ ಸೇರಿದ ಶ್ರೀ ರೇಣುಕಾನಂದ ಸ್ವಾಮೀಜಿ ಯವರನ್ನುಸೇರ್ಪಡೆಗೊಳಿಸಲಾಗುವುದು. ಇವರು ಕೊಡುವ ಸಲಹೆ, ಮಾರ್ಗದರ್ಶನವನ್ನು ತೆಗೆದುಕೊಂಡು ಸಮಿತಿ ಕಾರ್ಯ ಕೈಗೊಳ್ಳಲಿದೆ. ಈಗ ರಚನೆಯಾಗಿರುವ ಸಮಿತಿ ಸದ್ಯ ನಾಲ್ಕು ತಿಂಗಳವರೆಗೆ ಮುಂದುವರೆಯಲಿದೆ. ಬಳಿಕ ಸಮಿತಿ ಇರಬೇಕೋ ಅಥವಾ ಅದನ್ನು ಕೈ ಬಿಡಬೇಕೋ ಎಂಬ ಬಗ್ಗೆ ನಿರ್ಧರಿಸಲಾಗುವುದು ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದರು.

ಬಂಜಾರ ಸಮಾಜದ ಶ್ರೀ ಸೇವಾಲಾಲ್ ಸ್ವಾಮೀಜಿ, ಅರೇಮಲ್ಲಾಪುರದ ಶ್ರೀ ಪ್ರಣವಾನಂದ ಸ್ವಾಮೀಜಿ, ಭಗೀರಥ ಮಠದ ಶ್ರೀ ಪುರುಷೋತ್ತಮಪುರಿ ಸ್ವಾಮೀಜಿ, ಕುಂಚಿಟಿಗ ಗುರುಪೀಠದ ಶ್ರೀ ಶಾಂತವೀರ ಸ್ವಾಮೀಜಿ, ಹೊಸದುರ್ಗ ಕನಕ ಗುರುಪೀಠದ ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ತಿಗಳರ ಶ್ರೀ ಲಕ್ಷ್ಮೀನರಸಿಂಹ ಸ್ವಾಮೀಜಿ, ಶ್ರೀ ಮಡಿವಾಳರ ಮಾಚಿದೇವ ಸ್ವಾಮೀಜಿ, ಗಾಣಿಗರ ಶ್ರೀ ಡಾ. ಬಸವ ಕುಮಾರ ಸ್ವಾಮೀಜಿ, ಚಿತ್ರದುರ್ಗದ ಮೇದಾರ ಪೀಠದ ಸ್ವೀಮೀಜಿ, ಛಲವಾದಿ ಪೀಠದ ಶ್ರೀಗಳು ತೀರ್ಥಹಳ್ಳಿ ಮುಖಂಡರಾದ ಬೇಗುವಳ್ಳಿ ಸತೀಶ್ ಸೇರಿದಂತೆ ಅನೇಕರು ಹಾಜರಿದ್ದರು.

## ಪಂಜಾಬ್‌ನಲ್ಲಿ ಪಟಾಕಿ ಮೇಲೆ ನಿಷೇಧವಿಲ್ಲ

ನವದೆಹಲಿ, ನ. 7 – ಪಟಾಕಿಗಳ ಮೇಲೆ ನಿಷೇಧ ಹೇರುವುದಿಲ್ಲ ಎಂದು ಪಂಜಾಬ್‌ನ ಕಾಂಗ್ರೆಸ್ ಸರ್ಕಾರ ತಿಳಿಸಿದೆ.

ಅಮೃತ್‌ಸರ, ಲುಧಿಯಾನ, ಮಂಡಿ, ಪಟಿಯಾಲಾ, ಜಲಂಧರ್ ಹಾಗೂ ಖನ್ನಾ ಪ್ರದೇಗಳಲ್ಲಿ ವೈಮಾನಿಕ ಗುಣಮಟ್ಟದ ಮೇಲೆ ನಿಗಾ ವಹಿಸಲಾಗಿದೆ. ಹಬ್ಬದ ಸಂದರ್ಭಗಳಲ್ಲಿ ಪಟಾಕಿ ಹಚ್ಚುವುದರ ಮೇಲೆ ಸಮಯ ನಿರ್ಬಂಧ ಹೇರಲಾಗಿದೆ. ಈ ಹಿನ್ನೆಲೆಯಲ್ಲಿ ಪಟಾಕಿ ನಿಷೇಧದ ಅಗತ್ಯವಿಲ್ಲ ಎಂದು ರಾಜ್ಯ ಸರ್ಕಾರ ಹೇಳಿದೆ.

## ರಾಜ್ಯದ ಉಪ ಚುನಾವಣೆಗಳಲ್ಲಿ ಬಿಜೆಪಿಗೆ ಗೆಲುವು : ಮತದಾನೋತ್ತರ ಸಮೀಕ್ಷೆ

ಬೆಂಗಳೂರು, ನ. 7 - ರಾಜ್ಯದ ಎರಡೂ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಸಿ ವೋಟರ್ ಸಂಸ್ಥೆ ನಡೆಸಿದ ಮತದಾನೋತ್ತರ ಸಮೀಕ್ಷೆ ತಿಳಿಸಿದೆ.

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ಬಿಜೆಪಿ ಅಭ್ಯರ್ಥಿ ಮುನಿರತ್ನ ಅವರೇ ಮೂರನೇ ಬಾರಿ ಗೆಲುವು ಸಾಧಿಸುವ ಸಾಧ್ಯತೆ ಇದೆ. ಅವರು ಶೇ. 37.8ರಷ್ಟು ಮತ ಪಡೆದರೆ, ಕಾಂಗ್ರೆಸ್ ಅಭ್ಯರ್ಥಿ ಕುಸುಮಾ ಅವರು ಶೇ. 31.1ರಷ್ಟು ಹಾಗೂ ಜೆಡಿಎಸ್ ಅಭ್ಯರ್ಥಿ ಕೃಷ್ಣಮೂರ್ತಿ ಅವರು ಶೇ. 14ರಷ್ಟು ಮತ ಪಡೆಯಲಿದ್ದಾರೆ ಎಂದು ಸಮೀಕ್ಷೆ ಹೇಳಿದೆ. ಶಿರಾದಲ್ಲೂ ಬಿಜೆಪಿ ಮೊದಲ ಬಾರಿಗೆ ಖಾತೆ ತೆರೆಯುವ ಸಾಧ್ಯತೆ ಇದೆ. ಬಿಜೆಪಿಯ ರಾಜೇಶ್ ಗೌಡ ಶೇ. 36.6 ರಷ್ಟು ಮತ ಪಡೆದರೆ, ಕಾಂಗ್ರೆಸ್ ಅಭ್ಯರ್ಥಿ ಟಿ.ಬಿ. ಜಯಚಂದ್ರ ಅವರು 32.5 ರಷ್ಟು ಹಾಗೂ ಜೆಡಿಎಸ್ ನ ಅಮ್ಮಾಜಮ್ಮ ಅವರು ಶೇ. 17.4 ರಷ್ಟು ಮತ ಪಡೆಯುವ ಸಾಧ್ಯತೆ ಇದೆ ಎಂದು ಸಮೀಕ್ಷೆ ಹೇಳಿದೆ. ಈ ಕ್ಷೇತ್ರಗಳಿಗೆ ನವೆಂಬರ್ 3ರಂದು ಚುನಾವಣೆ ನಡೆದಿತ್ತು. ನವೆಂಬರ್ 10 ರಂದು ಉಪ ಚುನಾವಣೆಯ ಫಲಿತಾಂಶ ಪ್ರಕಟವಾಗಲಿದೆ.

## ಕೊರೊನಾ : ಜಿಲ್ಲೆಯಲ್ಲಿ 44 ಜನಕ್ಕೆ ಪಾಸಿಟಿವ್

ದಾವಣಗೆರೆ, ನ.7- ಜಿಲ್ಲೆಯಲ್ಲಿ ಶನಿವಾರ 44 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, 59 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ದಾವಣಗೆರೆ ತಾಲ್ಲೂಕಿನಲ್ಲಿ 18, ಹರಿಹರ 8, ಜಗಳೂರು 3, ಚನ್ನಗಿರಿ 6 ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ 9 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಪ್ರಸ್ತುತ ಜಿಲ್ಲೆಯಲ್ಲಿ 463 ಸಕ್ರಿಯ ಪ್ರಕರಣಗಳಿವೆ.

# ಬಿಹಾರದಲ್ಲಿ ಆರ್.ಜೆ.ಡಿ. ಮೈತ್ರಿಗೆ ಜಯಭೇರಿ

**ಮತದಾನೋತ್ತರ ಸಮೀಕ್ಷೆಗಳಲ್ಲಿ ಎನ್.ಡಿ.ಎ.ಗೆ ಹಿನ್ನಡೆ**

ನವದೆಹಲಿ, ನ. 7 – ಬಿಹಾರ ವಿಧಾನಸಭಾ ಚುನಾವಣೆ ಪೂರ್ಣಗೊಂಡಿದ್ದು, ಆರ್.ಜೆ.ಡಿ. ನೇತೃತ್ವದ ಪ್ರತಿಪಕ್ಷಗಳ ಮೈತ್ರಿಕೂಟ ಸ್ಪಷ್ಟ ಬಹುಮತ ಪಡೆಯಲಿದೆ ಎಂದು ಹಲವಾರು ಮತದಾನೋತ್ತರ ಸಮೀಕ್ಷೆಗಳು ತಿಳಿಸಿವೆ.

243 ಸದಸ್ಯರ ವಿಧಾನಸಭೆಯಲ್ಲಿ ಆರ್. ಜೆ.ಡಿ. ಅತಿ ದೊಡ್ಡ ಪಕ್ಷವಾಗಿ ಹೊರ ಹೊಮ್ಮಲಿದೆ ಎಂದು ಬಹುತೇಕ ಸಮೀಕ್ಷೆಗಳು ಅಂದಾಜಿಸಿವೆ. ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಗಣನೀಯ ಸಂಖ್ಯೆಯಲ್ಲಿ ಸ್ಥಾನಗಳನ್ನು ಕಳೆದುಕೊಳ್ಳಲಿದೆ ಎಂದು ಸಮೀಕ್ಷೆಗಳು ತಿಳಿಸಿವೆ.

ಶನಿವಾರ ಮೂರು ಸುತ್ತಿನ ಬಿಹಾರ ವಿಧಾನಸಭಾ ಚುನಾವಣೆ ಪೂರ್ಣಗೊಂಡಿದ್ದು, ನವೆಂಬರ್ 10ರಂದು ಮತ ಎಣಿಕೆ ನಡೆಯಲಿದೆ.

ಟುಡೇಯ್ಸ್ ಚಾಣಕ್ಯ – ಸಿ.ಎನ್.ಎನ್. ಸಮೀಕ್ಷೆಯ ಪ್ರಕಾರ ಆರ್.ಜೆ.ಡಿ. ನೇತೃತ್ವದ ಮೈತ್ರಿಕೂಟ 180 ಸ್ಥಾನ ಪಡೆಯಲಿದೆ. ಎನ್.ಡಿ.ಎ. ಕೇವಲ 55 ಸ್ಥಾನಗಳಿಗೆ ಸೀಮಿತವಾಗಲಿದೆ.

ಇಂಡಿಯಾ ಟುಡೇ - ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆಯ ಪ್ರಕಾರ ಆರ್.ಜೆ.ಡಿ. 139ರಿಂದ 161 ಸ್ಥಾನಗಳನ್ನು ಪಡೆಯಲಿದೆ. ಎನ್.ಡಿ.ಎ. 69-91 ಸ್ಥಾನಗಳಿಗೆ ಸೀಮಿತವಾಗಲಿದೆ.

ಎಬಿಪಿ - ಸಿವೋಟರ್ ಸಮೀಕ್ಷೆಯ ಪ್ರಕಾರ ಎನ್.ಡಿ.ಎ. 104-128 ಸ್ಥಾನ ಪಡೆಯಲಿದೆ. ಪ್ರತಿಪಕ್ಷಗಳ ಮೈತ್ರಿಕೂಟ 108-131 ಸ್ಥಾನಗಳನ್ನು ಪಡೆಯಲಿದೆ.

ಟೈಮ್ಸ್ ನೌ ಸಮೀಕ್ಷೆಯ ಪ್ರಕಾರ ಎನ್. ಡಿ.ಎ.ಗೆ 116 ಹಾಗೂ ವಿಪಕ್ಷಗಳ ಮೈತ್ರಿಕೂಟಕ್ಕೆ 120 ಸ್ಥಾನಗಳು ಸಿಗಲಿವೆ.

ರಿಪಬ್ಲಿಕ್ ಟಿವಿ - ಜನ್ ಕಿ ಬಾತ್ ಸಮೀಕ್ಷೆ ಪ್ರಕಾರ ಆರ್.ಜೆ.ಡಿ. ನೇತೃತ್ವದ ಮೈತ್ರಿಕೂಟಕ್ಕೆ 128 ಸೀಟುಗಳು ಸಿಗಲಿವೆ. ಆಡಳಿತಾರೂಢ ಎನ್. ಡಿಎ. 104 ಸ್ಥಾನಗಳಿಗೆ ಕುಸಿಯಲಿದೆ.

2015ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಆರ್.ಜೆ.ಡಿ. 80 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಜೆಡಿ (ಯು) 71 ಸ್ಥಾನಗಳಲ್ಲಿ ಹಾಗೂ ಬಿಜೆಪಿ 53 ಸ್ಥಾನಗಳಲ್ಲಿ ಗೆಲುವು ಸಾಧಿಸಿತ್ತು. ಕಾಂಗ್ರೆಸ್ 27 ಸ್ಥಾನಗಳನ್ನು ಪಡೆದಿತ್ತು.

ಆ ಸಮಯದಲ್ಲಿ ಜೆಡಿಯು, ಆರ್.ಜೆ.ಡಿ. ಹಾಗೂ ಕಾಂಗ್ರೆಸ್ ಪಕ್ಷಗಳು ಮೈತ್ರಿ ಮಾಡಿಕೊಂಡಿದ್ದವು. ಈ ಬಾರಿ ಜೆಡಿಯು ಮತ್ತೆ ಎನ್.ಡಿ.ಎ. ತೆಕ್ಕೆಗೆ ಮರಳಿದೆ.

## ಅಂಗೈಯಲ್ಲಿನ ಮಾಯಾ ಸಾಧನ

ಏನು ಗಮ್ಮತ್ತಿನ ಸಾಧನವಾಗಿದೆ
ಮನ ಮುಟ್ಟುವ ಮೊಬೈಲ್ ಫೋನಾಗಿದೆ
ತನುವನು ಸೇರಿ ನರಗಳ ಕದಡಿದೆ
ಅನುದಿನ ಅನುಕ್ಷಣ ಬೇಕೇಬೇಕಾಗಿದೆ

ಅಂಗೈಯಲ್ಲೇ ಲೋಕವ ತೋರುತ
ಸಂಗ ಎಲ್ಲೆಲ್ಲೂ ಒಟ್ಟಿಗೆ ಸಾಗುತ
ಭಂಗ ಮಾಡಿ ದಿನಚರಿಯ ಸೇರುತ
ಬಂಟನ ಮಾಡಿ ಮಾನವನ ನಲಿಯುತ

ದೇವರ ಪೂಜೆಗೆ ಮಂತ್ರವು ಅದರಲೆ
ಅವಿರತ ನೌಕರಿ ಪಾಠವು ಅದರಲೆ
ಭವ ಕಳೆವ ಭಜನೆ ಹಾಡು ಅಲ್ಲೇ
ನವ ನವೀನ ಆವಿಷ್ಕಾರ ಅದರಲೆ

ಜ್ಞಾಪಕ ಶಕ್ತಿಯ ಆಸರೆ ಕುಂದಿದೆ
ಸ್ಥಾಪಿತವಾಗಿ ಕೈಯನು ಸೇರಿದೆ
ಅಪಾರವಾಗಿ ಉಪಕಾರ ಮಾಡತಿದೆ
ಅಪಾಯವನ್ನೂ ತರುತಲಿದೆ

ತಂತ್ರ ಜ್ಞಾನವು ತಾರಕಕ್ಕೇರಿದೆ
ಮಂತ್ರ ಮುಗ್ಧರ ಮಾಡುತ ಬೆಳೆದಿದೆ
ಅಂತರವಿಲ್ಲದೆ ಎಲ್ಲರ ಸೇರಿದೆ
ಚೆಂದದ ಯಕ್ಷಿಣಿಯಂತೆ ಕುಣಿಸಿದೆ

ಎಲ್ಲೋ ಇರುವರ ಜೊತೆ ಸೇರಿಸಿದೆ
ಇಲ್ಲೇ ಇರುವರ ದೂರಾಗಿಸಿದೆ
ನಿಲ್ಲದ ಆಸೆ ಪೈಪೋಟಿ ಹೆಚ್ಚಿಸಿದೆ
ಸಲ್ಲದ ಮತ್ಸರ ಜಾಗೃತಗೊಳಿಸಿದೆ

ಲೋಕವನೆಲ್ಲಾ ಹತ್ತಿರ ವಾಗಿಸಿ
ಮುಖವ ತೋರಿಸಿ ಮಾತನಾಡಿಸಿ
ಸಾಕಾರವಾಗಿದೆ ಬಾಂಧವ್ಯ ಒದಗಿಸಿ
ವಿಕಾರಗಳನೂ ಜೊತೆಗೆ ಮಾಡಿಸಿ

ಬೆಳೆದು ನಿನ್ನನೆ ತಿನ್ನುವ ಮೊದಲು
ತಳೆದು ಎಚ್ಚರಿಕೆ ಆಗು ಕಾವಲು
ಗಳಿಸು ನಿನ್ನಲಿಹ ಹರಿಯ ದಯವನು
ಬಳಸು ಮಿತದಲಿ ಆ ಮೊಬೈಲನು

- ಶ್ರೀ ಕೃಷ್ಣಾರ್ಪಣಮಸ್ತು
ರೂಪಶ್ರೀ ಶಶಿಕಾಂತ್

## ಹಡಗಲಿ ವ್ಯವಸಾಯ ಉತ್ಪನ್ನ ಮಾರಾಟ ಸಂಘಕ್ಕೆ ಆಯ್ಕೆ

ಹೂವಿನಹಡಗಲಿ, ನ.7- ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘ ನಿ. ಹೂವಿನಹಡಗಲಿ ಇದರ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಈ ಕೆಳಗಿನವರು ಚುನಾಯಿತರಾಗಿದ್ದಾರೆ.

ಎ ವರ್ಗದ ಸದಸ್ಯ ಪ್ರತಿನಿಧಿಗಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಕತ್ತೆಬೆನ್ನೂರು ಪಿಎಸಿಎಸ್‌ನಿಂದ ಬ್ಯಾಲಹುಣ್ಸೆ ಪಾಟೀಲ ಬಸವನಗೌಡ್ರು, ಹಿರೇಮಲ್ಲನಕೇರಿ ಪಿಎಸಿಎಸ್‌ನಿಂದ ಕಾಲ್ವಿ (ಪೂ) ಬಿ. ಹನುಮಂತಪ್ಪ, ಹೂವಿನಹಡಗಲಿ ಪಿಎಸಿಎಸ್‌ನಿಂದ ಟಿ. ಮಹಾಂತೇಶ, ಉತ್ತಂಗಿ ಪಿಎಸಿಎಸ್‌ನಿಂದ ಉತ್ತಂಗಿಯ ಗುಡೇಕೋಟೆ ಸೋಮಶೇಖರ ಹಾಗೂ ಮಾನ್ಯರ ಮಸಲವಾಡದಿಂದ ಕಗ್ಗಲಕಟ್ಟಿ ನಾಗರಾಜ ನಾಯ್ಕ ಆಯ್ಕೆಯಾಗಿದ್ದಾರೆ.

ಬಿ ವರ್ಗದ ವ್ಯಕ್ತಿಗತ ಸದಸ್ಯ ಕ್ಷೇತ್ರಗಳಿಂದ ಹೂವಿನಹಡಗಲಿಯ ಎ.ಜೆ. ವೀರೇಶ್, ಈಟಿ ಹನುಮೇಶ್, ದೀಪದ ಕೃಷ್ಣಪ್ಪ, ಮಲ್ಲಿ ಒಡೆಯರ ಸುರೇಶ್, ವಡ್ಡಿನಹಳ್ಳಿ ತಾಂಡಾದ ಜಿ ಥಾಕ್ಯಾನಾಯ್ಕ, ದೇವಗೊಂಡನಹಳ್ಳಿ ಹೆಚ್. ಮಂಜುನಾಥ್ ಆಯ್ಕೆಯಾಗಿದ್ದಾರೆ.

## ಮಹಾರಾಷ್ಟ್ರದಲ್ಲಿ 23ರಿಂದ ಶಾಲೆಗಳು ಆರಂಭ

ಮುಂಬೈ, ನ. 7 – ಮಹಾರಾಷ್ಟ್ರದಲ್ಲಿ 9ರಿಂದ 12ನೇ ತರಗತಿಯ ಶಾಲೆಗಳು ನವೆಂಬರ್ 23ರಿಂದ ತೆರೆಯಲಿವೆ ಎಂದು ಶಿಕ್ಷಣ ಸಚಿವ ವರ್ಷ ಗಾಯಕ್ವಾಡ್ ತಿಳಿಸಿದ್ದಾರೆ.

ದೀಪಾವಳಿಯ ನಂತರ ಸೂಕ್ತ ಕೋವಿಡ್ ಸುರಕ್ಷತಾ ಕ್ರಮಗಳೊಂದಿಗೆ ಶಾಲೆಗಳನ್ನು ತೆರೆಯಲಾಗುವುದು ಎಂದವರು ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ದೇಶದಲ್ಲೇ ಅತಿ ಹೆಚ್ಚಿನ 17 ಲಕ್ಷ ಸೋಂಕಿತರು ಕಂಡು ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಕೊರೊನಾ ಸೋಂಕಿನ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ.

ಬೇಕಾಗಿದ್ದಾರೆ
ನಮ್ಮ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ತಕ್ಷಣ ಸಂಪರ್ಕಿಸಿರಿ.
ಸಾಯಿ ಕಲೆಕ್ಷನ್ಸ್
ಜಯನಗರ 'ಬಿ' ಬ್లಾಕ್, ದಾವಣಗೆರೆ-04.
ಫೋ. : 80733 17926, 99867 62462

REQUIRED
for Nilkamal FURNITURE IDEAS
◆ SALES MANAGER
◆ DRIVERS FOR TATA ACE
◆ DELIVERY BOY
WALK IN INTERVIEW
On 09.11.2020 Time 10 AM onwards
Male Candidates can attend.
Nilkamal Furniture Exclusive Showroom
SS Layout "B" Block, Ring Road,
Opp. : Sharadamba Temple, Davangere.
Mob. : 84310 11111, 99005 70004



## ರಾಶಿ ಭವಿಷ್ಯ

**ದಿನಾಂಕ : 08.11.2020 ರಿಂದ 14.11.2020**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಅನುಭವಿಗಳೊಂದಿಗೆ ಚರ್ಚಿಸಿ, ಆರಂಭಿಸಿದ ಕಾರ್ಯಗಳೇ ಹೆಚ್ಚು ಫಲಪ್ರದ ಎಂಬುದು ನೆನಪಿರಲಿ. ಆತ್ಮವಿಶ್ವಾಸದೊಂದಿಗೆ ಮುನ್ನಡೆಯುವ ನಿಮಗೆ ಯಶಸ್ಸು ಕಟ್ಟಿಟ್ಟ ಬುತ್ತಿ. ಮತ್ತೊಬ್ಬರ ಒತ್ತಡಕ್ಕೆ ಯಾವುದೇ ಕಾರಣಕ್ಕೂ ಮಣಿಯ ಬೇಡಿ. ಹಿರಿಯರೊಂದಿಗೆ ಮಾಡುವ ವಿರೋಧ ಅಷ್ಟು ಕ್ಷೇಮವಲ್ಲ. ಆದಾಯದ ಮೂಲದಲ್ಲಿ ಸ್ವಲ್ಪ ಕೊರತೆಯಿದೆ ಚಿಂತೆ ಬೇಡ, ವಾಹನಗಳ ರಿಪೇರಿ, ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ, ಬಂಧುಗಳ ಆಗಮನ ಸಂತಸ ತರಲಿದೆ. ಸಾಲ ತೀರಾವಳಿಗೆ ಮಾರ್ಗೋಪಾಯವೊಂದು ಬರುವುದು. ಭಾನು, ಮಂಗಳ ಬುಧ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಮಹಿಳೆಯರು ಅಲಕ್ಷೆ ಅಥವಾ ಉದಾಸಿನ ಪ್ರವೃತ್ತಿಯಿಂದಾಗಿ ಅಮೂಲ್ಯ ವಸ್ತುಗಳನ್ನು ಕಳೆದುಕೊಳ್ಳುವ ಸಂಭವವಿದೆ. ಈ ಹಿಂದೆ ಅರ್ಧಕ್ಕೆ ನಿಲ್ಲಿಸಿದ್ದ ಕೆಲಸಗಳನ್ನು ಆರಂಭಿಸಲು ಇದು ಸಕಾಲ. ಕ್ರೀಡಾಪಟುಗಳಿಗೆ ತಾತ್ಕಾಲಿಕ ಹಿನ್ನಡೆ, ಹೊಸ ವ್ಯವಹಾರಗಳನ್ನು ಆರಂಭಿಸಲು ಸೂಕ್ತ ಸಮಯ, ಪಿತ್ರಾರ್ಜಿತ ಆಸ್ತಿ ಹಂಚಿಕೆ ವಿಚಾರ ಇಷ್ಟರಲ್ಲೇ ಪ್ರಸ್ತಾವನೆ. ನಿಮ್ಮ ಅಲಕ್ಷೆ ಅನಾರೋಗ್ಯಕ್ಕೆ ರಹದಾರಿಯಾದೀತು. ಅತಿಪರಾವಲಂಬನೆ ಅಷ್ಟು ಒಳ್ಳೆಯದಲ್ಲ. ಗುರು, ಶುಕ್ರ, ಶನಿವಾರ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಙ, ಛ.ಕೆ.ಕೋ.ಹ.)**

ಕೊಟ್ಟ ಸಾಲಗಳು ಮರಳಿ ಬರಲು ಉಪಾಯ ಹಾಗೂ ಒಳ್ಳೆ ಮಾತುಗಳೇ, ಮೂಲ ಮಂತ್ರ ಎಂಬುದನ್ನು ಮರೆಯಬೇಡಿ. ಮಿತ್ರರೊಂದಿಗೆ ಕಾವೇರಿದ ಮಾತನಾಡುವುವದರಿಂದ ಸ್ನೇಹಿತರನ್ನು ಕಳೆದುಕೊಳ್ಳಬೇಕಾದೀತು. ಅವಿವಾಹಿತರಿಗೆ ಕಂಕಣ ಭಾಗ್ಯ ಸಂಬಂಧಿಗಳೊಂದಿಗೆ ಕೂಡಿ ಬರಲಿದೆ. ಕೌಟುಂಬಿಕವಾಗಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದ್ದರೂ, ವ್ಯವಹಾರಗಳಲ್ಲಿ ಅಷ್ಟು ಉತ್ತಮವಾಗಿರುವುದಿಲ್ಲ. ಪತ್ರಿಕಾ ರಂಗದಲ್ಲಿರುವವರಿಗೆ ಉತ್ತಮ ಹೆಸರು ಹಾಗೂ ಸರ್ಕಾರದಿಂದ ಸೌಲಭ್ಯ ಸಿಗಲಿದೆ. ಹೊಸ ಯೋಜನೆಗಳಿಗೆ ಈಗ ಇರುವ ಪರಿಸ್ಥಿತಿಯಲ್ಲಿ ಚಾಲನೆ ಕೊಡುವುದೇ ಬೇಡ. ಮಕ್ಕಳ ಏಳಿಗೆ ಸಂತಸ ತರಲಿದೆ. ಶಿರೋ ವೇದನೆ ಬಾಧಿಸಬಹುದು. ಮಂಗಳ, ಬುಧ, ಗುರು ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಅಸಾಧ್ಯವೆನಿಸಿದ್ದ ಕಾರ್ಯಗಳು ಸುಲಲಿತವಾಗಿ ನಿಮ್ಮ ನಿರೀಕ್ಷೆಗೂ ಮೀರಿ ನಡೆಯಲಿದ್ದು ಆಶ್ಚರ್ಯ, ಸಂತಸ ಎರಡೂ ನಿಮ್ಮದಾಗಲಿವೆ. ಭೋಜನ ಕೂಟಗಳಲ್ಲಿ ಹೆಚ್ಚೆಚ್ಚು ಭಾಗವಹಿಸಬೇಕಾದ ಪ್ರಸಂಗ ಬರಲಿದೆ. ಆದರೆ ಅದು ಅತಿಯಾದರೆ ಅಥವಾ ಮಿತಿ ಮೀರಿದರೆ ಆರೋಗ್ಯ ಹಾಳಾಗಬಹುದು. ಕಿರಾಣಿ ವ್ಯಾಪಾರಿಗಳು ಗ್ರಾಹಕರೊಂದಿಗೆ ಸೌಜನ್ಯದಿಂದಿರುವುದು ಲೇಸು. ಸಮಸ್ಯೆಗಳು ಎಷ್ಟೇ ಬರಲಿ, ಅದನ್ನು ಆತ್ಮವಿಶ್ವಾಸದಿಂದ ಎದುರಿಸುವ ಸಾಮರ್ಥ್ಯ ನಿಮ್ಮಲ್ಲಿದೆ. ಅತಿಯಾದ ದೈಹಿಕ ಶ್ರಮ ಒಳ್ಳೆಯದಲ್ಲ, ಪ್ರೇಮಿಗಳಲ್ಲಿ ಅಲ್ಪ ಸ್ವಲ್ಪ ಮನಸ್ತಾಪವಾಗಲಿದೆ. ಪರಸ್ಪರ ಉಡುಗೊರೆ ವಿನಿಮಯವೇ ಇದಕ್ಕೆ ಪರಿಹಾರ, ಆದಾಯದಲ್ಲಿ ಕ್ರಮೇಣ ಹೆಚ್ಚಳ. ಸೋಮ, ಬುಧ, ಶುಕ್ರ ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಅನಿಯಂತ್ರಿತವಾಗಿದ್ದ ವ್ಯವಹಾರದಲ್ಲಿ ಇಷ್ಟರಲ್ಲೇ ಹತೋಟಿ ಕಂಡು ಲಾಭದಾಯಕವಾಗಲಿದೆ. ಮಿತಿ ಮೀರುತ್ತಿದ್ದ ಖರ್ಚಿಗೆ ನೀವು ಹಾಕುವ ಕಡಿವಾಣ ಉಳಿತಾಯಕ್ಕೆ ದಾರಿಯಾಗಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ, ತುಸು ನೆಮ್ಮದಿ, ಆದಾಯದಲ್ಲಿ ಪ್ರಗತಿ ಕಾಣಲು ಹಲವು ಮಾರ್ಗಗಳು ಕಾಣುವವು. ಲೇವಾದೇವಿ ವ್ಯವಹಾರದಲ್ಲಿ ಭಾರೀ ನಷ್ಟವಾಗುವ ಸಂಭವವಿದೆ. ಮಾನಸಿಕ ಅಸ್ವಸ್ಥತೆಯಿಂದಾಗಿ ಕುಟುಂಬದಲ್ಲಿ ಅಹಿತಕರ ವಾತಾವರಣ ಮೂಡಲಿದೆ. ನಿಮ್ಮಿಂದ ಉಪಕೃತರಾದವರೇ ನಿಮಗೆ ಕೇಡನ್ನು ಬಯಸಲು ಯತ್ನಿಸುವರು. ಅಂತವರಿಂದ ಅಂತರ ಕಾಪಾಡುವುದು ಉತ್ತಮ. ಭಾನು, ಸೋಮ, ಶುಕ್ರವಾರ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಜನರು ಕೊಡುವ ಸಲಹೆಗಳು ನಿಮ್ಮ ಕೆಲಸಗಳನ್ನು ಹಾಳುಗೆಡವಬಹುದು. ಸುಧಾರಣೆಗೆಂದು ನೀವು ಮಾಡುವ ಪ್ರಯತ್ನ ವ್ಯರ್ಥವಾಗಲಿದೆ. ಆಸ್ತಿ ಮಾರಾಟ ಮಾಡುವ ವಿಚಾರ ಅನಿರೀಕ್ಷಿತವಾಗಿ ಹಿನ್ನಡೆ ಸಾಧಿಸಲಿದೆ. ಮಕ್ಕಳ ಹೆಚ್ಚಿನ ಅಧ್ಯಯನದಲ್ಲಿ ಮೂಲಗಳು ದೊರೆಯದೆ ಹೋಗಬಹುದು. ವ್ಯವಹಾರದಲ್ಲಿ ಹಳೇ ಒಪ್ಪಂದಗಳನ್ನು ಮುಂದುವರೆಸುವುದು ಲಾಭದಾಯಕವಾಗುವುದು. ಆರ್ಥಿಕ ಬೆಂಬಲವಿಲ್ಲದೇ ಸಾಲ ಮಾಡಲು ಹೋಗಬೇಡಿ. ಹಳೇ ಕಾಯಿಲೆಗಳು ಮರುಕಳಿಸಲಿವೆ. ಮಡದಿಯ ಮಾನಸಿಕ ಸ್ಥಿತಿಯನ್ನು ತರಬಂದಿಗೆ ತರಲು ಪ್ರಯತ್ನಿಸಿ. ಹಿರಿಯರ ಕೋರಿಕೆಗಳನ್ನು ಪೂರೈಸಿ. ಭಾನು, ಸೋಮ, ಬುಧ ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಇಷ್ಟು ದಿನ ಉದ್ಯೋಗದಲ್ಲಿ ಹರ ಸಾಹಸ ಪಡುತ್ತಿದ್ದ ನಿಮಗೆ ಇನ್ನು ಮುಂದೆ ಪ್ರಗತಿ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಸಹಾಯ, ಸಲಹೆ ಸಿಗಲಿದೆ. ರೈತಾಪಿ ಜನರು ಎಚ್ಚರದಿಂದ ವ್ಯವಹರಿಸುವುದು ಲೇಸು. ಮತ್ತೊಬ್ಬರ ವಾಹನಗಳನ್ನು ಚಾಲಿಸುವಾಗ ಎಚ್ಚರದಿಂದಿರಿ. ಅಪರಿಚಿತರೊಂದಿಗೆ ಮಾಡುವ ಹಣಕಾಸಿನ ವ್ಯವಹಾರ ಅಷ್ಟು ಒಳ್ಳೆಯದಲ್ಲ. ಹೊಸ ವ್ಯವಹಾರಗಳನ್ನು ಆರಂಭಿಸುವುದಕ್ಕಿಂತ ಹಳೇ ವ್ಯವಹಾರಗಳನ್ನೇ ಮುಂದುವರೆಸುವುದು ಲೇಸು. ಗುತ್ತಿಗೆದಾರರಿಗೆ ಸರ್ಕಾರದಿಂದ ಬರಬೇಕಾಗಿರುವ ಬಾಕಿ ಹಣ ಸಂದಾಯವಾಗಲಿದೆ. ಸಂಗಾತಿಯ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ಇರಲಿ. ಆದಾಯದಲ್ಲಿ ಹೆಚ್ಚಳ, ಖರ್ಚಿನ ಮೇಲೆ ಹಿಡಿತ ಸಾಧಿಸುವುದು ಲೇಸು. ಗುರು, ಶುಕ್ರ, ಶನಿವಾರ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ಮಾನಸಿಕ ಸಮತೋಲನ ಸಾಧಿಸುವುದರಿಂದ ಕೆಲಸ ಕಾರ್ಯಗಳಲ್ಲಿ ಯಶಸ್ಸು, ಸಂಪಾದನೆ ಎಷ್ಟೇ ಹೆಚ್ಚಿದ್ದರೂ ಅರ್ಥವಿಲ್ಲದ ಖರ್ಚಿಗೆ ವ್ಯರ್ಥವಾದೀತು. ವಿದೇಶಕ್ಕೆ ಹೋಗುವ ಅವಕಾಶ ಹೇರಳವಾಗಿ ದೊರೆತರೂ ಪರಿಸ್ಥಿತಿಯನ್ನು ಅರಿಯುವುದು ಉತ್ತಮ. ಬಂಧುಗಳು ಹಳೇ ವೈಷಮ್ಯ ಮರೆತು ಸ್ನೇಹ ಹಸ್ತ ಚಾಚುವರು. ಅದನ್ನು ಅಂಗೀಕರಿಸುವುದರಿಂದ ನಿಮ್ಮ ಪ್ರತಿಷ್ಠೆ ಹೆಚ್ಚಲಿದೆ. ನಿರೀಕ್ಷಿತ ಮಟ್ಟದಲ್ಲಿಯೇ ಆದಾಯದ ಹರಿವು ಇರಲಿದೆ. ಉತ್ತಮಗೊಂಡಿದ್ದ ಆರೋಗ್ಯ ನಿಮ್ಮ ಅಲಕ್ಷೆಯಿಂದಾಗಿ ಹದಗೆಡಲಿದೆ. ಸ್ನೇಹಿತರ ಸಲಹೆಗಳು ಅತ್ಯುತ್ತಮವಾಗಿರುತ್ತವೆ. ಕುಲದೇವತಾರಾಧನೆ ಮಾಡಿರಿ. ಸೋಮ, ಮಂಗಳ, ಗುರು ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ವ್ಯವಹಾರ ನಿಮ್ಮನ್ನು ಬಿಕ್ಕಟ್ಟಿನಿಂದ ಪಾರು ಮಾಡಲಿದೆ. ಶುಭ ಕಾರ್ಯ ನಿಮಿತ್ತ ತುಸು ವೆಚ್ಚ. ಹಿರಿಯರ ಹರಕೆ ಪೂರೈಸಿದ ನೆಮ್ಮದಿ ನಿಮ್ಮದಾಗಲಿದೆ. ಹಿಡಿತ ತಪ್ಪಿದ ಖರ್ಚುವೆಚ್ಚಗಳು ತುಸು ಹತೋಟಿಗೆ ಬರಲಿವೆ. ರಾಜಕಾರಣಿಗಳಿಗೆ ಉತ್ತಮ ಸ್ಥಾನ ದೊರೆಯುವುದು. ತುಸು ಕಷ್ಟವೇ ಆಗಬಹುದು. ನಿರುದ್ಯೋಗಿಗಳಿಗೆ ಸಾಧಾರಣ ವೇತನದ ನೌಕರಿ ದೊರೆಯಲಿದೆ. ಸದ್ಯಕ್ಕೆ ಅದರಲ್ಲೇ ಮುಂದುವರೆಯುವುದು ಉತ್ತಮ. ಅವಸರದ ನಿರ್ಣಯಗಳಿಂದ ಅನಾಹುತವೇ ಬಹಳ. ಅತಿಯಾದ ನಂಬಿಕೆಗಿಂತ ಹಿತಮಿತ ನಂಬಿಕೆ ಶ್ರೇಷ್ಠ. ವಿದ್ಯಾರ್ಥಿಗಳು ಶ್ರಮ ಪಡದೆ ವಿಧಿಯಿಲ್ಲ. ಭಾನು, ಸೋ, ಗುರು ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಎಲ್ಲವೂ ನಿಮ್ಮ ಲೆಕ್ಕಾಚಾರದಂತೆ ನಡೆಯುತ್ತದೆ ಎಂಬ ಅತಿಯಾದ ನಂಬಿಕೆ ಬೇಡ. ಕೆಲವೊಮ್ಮೆ ಅತಿಯಾದ ನಂಬಿಕೆಯೂ ಅನಾಹುತಕ್ಕೆ ಕಾರಣವಾದೀತು. ಸಾಹಿತಿಗಳಿಗೆ ಹಾಗೂ ಲೇಖಕರಿಗೆ ಗೌರವ, ಸನ್ಮಾನಗಳು ಮೇಲಿಂದ ಮೇಲೆ ನಡೆಯಲಿವೆ. ಕೊಟ್ಟ ಸಾಲವನ್ನು ನಂಬಿಕೊಂಡು ದೊಡ್ಡ ಯೋಜನೆಗಳ ಆರಂಭ ಬೇಡ. ಖಾಸಗಿ ಕಂಪನಿ ನೌಕರರಿಗೆ ಉದ್ಯೋಗದಲ್ಲಿ ಪ್ರಗತಿ ಕಂಡರೂ, ವೇತನದಲ್ಲಿ ಹೆಚ್ಚಳ ಕಂಡು ಬರದೇ ಹೋದೀತು. ವೈಯಕ್ತಿಕ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ಇರಲಿ. ವ್ಯಾಪಾರದಲ್ಲಿ ಮಕ್ಕಳ ಆಸಕ್ತಿ ಹೆಚ್ಚಲಿದೆ. ರಕ್ಷಣಾ ಇಲಾಖೆಯಲ್ಲಿರುವರಿಗೆ ಹೆಚ್ಚಿನ ಸೌಲಭ್ಯ ದೊರೆಯುವುದು. ಮಗಳ ಮದುವೆ ವಿಚಾರದಲ್ಲಿ ಹಿರಿಯರ ಸಲಹೆ ಪಡೆಯಿರಿ. ಬುಧ, ಶುಕ್ರ, ಶನಿವಾರ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಉದ್ಯಮಿಗಳು ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ನಿರೀಕ್ಷಿತ ಮೂಲಗಳಿಂದ ಆರ್ಥಿಕ ನೆರವು, ಹೊಸ ಮನೆ ಕಟ್ಟಲು ಆರಂಭಿಸಬಹುದು. ಸರ್ಕಾರಿ ನೌಕರರು ಮೇಲಾಧಿಕಾರಿಗಳ ಮರ್ಜಿ ಹಿಡಿದಲ್ಲಿ ಮಾತ್ರ ಸಮಸ್ಯೆ ಸುಳಿಯಿಂದ ಹೊರ ಬರಲು ಸಾಧ್ಯ. ಪುಣ್ಯ ಕ್ಷೇತ್ರ ದರ್ಶನಾವಕಾಶ, ಸೋದರನಿಗೆ ಕಂಕಣ ಭಾಗ್ಯ, ವಿದ್ಯಾರ್ಥಿಗಳು ಅವಕಾಶವನ್ನು ಬಿಡಬಾರದು. ವೈದ್ಯರು ಒತ್ತಡದ ವಾತಾವರಣದಲ್ಲಿ ಕಾರ್ಯ ನಿರ್ವಹಿಸಬೇಕಾಗಬಹುದು. ಪ್ರಯಾಣ ಮಾಡಲೇ ಬೇಕಾದ ಸಂದರ್ಭ ಬರಲಿದ್ದು, ಅದರ ಪೂರ್ವ ಸಿದ್ಧತೆ ಚೆನ್ನಾಗಿರುವುದು ಉತ್ತಮ. ವಿಷ್ಣು ಸಹಸ್ರನಾಮ ಪಾರಾಯಣ ಮಾಡಿ. ಬುಧ, ಗುರು, ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮಿತ ವ್ಯಯ ಉತ್ತಮ, ಅನಿರೀಕ್ಷಿತ ಖರ್ಚುಗಳು, ಹಿರಿಯರು ಕೊಡುವ ಹಣವನ್ನು ಮಕ್ಕಳ ಭವಿಷ್ಯಕ್ಕಾಗಿ ಉಳಿತಾಯ ಮಾಡದಿದ್ದಲ್ಲಿ ಮುಂದೆ ತೊಂದರೆ ಅನುಭವಿಸಬೇಕಾದೀತು. ಸೇನೆಯಲ್ಲಿ ಸೇವೆ ಸಲ್ಲಿಸಬೇಕೆಂಬ ಸೋದರನ ಆಸೆ ಈಡೇರಲಿದೆ. ಮುಂದಾಲೋಚನೆಯಿಲ್ಲದೇ ಯಾವುದನ್ನೂ ನಿರ್ಧರಿಸಬೇಡಿ. ಬೇರೆಯವರ ಕಷ್ಟಕ್ಕೆ ನೆರವಾಗಲು ಹೋದಲ್ಲಿ ಅದು ನಿಮಗೆ ಎದುರಾಗಬಹುದು. ತಾಯಿಯ ತವರು ಮನೆಯಿಂದ ಬರಲಿರುವ ನೆರವನ್ನು ಸಂತೋಷದಿಂದ ಸ್ವೀಕರಿಸಿದೆ. ಬಂಧು-ದ್ವೇಷ ಅಷ್ಟು ಒಳ್ಳೆಯದಲ್ಲ. ಭಾನು, ಸೋಮ, ಗುರು ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 13.11.2020ನೇ ಶುಕ್ರವಾರ ನೀರು ತುಂಬುವ ಹಬ್ಬ, 14.11.2020ನೇ ಶನಿವಾರ ನರಕ ಚತುರ್ದಶಿ**

# ಸಿದ್ದೇಶ್ವರ ಸಮುದಾಯ ಭವನ ನಾಳೆ ಲೋಕಾರ್ಪಣೆ



**ರಾಣೇಬೆನ್ನೂರು**

ರಾಣೇಬೆನ್ನೂರು, ನ.7- ರಾಣೇಬೆನ್ನೂರಿನ ಪಶ್ಚಿಮ ಬಡಾವಣೆಯ ಹಳೆಯ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಶ್ರೀ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಆಧುನಿಕ ಶೈಲಿಯ ಸುಸಜ್ಜಿತ ಶ್ರೀ ಸಿದ್ದೇಶ್ವರ ಸಮುದಾಯ ಭವನ ಸಿದ್ಧಗೊಂಡಿದ್ದು, ನಾಡಿದ್ದು ದಿನಾಂಕ 9ರ ಸೋಮವಾರ ಲೋಕಾರ್ಪಣೆಗೊಳ್ಳಲಿದೆ.

ತರಳಬಾಳು ಲಿಂಗೈಕ್ಯ ಜಗದ್ಗುರು ಶ್ರೀ ಶಿವಕುಮಾರ ಸ್ವಾಮಿಗಳ ಕೃಪಾಶೀರ್ವಾದದೊಂದಿಗೆ ನಾಳೆ ಬೆಳಿಗ್ಗೆ ಶ್ರೀ ಸಿದ್ದೇಶ್ವರ ಸಮುದಾಯ ಭವನದ ಉದ್ಘಾಟನೆಯನ್ನು ಸಚಿವ ಬಸವರಾಜ ಬೊಮ್ಮಾಯಿ ನೆರವೇರಿಸಲಿದ್ದು, ಗದಗ ಶಿವಾನಂದ ಶ್ರೀ ಗಳು ಸಾನ್ನಿಧ್ಯ ವಹಿಸಲಿದ್ದಾರೆ. ಸಮಿತಿ ಅಧ್ಯಕ್ಷ ಚನ್ನಬಸಪ್ಪ ಗೌಡಶಿವಣ್ಣನವರ ಅಧ್ಯಕ್ಷತೆ ವಹಿಸುವರು. ಸಚಿವ ಬಿ.ಸಿ. ಪಾಟೀಲ, ಶಾಸಕ ಅರುಣಕುಮಾರ ಪೂಜಾರ, ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ. ಕೋಳಿವಾಡ, ಸಾಧು ವೀರಶೈವ ಸಮಾಜದ ಅಧ್ಯಕ್ಷ ಮಲ್ಲೇಶಪ್ಪ ಅರಕೇರಿ ಪಾಲ್ಗೊಳ್ಳುವರು.

ಸುಮಾರು 1,500 ಆಸನಗಳನ್ನು ಅಳವಡಿಸುವಷ್ಟು ಜಾಗವಿರುವ 80×110 ಅಡಿಯ ವಿಶಾಲವಾದ ಪ್ರಾಂಗಣ, ಎಡಬಲದಲ್ಲಿ ವಧು-ವರರಿಗಾಗಿ ಎರಡು ಕೋಣೆಗಳಿರುವ ವಿಸ್ತಾರವಾದ ವೇದಿಕೆ ಸೇರಿದಂತೆ ಒಟ್ಟು 12 ಕೊಠಡಿಗಳಿದ್ದು, ಎಲ್ಲವೂ ಶೌಚಾಲಯಗಳ ಜೋಡಣೆ ಹೊಂದಿವೆ.

ನೆಲಮಹಡಿಯಲ್ಲಿ ವಿಸ್ತಾರವಾದ ಅಡುಗೆ ಮನೆ ಮತ್ತು ಒಂದು ಪಂಕ್ತಿಯಲ್ಲಿ 500ಕ್ಕೂ ಹೆಚ್ಚು ಜನ ಕುಳಿತು ಊಟ ಮಾಡಬಹುದಾದ ಭೋಜನ ಶಾಲೆ. ಅಡುಗೆ ಮಾಡಬಹುದಾದ ಪಾತ್ರೆಗಳು, ಕೊಳವೆಬಾವಿ ಹಾಗೂ ಹೊಳೆಯ ನೀರಿನ ಲಭ್ಯವಿದೆ.

ಭವನ ದೇವಸ್ಥಾನದ ಹಿಂಭಾಗದಲ್ಲಿದ್ದರೂ ಸಹ ದ್ವಾರದವರೆಗೆ ವಾಹನಗಳು ಸಂಚರಿಸಲು ಸ್ಥಳಾವಕಾಶವಿದೆ. ಹೊರ ಭಾಗದಲ್ಲಿ ಎಲ್ಲ ರೀತಿಯ ವಾಹನಗಳ ನಿಲುಗಡೆಗೆ ವಿಶಾಲ ಜಾಗವಿದೆ.

ಕಟ್ಟಡ ಎತ್ತರ ಪ್ರದೇಶದಲ್ಲಿ ಇದ್ದು ಗಾಳಿ, ಬೆಳಕು ಸಮರ್ಪಕವಾಗಿದೆ. ಲಿಫ್ಟ್ ವ್ಯವಸ್ಥೆಗೂ ಅನುವು ಮಾಡಲಾಗಿದೆ. ಒಟ್ಟಾರೆ ಭವನ ಈ ಭಾಗದ ಜನರ ಆಧುನಿಕ ಶೈಲಿಯ ಸುಸಜ್ಜಿತ ಕಲ್ಯಾಣ ಮಂಟಪದ ಕೊರತೆಯನ್ನು ನೀಗಿಸಲಿದೆ ಎಂದು ಸಮಿತಿಯ ಸೋಮು ಗೌಡಶಿವಣ್ಣನವರ, ಪರಮೇಶ ಗೂಳಣ್ಣನವರ, ಚೆನ್ನಬಸಪ್ಪ ಗೌಡಶಿವಣ್ಣನವರ (ನಂದೀಶ್ವರ), ಲೋಕೇಶ ನರಸಗೊಂಡರ, ಪ್ರಕಾಶ ಕೊಪ್ಪದ, ಕರಬಸಪ್ಪ ಮಾಕನೂರ ತಿಳಿಸಿದ್ದಾರೆ. ಶ್ರೀ ಸಿದ್ದೇಶ್ವರ ದೇವರ ಭಕ್ತರು ಹಾಗೂ ಸಾರ್ವಜನಿಕರು ನೀಡಿದ ಸುಮಾರು ಎರಡು ಕೋಟಿಗೂ ಹೆಚ್ಚು ದೇಣಿಗೆಯಿಂದ ಕಟ್ಟಲಾದ ಈ ಭವನ ಕಲ್ಯಾಣ ಕಾರ್ಯಗಳ ಜೊತೆಗೆ ಇನ್ನಿತರೆ ಸಭೆ, ಸಮಾರಂಭಗಳಿಗೆ ಹಾಗೂ ಬಡವರಿಗೆ ರಿಯಾಯ್ತಿ ದರದಲ್ಲೂ ಕೊಡುವ ಇಚ್ಛೆಯನ್ನು ಸಮಿತಿ ವ್ಯಕ್ತಪಡಿಸಿದೆ.

## ವೈದ್ಯರು

ವೈದ್ಯನಾಗುವುದೆಂದರೆ
ಸುಲಭದ ಮಾತಲ್ಲ
ಛಲ ಬೇಕು ಮನದಲ್ಲಿ
ಮೂರು ದಶಕಕೂ ಮಿಕ್ಕಿ
ಓದುತ್ತಲಿರಬೇಕು ಅರ್ಧ ಬದುಕು
ಕಲಿಯುವುದಕ್ಕೇ ಮೀಸಲು..

ಬಲಬೇಕು ಮನೆಯಲ್ಲಿ
ಮನೆಯ ಮಂದಿ ಎಲ್ಲ
ಕಣ್ಣು ಕಿರಿದು ಮಾಡುತ
ಮನೆಯ ಮಗ ಬಂದು
ಮನೆಯ ಸೇರಲಿ ಎಂದು
ದಾರಿ ಕಾಯುವಲ್ಲಿ

ರಾತ್ರಿಯೋ ಹಗಲೋ
ವಾರದ ಕೊನೆ ದಿನವೋ
ಮೊದಲದಿನದ
ಮುಂಜಾನೆಯೋ
ಅರಿವಿಲ್ಲದ ಬದುಕು
ಕಾಲ ಸರಿದದ್ದು ಗೊತ್ತಾಗದ ಹಾಗೆ

ಪತ್ನಿ ಮಕ್ಕಳ ಜೊತೆ
ಮತ್ತೆ ಹೆತ್ತವರ ಜೊತೆ
ಕಾಲ ಕಳೆದದ್ದಕ್ಕಿಂತ
ರೋಗಿಗಳ ಜೊತೆಗೆ
ಅವರ ನೆಂಟರ ಜೊತೆ
ಸೇರಿ ಬದುಕಿದ್ದೇ ಹೆಚ್ಚು

ನೂರೆಂಟು ಕಾನೂನು
ನಿತ್ಯ ಕಾಡುವ ತೊಡಕು
ವಾಸಿಯಾದರೆ ನಾರಾಯಣ
ಇಲ್ಲದಿರೆ ಗೋವಿಂದ...

ಎರಡು ಹೊತ್ತಿನ ಊಟಕ್ಕೆ
ಒಂದಿಷ್ಟು ಆಸರೆಗೆ
ಜರೂರಿದೆಯೇ
ಇಷ್ಟೊಂದು ದುಡಿಯುವುದು
ಅನಿಸಿದಾಗಲೆಲ್ಲ
ಒಳದನಿಯು ನುಡಿದೀತು
"ಬದುಕಲೆನಿತೋ ದಾರಿ
ಬದುಕಿಸಲು ಇದೊಂದೇ ದಾರಿ"

ಕಷ್ಟವೇನೋ ಉಂಟು
ಸಾರ್ಥಕತೆ ಇದೆಯಲ್ಲ
ಕಣ್ಣೀರೊರೆಸಿದ ತೃಪ್ತಿ
ಧನ್ಯತೆಯ ಸಂತೃಪ್ತಿ....

**-ಡಾ. ಶಿವಾನಂದ ಕುಬಸದ**
ದಾವಣಗೆರೆ

# ಮಧ್ಯ ಕರ್ನಾಟಕ ಮತ್ತು ಕನ್ನಡ



ನಮ್ಮ ಮನದಾಳದ ಮಾತನ್ನು ಹೊರತರಲು ಕೇವಲ ಮಾತೃಭಾಷೆಯಿಂದ ಮಾತ್ರ ಸಾಧ್ಯ. ಕನ್ನಡ ನಮಗೆ ಬರೀ ಭಾಷೆಯಾಗಿ ಉಳಿದಿಲ್ಲ. ಅದು ನಮ್ಮ ಬದುಕು. ಅತ್ಯಂತ ಪ್ರಾಚೀನವೂ ಮತ್ತು ಅತ್ಯಂತ ಸುಂದರ ಲಿಪಿಯನ್ನು ಹೊಂದಿರುವ ಇಂತಹ ಭಾಷೆಯನ್ನು ನಾವು ಮಾತನಾಡುತ್ತೇವೆ ಎನ್ನುವುದೇ ಕನ್ನಡಿಗರಾದ ನಮಗೆ ಹೆಮ್ಮೆ.

ಕರ್ನಾಟಕ ರಾಜ್ಯ ಏಕೀಕರಣವಾದ ನಂತರ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಅದರಲ್ಲಿ ಗಡಿ ಸಮಸ್ಯೆ, ನದಿ ನೀರಿನ ಹಂಚಿಕೆ ಸಮಸ್ಯೆ, ಭಾಷಾವಾರು ಪ್ರಾಂತ್ಯಗಳ ಸಮಸ್ಯೆ ಹೀಗೆ ಹಲವಾರು ಸಮಸ್ಯೆಗಳು ಇದ್ದರೂ ಸಹ ಇವುಗಳ ಬಿಸಿ ಮಧ್ಯ ಕರ್ನಾಟಕಕ್ಕೆ ತಟ್ಟುವುದಿಲ್ಲ. ಅದೇ ರೀತಿ ಕನ್ನಡದ ಮೇಲಿನ ಬೇರೆ ಭಾಷೆಗಳ ದಬ್ಬಾಳಿಕೆಯು ಮಧ್ಯಕರ್ನಾಟಕದ ನಾಲ್ಕೈದು ಜಿಲ್ಲೆಗಳಿಗೆ ಅಷ್ಟಾಗಿ ಇಲ್ಲ. ಆದ್ದರಿಂದ ಮಧ್ಯ ಕರ್ನಾಟಕದ ಜನ ಭಾಷೆ ವಿಷಯದಲ್ಲಿ ಆತಂಕಕ್ಕೊಳಪಡುವ ಸನ್ನಿವೇಶಗಳು ಕಡಿಮೆಯೇ.

ಇಲ್ಲಿ ಬೇರೆ ಭಾಷೆಗಳ ಮೇಲಿನ ವ್ಯಾಮೋಹ ಕಡಿಮೆಯೇನಿಲ್ಲ. ಇಲ್ಲಿನ ಜನರೂ ಸಹ ಇಂಗ್ಲಿಷ್ ಮಾಧ್ಯಮದ ಶಿಕ್ಷಣಕ್ಕೆ ಆದ್ಯತೆ ಕೊಡುತ್ತಾರೆ. ಆದರೂ ಇಲ್ಲಿನ ಜನರ ಬದುಕು ಕನ್ನಡ ಭಾಷೆಯಲ್ಲಿ ಬೆರೆತುಹೋಗಿದೆ. ಇಲ್ಲಿ ಅನ್ಯಭಾಷಿಗರು ಬಂದರೆ ಅವರು ಕನ್ನಡ ಕಲಿಯದೆ ಬೇರೆ ವಿಧಿ ಇಲ್ಲ.

ಜಾಗತಿಕ ಮಟ್ಟದಲ್ಲಿ ಒಂದು ವರದಿಯ ಪ್ರಕಾರ ಅತಿ ಶೀಘ್ರವಾಗಿ ನಶಿಸುತ್ತಿರುವ ಭಾಷೆಗಳಲ್ಲಿ ಕನ್ನಡವೂ ಒಂದು ಎಂದು ಹೇಳಲಾಗುತ್ತದೆ. ಆದರೆ, ಮಧ್ಯಕರ್ನಾಟಕದ ಕನ್ನಡಕ್ಕೆ ನಿಜವಾಗಲೂ ಆ ಸ್ಥಿತಿ ಇಲ್ಲ. ಇಲ್ಲಿ ಸಾವಿರ ಸಾವಿರ ವರ್ಷಗಳು ಕಳೆದರೂ ಕನ್ನಡ ಹೀಗೆ ಇರುತ್ತದೆ. ಕೇವಲ ಇಂಗ್ಲಿಷ್ ಕಲಿತ ಮಾತ್ರಕ್ಕೆ ನಮ್ಮ ಚಿಂತನೆಗಳು, ನಮ್ಮ ವ್ಯಕ್ತಿತ್ವ ಬದಲಾಗುವುದಿಲ್ಲ ಅದು ನಮ್ಮ ಹುಟ್ಟಿನ ಜೊತೆಯೇ ಅಂದರೆ ಮಾತೃಭಾಷೆಯಲ್ಲಿಯೇ ಬಂದಿರುತ್ತದೆ.

'ಯಾವ ಕಲಿಕೆ ಮಾನವನನ್ನು ಸಕಲ ಅಜ್ಞಾನಗಳಿಂದ ಪಾರು ಮಾಡಿ ಸಂರಕ್ಷಿಸುತ್ತದೆಯೋ ಅದೇ ನಿಜವಾದ ವಿದ್ಯೆ' ಎಂದು ಉಪನಿಷತ್‌ನಲ್ಲಿ ಹೇಳಲಾಗಿದೆ. ಇಲ್ಲಿ ನಾವು ಮಕ್ಕಳಿಗೆ ಶಿಕ್ಷಣವನ್ನು ಇಂಗ್ಲಿಷ್ ಅಥವಾ ಕನ್ನಡ ಮಾಧ್ಯಮದಲ್ಲಿ ಕೊಟ್ಟೆವು ಎಂಬುದು ಮುಖ್ಯ ಅಲ್ಲವೇ ಅಲ್ಲ.

ಕನ್ನಡ ನಶಿಸುತ್ತಿದೆ. ಕನ್ನಡವನ್ನು ಉಳಿಸಿ ಉಳಿಸಿ ಎಂದು ಬೊಬ್ಬಿಡುವ ಜನಗಳು ಒಂದು ಕಡೆಯಾದರೆ, ಕನ್ನಡ ಸಂಘಗಳನ್ನು ಕಟ್ಟಿಕೊಂಡು ಕನ್ನಡಕ್ಕಾಗಿ ಹೋರಾಡುವವರು ಇನ್ನೊಂದು ಕಡೆ. ಇಂಥವರನ್ನು ನೋಡಿ ಚಾಣಕ್ಯ ಒಂದು ಕಡೆ ಹೇಳುತ್ತಾನೆ... ಜಗತ್ತು ಕೆಟ್ಟಿದೆ ಎಂದು ಹೇಳುವುದರಲ್ಲಿ ವಾಸ್ತವಿಕತೆ ಇರಬಹುದಾದರೂ ಅದನ್ನು ಕೆಡಿಸಿದ ಪ್ರಕ್ರಿಯೆಯಲ್ಲಿ ನಮ್ಮ ಪಾಲು ಇದೆ. ಇಂತಹ ಹೋರಾಟ ಮಾಡುವ ಜನರು ಎಷ್ಟು ಜನ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿ, ಮಾತೃಭಾಷೆಯಲ್ಲಿ ಶಿಕ್ಷಣ ಕೊಡಿಸುತ್ತಿದ್ದಾರೆ? ಹೋರಾಟ ಕಡೆಯ ಹಂತ. ಅದಕ್ಕಿಂತ ಮೊದಲು ಸಮಸ್ಯೆಗಳನ್ನು ಸರಿಪಡಿಸಲು ಬೇಕಾದಷ್ಟು ಮಾರ್ಗಗಳಿವೆ, ಅವುಗಳನ್ನು ಆರಿಸಿಕೊಳ್ಳಬೇಕು ಅಷ್ಟೇ.

ಕನ್ನಡ ನಾವು ಮೊದಲು ಬೇರೆಯವರೊಂದಿಗೆ ಸ್ಪಂದಿಸಿದ ಭಾಷೆ ಇದನ್ನು ಬಿಟ್ಟು ನಮಗೆ ಬದುಕಿಲ್ಲ. ಆದ್ದರಿಂದ ಈ ಭಾಷೆ ಅವನತಿ ನಮ್ಮೆಲ್ಲರ ಅವನತಿ. ಆದ್ದರಿಂದ ಇದನ್ನು ನಾವು ಶುದ್ಧವಾಗಿ ಬಳಸಿದರೆ ಅದು ಬೆಳೆಯುತ್ತದೆ.

'ಜನರು ಭಾಷೆಯಿಂದಲೇ ಮುಂದಕ್ಕೆ ಬರಬಲ್ಲರು. ಇತರೆ ಭಾಷೆಯಿಂದ ಕಲಿಯುವುದನ್ನು ಕಲಿಯೋಣ, ಅದರ ವಿಷಯದಲ್ಲಿ ದ್ವೇಷ ಬೇಡ. ಆದರೆ, ನಾವು ಮುನ್ನಡೆಯಬೇಕಾದರೆ ನಮ್ಮ ಭಾಷೆಯೇ ರಾಜಮಾರ್ಗ' ಎಂದು ಬಂಕಿಮಚಂದ್ರ ಚಟರ್ಜಿ ಹೇಳುತ್ತಾರೆ.



-ಪದ್ಮ ರವಿ,
ಬೆಂಗಳೂರು
Email : padma-ravi929@gmail.com

## ಕೆ.ಪಿ. ನಂಜುಂಡಿ ಹೇಳಿಕೆಗೆ ಸ್ವರ್ಣಕಾರ ಸಂಘದ ಖಂಡನೆ

ದಾವಣಗೆರೆ, ನ.7- ದೈವಜ್ಞ ಬ್ರಾಹ್ಮಣ ಸಮಾಜದ ಬಗ್ಗೆ ವಿಧಾನಪರಿಷತ್ ಸದಸ್ಯ ಕೆ.ಪಿ. ನಂಜುಂಡಿ ಹಗುರವಾಗಿ ಹೇಳಿಕೆ ನೀಡಿರುವುದು ಖಂಡನೀಯ. ಅವರು ಸಮಾಜದ ಕ್ಷಮೆ ಕೇಳಬೇಕು ಎಂದು ಕರ್ನಾಟಕ ಸ್ವರ್ಣಕಾರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ್ ಡಿ. ರಾಯ್ಕರ್ ಒತ್ತಾಯಿಸಿದರು.

ದೈವಜ್ಞರು ಮುದ್ದೆ ಕದಿಯುವವರು, ಅವರನ್ನು ವಿಶ್ವಕರ್ಮ ನಿಗಮದಿಂದ ಕಿತ್ತೊಗೆಯಬೇಕು. ಪ್ರವರ್ಗ 2ಎ ಮಾನ್ಯತೆ ಕಿತ್ತುಕೊಳ್ಳಬೇಕು ಎಂದು ನಂಜುಂಡಿ ಹೇಳಿರುವುದು ಖಂಡನೀಯ ಎಂದು ಅವರು ತಿಳಿಸಿದರು.

ಸಮಾಜದ ಮುಖಂಡ, ಬಿಜೆಪಿ ಯುವ ಮೋರ್ಚಾ (ಉತ್ತರ ವಲಯ) ಅಧ್ಯಕ್ಷ ಸಚಿನ್ ವೆರ್ಣೇಕರ್, ನಂಜುಂಡಿ ಅವರು ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ಸಮಾಜದಲ್ಲಿ ಒಡಕು ಮೂಡಿಸುತ್ತಿದ್ದಾರೆ, ಇದು ಖಂಡನೀಯ. ದೈವಜ್ಞ ಸಮಾಜವನ್ನು ಪ್ರವರ್ಗ '2ಎ' ಯಿಂದ ತೆಗೆಯುವಂತೆ ಹೇಳಲು ಅವರಿಗೆ ಏನು ಅಧಿಕಾರವಿದೆ? ಅವರನ್ನು ನಮ್ಮ ನಾಯಕರು ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಉದ್ದೇಶಪೂರ್ವಕವಾಗಿ ಅವರು ಈ ರೀತಿಯ ಹೇಳಿಕೆ ನೀಡುತ್ತಿದ್ದಾರೆ ಎಂದು ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಹಯಗ್ರೀವ ದೈವಜ್ಞ ಯುವ ವೇದಿಕೆ ಕಾರ್ಯದರ್ಶಿ ಯೋಗರಾಜ್ ಅಣ್ವೇಕರ್, ದೈವಜ್ಞ ಬ್ರಾಹ್ಮಣ ಸಮಾಜದ ನಿರ್ದೇಶಕ ಪ್ರಕಾಶ್ ಎಲ್. ದೈವಜ್ಞ ಚಿನ್ನ, ಬೆಳ್ಳಿ ಕೆಲಸಗಾರರ ಸಂಘದ ಅಧ್ಯಕ್ಷ ಜಗನ್ನಾಥ ವೆರ್ಣೇಕರ್ ಇದ್ದರು.

## ಮುಂದಿನ ಮುಂಗಾರಿನಲ್ಲಿ ಹವಾಮಾನ ಇಲಾಖೆಯಿಂದ ಮಲೇರಿಯಾ ಮುನ್ನೆಚ್ಚರಿಕೆ


ನವದೆಹಲಿ, ನ.7 – ಮುಂದಿನ ಮುಂಗಾರಿನಿಂದ ಮಲೇರಿಯಾ ಬಗ್ಗೆಯೂ ಹವಾಮಾನ ಇಲಾಖೆ ಮುನ್ಸೂಚನೆ ನೀಡಲಿದೆ ಎಂದು ಭೂ ವಿಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಂ. ರಾಜೀವನ್ ತಿಳಿಸಿದ್ದಾರೆ.

ಮಲೇರಿಯಾ ಹಾಗೂ ಮಳೆ ಮತ್ತು ತಾಪಮಾನಗಳ ನಡುವೆ ಇರುವ ಸಂಬಂಧದ ಕುರಿತು ಅಧ್ಯಯನ ನಡೆಸಲಾಗಿದೆ. ನಾಗಪುರದಲ್ಲಿ ಮಲೇರಿಯಾ ಕುರಿತು ಮೊದಲ ಅಧ್ಯಯನ ನಡೆಸಲಾಗಿದೆ. ಇದನ್ನು ಬೇರೆ ಪ್ರದೇಶಗಳಿಗೂ ಅನ್ವಯಿಸಲಾಗುವುದು ಎಂದು ರಾಜೀವನ್ ತಿಳಿಸಿದ್ದಾರೆ.

ಡೆಂಗ್ಯೂ ಹಾಗೂ ಕಾಲರಾ ಸೇರಿದಂತೆ ಮುಂಗಾರಿನ ವೇಳೆ ಬರುವ ಇತರೆ ರೋಗಗಳಿಗೂ ಇದೇ ತಂತ್ರವನ್ನು ಅಳವಡಿಸಿಕೊಳ್ಳಲಾಗುವುದು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಉನ್ನತ ಕಾರ್ಯ ನಿರ್ವಹಣೆಯ ಕಂಪ್ಯೂಟಿಂಗ್ ಅನ್ನು ಈಗಿರುವ 10 ಪಿಟಾಫ್ಲಾಪ್‌ಗಳಿಂದ 40 ಪಿಟಾಫ್ಲಾಪ್‌ಗಳಿಗೆ ಹೆಚ್ಚಿಸುವ ಕಾರ್ಯವೂ ನಡೆದಿದೆ. ಇದರಿಂದ ಹೆಚ್ಚು ನಿಖರವಾಗಿ ಹವಾಮಾನ ಮುನ್ಸೂಚನೆ ಪಡೆಯಬಹುದು ಎಂದವರು ಹೇಳಿದ್ದಾರೆ.

# ಪಂಚಮಸಾಲಿಗೆ 2ಎ ಮೀಸಲಾತಿಗೆ ಒತ್ತಾಯ



**ಹರಪನಹಳ್ಳಿಯಲ್ಲಿ ಉಪ ವಿಭಾಗಾಧಿಕಾರಿಗಳಿಗೆ ಮನವಿ**

ಹರಪನಹಳ್ಳಿ, ನ.7 - ವೀರಶೈವ ಲಿಂಗಾಯಿತ ಪಂಚಮಸಾಲಿ ಸಮುದಾಯಕ್ಕೆ ರಾಜ್ಯ ಸರ್ಕಾರವು 2ಎ ಮೀಸಲಾತಿ ಹಾಗೂ ಕೇಂದ್ರ ಸರ್ಕಾರವು ಒಬಿಸಿ ಪಟ್ಟಿಗೆ ಸೇರಿಸಬೇಕು ಎಂದು ಆಗ್ರಹಿಸಿ ವೀರಶೈವ ಲಿಂಗಾಯತ ಪಂಚಮಸಾಲಿ ತಾಲ್ಲೂಕು ಯುವ ಘಟಕದಿಂದ ಉಪವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ವಕೀಲರಾದ ಆರುಂಡಿ ನಾಗರಾಜ ಮಾತನಾಡಿ, ರಾಜ್ಯ ಸರ್ಕಾರ ವೀರಶೈವ ಲಿಂಗಾಯಿತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕು. ಕೇಂದ್ರ ಸರ್ಕಾರ ಈ ಸಮುದಾಯವನ್ನು ಒಬಿಸಿ ಮೀಸಲಾತಿ ಪಟ್ಟಿಗೆ ಸೇರ್ಪಡೆಗೊಳಿಸುವ ಮೂಲಕ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಮುಖಂಡ ಶಶಿಧರ ಪೂಜಾರ ಮಾತನಾಡಿದರು.

ವೀರಶೈವ ಲಿಂಗಾಯತ ಪಂಚಮಸಾಲಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪ ದಿವಾಕರ, ಟಿಎಪಿಸಿಎಂಎಸ್ ನಿರ್ದೇಶಕ ಡಿ.ಜಿ.ಪ್ರಕಾಶ್ ಗೌಡ, ಮುಖಂಡರಾದ ಕೊಟ್ರೇಶ್, ಬಾಗಳಿ ಕೊಟ್ರೇಶಪ್ಪ, ನೀಲಗುಂದ ಸಿದ್ದಲಿಂಗಪ್ಪ, ಕಾಶಿನಾಥ, ಕೊಟ್ರೇಶ್, ತಲುವಾಗಲು ಚನ್ನನಗೌಡ, ಕೆ.ವಿರುಪಾಕ್ಷಪ್ಪ, ಎನ್.ಮಂಜುನಾಥ, ಚಂದ್ರಪ್ಪ ಗಾಂಧಿ, ಜಿಲ್ಲಾ ಘಟಕದ ಮುಲಾಲಿ ಬಸವರಾಜ, ತಾಲ್ಲೂಕು ಯುವ ಘಟಕದ ರವಿ ಅಧಿಕಾರ, ಮಹೇಶ್‌ಪೂಜಾರ, ಅಡವಿಹಳ್ಳಿ ಮಂಜುನಾಥ, ಬೇಲೂರು ಸಿದ್ದೇಶ್, ಸುರೇಶ್ ಶ್ಯಾನಭೋಗರ, ವೀರೇಶ್ ಇಟ್ಟಿಗಿ, ಹೆಚ್.ಅಶೋಕ, ಪೂಜಾರ ರಾಜು, ಸಣ್ಣ ನಿಂಗನಗೌಡ, ಪರಮೇಶ್ವರ, ಪ್ರಕಾಶ್, ಶ್ರೀಶೈಲಾ, ಕರಿಬಸಪ್ಪ, ಬಸವರಾಜ ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಇದ್ದರು.

## ನಾಲ್ಕು ವಿಶ್ವವಿದ್ಯಾನಿಲಯಗಳಿಗೆ ಕುಲಪತಿಗಳ ನೇಮಕ

ಬೆಂಗಳೂರು, ನ. 7 – ರಾಜ್ಯದ ನಾಲ್ಕು ವಿಶ್ವವಿದ್ಯಾನಿಲಯಗಳಿಗೆ ಕುಲಪತಿಗಳನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದ್ದು, ಡಾ. ಎಲ್. ಗೋಮತಿ ದೇವಿ ಅವರನ್ನು ಬೆಂಗಳೂರಿನ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಿಸಲಾಗಿದೆ.

ಡಾ. ಹರೀಶ್ ರಾಮಸ್ವಾಮಿ ಅವರನ್ನು ರಾಯಚೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಿಸಲಾಗಿದೆ. ಡಾ. ಶ್ರೀನಿವಾಸ ಎಸ್. ಬಳ್ಳಿ ಅವರನ್ನು ಬೆಂಗಳೂರಿನ ನೃಪತುಂಗ ವಿಶ್ವವಿದ್ಯಾನಿಲಯ, ಡಾ. ಪುಟ್ಟರಾಜು ಅವರನ್ನು ಮಂಡ್ಯ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನೇಮಿಸಲಾಗಿದೆ.

## ಗ್ರಾಸಿಂನಲ್ಲಿ ಕೃತಕ ಕಾಲು ಜೋಡಣೆ

ರಾಣೇಬೆನ್ನೂರು, ನ.7- ಕುಮಾರಪಟ್ಣಂನ ಗ್ರಾಸಿಂ ಜನಸೇವಾ ಟ್ರಸ್ಟ್ ವತಿಯಿಂದ ದಿ. ಆದಿತ್ಯ ವಿಕ್ರಂ ಬಿರ್ಲಾ ಅವರ ಜನ್ಮದಿನದ ಅಂಗವಾಗಿ ಇದೇ ದಿನಾಂಕ 19 ರಂದು ಉಚಿತವಾಗಿ ಕೃತಕ ಕಾಲು ಜೋಡಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ರೇಣುಕ ನಾಗನೂರ (99643 48288), ಮಂಜುನಾಥ (87224 29612) ಅವರುಗಳನ್ನು ಸಂಪರ್ಕಿಸಬಹುದು.

# ಸೈಬರ್ ಸುರಕ್ಷತೆ : ದಾವಣಗೆರೆ ಅರ್ಬನ್ ಬ್ಯಾಂಕಿನಲ್ಲಿ ಕಾರ್ಯಾಗಾರ




ದಾವಣಗೆರೆ, ನ.7- ಸೈಬರ್ ಸುರಕ್ಷತೆಗೆ ಸಂಬಂಧಿಸಿದಂತೆ ಅರಿವು ಮೂಡಿಸುವ ನಿಟ್ಟಿನಲ್ಲಿ ನಗರದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ತನ್ನ ಬ್ಯಾಂಕಿನ ನಿರ್ದೇಶಕ ಮಂಡಳಿ, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ ಕಾರ್ಯಾಗಾರವನ್ನು ನಡೆಸಲಾಯಿತು.

ಬ್ಯಾಂಕಿನ ಸಭಾಂಗಣದಲ್ಲಿ ಕಳೆದ ವಾರ ಏರ್ಪಾಡಾಗಿದ್ದ ಕಾರ್ಯಾಗಾರವನ್ನು ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಅವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುವ ಕಾರ್ಯಕ್ಕೆ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ ಸಾಥ್ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೋಗುಂಡಿ ಬಕ್ಕೇಶಪ್ಪ, ಕಾರ್ಯಾಗಾರವನ್ನು ಸದುಪಯೋಗಪಡಿಸಿಕೊಳ್ಳುವ ದಿಸೆಯಲ್ಲಿ ಬ್ಯಾಂಕಿನ ಸಿಬ್ಬಂದಿಗಳು ಸೈಬರ್ ಸುರಕ್ಷತೆಯ ನಿಯಮಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಬ್ಯಾಂಕ್ ಸಾರ್ವಜನಿಕರ ನಂಬಿಕೆ ಮತ್ತು ವಿಶ್ವಾಸಕ್ಕೆ ಪಾತ್ರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಅದನ್ನು ಕಾಪಾಡಿಕೊಂಡು ಹೋಗುವ ಸದುದ್ದೇಶದಿಂದ ಸೈಬರ್ ಸುರಕ್ಷತಾ ನಿಯಮಗಳನ್ನು ಪಾಲಿಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ನೀಡಿದ ಆದೇಶದ ಮೇರೆಗೆ ಈ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

ಬ್ಯಾಂಕಿನ ಮತ್ತು ಜೀವನದ ದಿನನಿತ್ಯದ ಒಡನಾಡಿಯಂತಾಗಿರುವ ಡಿಜಿಟಲ್ ಗೆ ನಾವು ಹೊಂದಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಿರುವ ಕಾರಣ, ಸೈಬರ್ ಸುರಕ್ಷತಾ ನಿಯಮಗಳನ್ನು ಪಾಲಿಸಬೇಕಿದೆ. ಈ ಹಿನ್ನೆಲೆ ಯಲ್ಲಿ ಅರಿವು ಮೂಡಿಸುವ ಕಾರ್ಯಾಗಾರಗಳನ್ನು ನಡೆಸಲು ಒತ್ತು ನೀಡಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಆದೇಶದ ಮೇರೆಗೆ ಈ ಕಾರ್ಯಾಗಾರವನ್ನು ರೂಪಿಸಲಾಗಿದ್ದು, ಮುಂದಿನ ದಿನಗಳಲ್ಲಿ ಬ್ಯಾಂಕಿನ ಸದಸ್ಯರು ಮತ್ತು ಗ್ರಾಹಕರಿಗೂ ಕಾರ್ಯಾಗಾರಗಳನ್ನು ನಡೆಸಲಾಗುವುದು ಎಂದು ಬಕ್ಕೇಶಪ್ಪ ಹೇಳಿದರು.

ಬ್ಯಾಂಕಿನ ಉಪಾಧ್ಯಕ್ಷ ಅಂದನೂರು ಮುಪ್ಪಣ್ಣ ಮಾತನಾಡಿ, ಸೈಬರ್ ಸುರಕ್ಷತಾ ನಿಯಮಗಳನ್ನು ಪಾಲಿಸುವಲ್ಲಿ ಒತ್ತು ನೀಡುವುದರ ಮೂಲಕ ಬ್ಯಾಂಕಿನ ಸುಭದ್ರತೆ ಮತ್ತು ಉನ್ನತಿಗೆ ಸಹಕರಿಸಬೇಕು ಎಂದು ಕರೆ ನೀಡಿದರು.

ಬ್ಯಾಂಕಿನ ಹಿರಿಯ ನಿರ್ದೇಶಕರುಗಳಾದ ಮತ್ತಿಹಳ್ಳಿ ವೀರಣ್ಣ, ದೇವರಮನೆ ಶಿವಕುಮಾರ್, ಟಿ.ಎಸ್. ಜಯರುದ್ರೇಶ್, ಎಂ.ದೊಡ್ಡಪ್ಪ ಅವರುಗಳು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಿರ್ದೇಶಕರುಗಳಾದ ಪಲ್ಲಾಗಟ್ಟೆ ಶಿವಾನಂದಪ್ಪ, ಎಂ. ಚಂದ್ರಶೇಖರ್, ಕಂಚಿಕೆರೆ ಮಹೇಶ್, ಅಜ್ಜಂಪುರ ಶೆಟ್ರು ವಿಜಯಕುಮಾರ್, ಶ್ರೀಮತಿ ಸುರೇಖಾ ಎಂ. ಚಿಗಟೇರಿ, ಇ.ಎಂ. ಮಂಜುನಾಥ, ನಲ್ಲೂರು ಎಸ್. ರಾಘವೇಂದ್ರ, ವಿ. ವಿಕ್ರಂ, ಬೆಳ್ಳೂಡಿ ಮಂಜುನಾಥ್, ಮುಂಡಾಸ್ ವೀರೇಂದ್ರ ಅವರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸೈಬರ್ ಸುರಕ್ಷತೆಯ ಸುರಿತ ತರಬೇತುದಾರರಾದ ಮಂಗಳೂರಿನ ನವೀನ್ ಶೆಟ್ಟಿ (ಸಿಐಎಸ್ ಎ) ಅವರು ಕಾರ್ಯಾಗಾರವನ್ನು ನಡೆಸಿಕೊಟ್ಟರು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಡಿ.ವಿ. ಆರಾಧ್ಯಮಠ್ ಅವರು ಕಾರ್ಯಾಗಾರದ ಉಸ್ತುವಾರಿ ವಹಿಸಿದ್ದರು.

ಶ್ರೀಮತಿ ಡಿ.ಇ. ಸಿಂಧೂ ಅವರ ಪ್ರಾರ್ಥನೆಯ ನಂತರ ಉಪ ಪ್ರಧಾನ ವ್ಯವಸ್ಥಾಪಕ ಬಿ.ಎಸ್. ಮಲ್ಲೇಶ್ ಸ್ವಾಗತಿಸಿದರು. ಬಿ.ಎಸ್. ಪ್ರಶಾಂತ್ ಅವರಿಂದ ಅತಿಥಿ ಉಪನ್ಯಾಸಕರ ಪರಿ ಚಯ, ಶ್ರೀಮತಿ ಕೆ.ಶಿಲ್ಪ ಅವರಿಂದ ವಂದನಾ ರ್ಪಣೆ, ವ್ಯವಸ್ಥಾಪಕ ಹೆಚ್.ವಿ. ರುದ್ರೇಶ್ ಅವರಿಂದ ಕಾರ್ಯಕ್ರಮ ನಿರೂಪಣೆ ನಡೆಯಿತು.

## ಪದವಾಣಿ-06

ರಚನೆ : ನಾಗರಾಜು ಗೊಡಬನಹಾಳ್




**ಎಡದಿಂದ ಬಲಕ್ಕೆ :**

1) ಸಪ್ತದಿನಗಳಲ್ಲಿ ಒಂದು 5
4) ಕೊನೆಗಿರುವ ವೃಕ್ಷದಿಂದಾದ ಕಾಳಗ 3
6) ರಾಖಿಯ ಸಮಾನಾರ್ಥಕ ಪದ 2
7) ಕನ್ನಡ ಸಾಹಿತ್ಯ ಪರಿಷತ್ತನ್ನು ಸಂಕ್ಷಿಪ್ತವಾಗಿ ಹೇಳಿ 3
9) ಮೂರಕ್ಷರದ ರಾತ್ರಿ 3
11) ಊಟ, ವಸತಿಗಳನ್ನು ಒದಗಿಸುವ ಧರ್ಮಾಲಯ 2
12) ಸರಸದ ವಿರುದ್ಧ ಪದ ಕೊನೆಗೆ ದೀರ್ಘವಾಗಿದೆ 3
14) ನಿಯತಕಾಲಿಕೆಗಳ ವಾರ್ಷಿಕ ಸಂಚಿಕೆಗಳ ಸಂಗ್ರಹ 3
16) ಕನ್ನಡದ ಕ್ಯೂ ತಿರುಗಿದೆ 2
17) ಒಂದು ಬಗೆಯ ಸಣ್ಣಕಾಳಿನ ಧಾನ್ಯ 3
19) ಬೆಲ್ಲದಿಂದ ಮಾಡಿದ ಕುಡಿಯುವ ಪಾನೀಯ 3
21) ಊರಿನೊಳಗೆ ಬರುವ ಮಾರಾಟದ ವಸ್ತುಗಳ ಮೇಲಿನ ಕರ ವಸೂಲಿ ಸ್ಥಳ 2
23) ಲೆಕ್ಕ ಬಲ್ಲ ಲೆಕ್ಕಿಗ 3
24) ಸರಕಾರದ್ದಲ್ಲದ ಸ್ವಂತ ವಿದ್ಯಾಮಂದಿರ 5

**ಮೇಲಿನಿಂದ ಕೆಳಕ್ಕೆ :**

1) ದೇವರಲ್ಲಿ ನಂಬಿಕೆಯುಳ್ಳವನು 3
2) ಏಳು ದಿವಸಗಳಲ್ಲಿ ಒಂದು ದಿನ 2
3) ಪುಸ್ತಕದ ಮೇಲು ಹೊದಿಕೆ 4
5) ಪ್ರಜಾಪತಿಯಿಂದ ಬಂದ ಮಾನವ ಸಂತಾನ 3
8) ಓದು, ಬರಹ ಬಲ್ಲವನು 3
9) ಬಾಳುವೆ ಮಾಡುವ ಮನೆತನದ ಕುಟುಂಬ ತಲೆಕೆಳಗಾಗಿದೆ 3
10) ಸಮೀಪ, ಹತ್ತಿರ 3
12) ಆಗಸದಲ್ಲಿ ಹಾರಾಡುವ ಲೋಹದ ಹಕ್ಕಿ 3
13) ಸಾಗಿಸುವುದು, ಕಳುಹಿಸುವುದು 3
15) ಚಟ್ನಿಗೆ ಬಳಸುವ ಸುವಾಸಿತ ಸೊಪ್ಪು 3
16) ಉತ್ತರ ಕರ್ನಾಟಕದ ಊಟ ಸಿಗುವ ಹೋಟೆಲ್ ತಲೆಕೆಳಗಾಗಿದೆ 4
18) ನೀರಿನ ಅಧಿಪತಿ, ಅಷ್ಟದಿಕ್ಪಾಲಕರಲ್ಲಿ ಒಬ್ಬ 3
20) ಎತ್ತುಗಳನ್ನು ಹೂಡಿ ಬಾವಿಯಿಂದ ನೀರೆತ್ತುವ ಸಾಧನ 3
22) ಕೆಮ್ಮಿನ ಸಮಾನಾರ್ಥಕ ಪದ 2

(ಉತ್ತರಗಳು ಮುಂದಿನ ವಾರಕ್ಕೆ)

### ಪದವಾಣಿ - 05ರ ಉತ್ತರಗಳು :

**ಎಡದಿಂದ ಬಲಕ್ಕೆ :** 1) ಅಮವಾಸ್ಯೆ 3) ಶಾಮನೂರು 5) ಮಹಲು 6) ಮಧುಮಾಸ 8) ವಠಾರ 9) ಮಾನ 10) ಶಿವರಾಜಕುಮಾರ 12) ಮೂಗ 14) ತ್ರಿಮೂರ್ತಿ 15) ವಿಷಕಂಠ 16) ಕಾನನ 17) ಮಾಗನೂರು 18) ಯಮಪುರಿ.

**ಮೇಲಿನಿಂದ ಕೆಳಕ್ಕೆ :** 1) ಅಯೋಮಯ 2) ಸಮಸ್ಯೆ 3) ಶಾಲು 4) ರುಧಿರ 7) ಮಾಧವಮೂರ್ತಿ 8) ವನಮಾನುಷ 9) ನೂಕು 11) ರಾಗ 13) ಹಠಮಾರಿ 14) ತ್ರಿಯಾಮಾ 15) ವಿನಯ 16) ಕಾರು.

# ದೇವಸ್ಥಾನದ ಬಾಗಿಲು ತೆರೆಯಲು ವಿರೋಧ



**(1ನೇ ಪುಟದಿಂದ)** ಅರ್ಚಕರಾಗಿದ್ದ ಬಿ.ಜಿ. ಲಿಂಗೇಶ್ ವಿರುದ್ಧ ಕೆಲ ದೂರುಗಳು ಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಅರ್ಚಕ ಲಿಂಗೇಶ್ ನನ್ನು ವಜಾಗೊಳಿಸಿದ್ದರು. ಇದನ್ನು ಪ್ರಶ್ನಿಸಿ ಆತ ಹೈಕೋರ್ಟ್ ಮೆಟ್ಟಿಲೇರಿದ್ದ. ಈ ಕಾರಣದಿಂದ ಮತ್ತು ಕೋವಿಡ್ ಹಿನ್ನೆಲೆಯಲ್ಲಿ ಬೀರಲಿಂಗೇಶ್ವರ ದೇವಸ್ಥಾನದ ಬಾಗಿಲಿಗೆ ಬೀಗ ಬಿದ್ದು, ಪೂಜೆ ಸ್ಥಗಿತಗೊಂಡಿದ್ದವು.

ಇಂದು ಬೆಳಗಿನ ಜಾವ ಕಂದಾಯ ನಿರೀಕ್ಷಕರು ಮುಜರಾಯಿ ಇಲಾಖೆ ನೇಮಿಸಿರುವ ಹೊಸ ಅರ್ಚಕನೊಂದಿಗೆ ದೇವಸ್ಥಾನದ ಬೀಗ ತೆರೆಯಲು ಆಗಮಿಸಿದ್ದರು. ಪ್ರಕರಣ ಇನ್ನೂ ಹೈಕೋರ್ಟ್‌ನಲ್ಲಿದೆ. ಹೀಗಾಗಿ ಬೀಗ ತೆರೆದು ಪೂಜೆ ನಡೆಸಲು ಅನುವು ಮಾಡಿಕೊಡುವುದಿಲ್ಲ ಎಂದು ಅಲ್ಲಿಯೇ ವಾಸವಿರುವ ಹಳೇ ಅರ್ಚಕ ಲಿಂಗೇಶ್ ಮತ್ತು ಅವರ ಸಂಬಂಧಿಕರು ಪಟ್ಟು ಹಿಡಿದಿದ್ದರು. ಇದರಿಂದ ಕೆಲ ಕಾಲ ದೇವಸ್ಥಾನದ ಆವರಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಮೇಯರ್ ಬಿ.ಜಿ. ಅಜಯ್ ಕುಮಾರ್ ಸಹ ಭೇಟಿ ನೀಡಿ ಮನವೊಲಿಸಲು ಪ್ರಯತ್ನಿಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್, ಅಧಿಕಾರಿಗಳೊಂದಿಗೆ ಚರ್ಚಿಸಿ, ದೇಗುಲದ ಬೀಗ ತೆಗೆಸಲು ಮುಂದಾದರು. ಆಗ ಈಗಾಗಲೇ ವಜಾಗೊಂಡಿರುವ ಅರ್ಚಕ ಲಿಂಗೇಶ್, ಪತ್ನಿ ಸುನೀತಾ ಹಾಗೂ ಅವರ ಕುಟುಂಬ ವರ್ಗದವರು ಬೀಗ ತೆರೆಯಲು ಅವಕಾಶ ನೀಡುವುದಿಲ್ಲ ಎಂದು ದೇವಸ್ಥಾನದ ಬಾಗಿಲಿನಲ್ಲಿ ನಿಂತು ಪ್ರತಿರೋಧಿಸಿದರು.

ಹೈಕೋರ್ಟ್‌ನಲ್ಲಿ ಪ್ರಕರಣವಿದ್ದು, ಜಿಲ್ಲಾಡಳಿತ ಇಲ್ಲಿ ಪೂಜೆ ನಡೆಯುತ್ತಿರುವುದಾಗಿ ನ್ಯಾಯಾಲಯದಲ್ಲಿ ಸುಳ್ಳು ಹೇಳಿಕೆ ನೀಡಿದೆ. ಆದ್ದರಿಂದ ನ್ಯಾಯಾಲಯ ಪ್ರಸ್ತುತ ದೇವಸ್ಥಾನದಲ್ಲಿ ನಡೆಯುತ್ತಿರುವ ಪೂಜೆಯ ಭಾವಚಿತ್ರ ಮತ್ತು ವೀಡಿಯೋ ಸಲ್ಲಿಸುವಂತೆ ಸೂಚಿಸಿದ್ದು, ಸೋಮವಾರ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಯಲಿದ್ದು, ಅಲ್ಲಿ ಇವುಗಳನ್ನು ಸಲ್ಲಿಸದಿದ್ದರೆ ಜಿಲ್ಲಾಧಿಕಾರಿಗಳ ತಲೆ ದಂಡ ಆಗಲಿದೆ. ಆ ಕಾರಣಕ್ಕೆ ಇಂದು ಬಾಗಿಲು ತೆಗೆಸಿ, ಪೂಜೆ ಸಲ್ಲಿಸಿ ಅದರ ವಿಡಿಯೋ ತುಣುಕುಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಹುನ್ನಾರ ಇದರ ಹಿಂದೆ ಅಡಗಿದೆ ಎಂದು ಆರೋಪಿಸಿದರು.

ಬಾಗಿಲು ತೆಗೆಯಲು ಅವಕಾಶ ಮಾಡಿಕೊಡಿ ಪ್ರಕರಣವನ್ನು ಕೋರ್ಟ್‌ನಲ್ಲಿ ಎದುರಿಸಿಕೊಳ್ಳಿ ಎಂದು ಅಧಿಕಾರಿಗಳು ಎಷ್ಟೇ ಮನವೊಲಿಸಿದರೂ ಅದಕ್ಕೆ ಹಳೇ ಅರ್ಚಕನ ಕುಟುಂಬದವರು ಒಪ್ಪಲಿಲ್ಲ. ಈ ಹಿನ್ನೆಲೆಯಲ್ಲಿ ಪೊಲೀಸರು ಹಳೇ ಅರ್ಚಕ ಲಿಂಗೇಶ್, ಅವರ ಸಹೋದರ ಶಿವಯೋಗಿ, ಲಿಂಗೇಶ್ ಪತ್ನಿ ಸುನೀತಾ ಸೇರಿದಂತೆ 20ಕ್ಕೂ ಹೆಚ್ಚು ಜನರನ್ನು ಬಂಧಿಸಿ ದೇವಸ್ಥಾನದ ಬಾಗಿಲು ತೆರೆದು ಪೂಜೆ ಸಲ್ಲಿಸಲು ಅನುವು ಮಾಡಿಕೊಟ್ಟರು. ನಂತರ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಸೇರಿದಂತೆ, ಭಕ್ತರ ಸಮ್ಮುಖದಲ್ಲಿ ಹೊಸ ಅರ್ಚಕರಿಂದ ಪೂಜೆ ನಡೆಯಿತು. ಇತ್ತ ಹೊರಗಡೆ ಹಳೇ ಅರ್ಚಕನ ಕುಟುಂಬದ ಸದಸ್ಯರು ರೋಧಿಸುತ್ತಿದ್ದರು.

# ಹರಪನಹಳ್ಳಿ ಪುರಸಭೆ ಬಿಜೆಪಿ ವಶ



**(1ನೇ ಪುಟದಿಂದ)** ಭೀಮವ್ವ ಇಂದು ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿಯ ಮಂಜುನಾಥ ಇಜಂತಕರ್, ಕಾಂಗ್ರೆಸ್ ಪಕ್ಷದ ಜೋಗಿನರ ಭರತೇಶ ಹಾಗೂ ಪಕ್ಷೇತರ ಸದಸ್ಯ ಅಬ್ದುಲ್ ರಹಿಮಾನ್ ನಾಮ ಪತ್ರ ಸಲ್ಲಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿಯ ಎನ್. ಭೀಮವ್ವ ಹಾಗೂ ಕಾಂಗ್ರೆಸ್ ಪಕ್ಷದ ತಳವಾರ ಲಕ್ಕವ್ವ ನಾಮ ಪತ್ರ ಸಲ್ಲಿಸಿದ್ದರು. ಅಧ್ಯಕ್ಷರಾಗಿ ಆಯ್ಕೆಯಾದ ಮಂಜುನಾಥ ಇಜಂತಕರ್ ಅವರಿಗೆ ಶಾಸಕ ಕರುಣಾಕರ ರೆಡ್ಡಿ ಹಾಗೂ ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಬಿಜೆಪಿಯ 10 ಸದಸ್ಯರು ಸೇರಿ ಒಟ್ಟು 12 ಮತಗಳು ಲಭಿಸಿದವು. ಪರಾಜಿತ ಅಭ್ಯರ್ಥಿ ಕಾಂಗ್ರೆಸ್ ಪಕ್ಷದ ಜೋಗಿನರ ಭರತೇಶ ಅವರಿಗೆ ಕೇವಲ 8 ಮತಗಳು ದೊರೆತವು.

ಕಾಂಗ್ರೆಸ್ ಸದಸ್ಯರಾದ ಎಂ.ವಿ. ಅಂಜಿನಪ್ಪ, ವೆಂಕಟೇಶ್, ಗೊಂಗಡಿ ನಾಗರಾಜ, ಉದ್ದಾರ ಗಣೇಶ, ಸತ್ತೂರು ಯಲ್ಲಮ್ಮ, ಎಚ್. ಕೊಟ್ರೇಶ ಹಾಗೂ ಜೆಡಿಎಸ್ ನ ಷಹೀನಾಭೀ ಮತ್ತು ಪಕ್ಷೇತರರಾದ ಅಬ್ದುಲ್ ರಹಿಮಾನ್ ಹಾಗೂ ಸಿ. ಹನುಮಕ್ಕ ಸೇರಿದಂತೆ 9 ಸದಸ್ಯರು ಗೈರು ಹಾಜರಾಗಿದ್ದರು.

ಗೈರಾದ ಸದಸ್ಯರು ಚುನಾವಣೆ ಜರುಗುವ ಸಭಾಂಗಣಕ್ಕೆ ಆಗಮಿಸಿದರಾದರೂ ಅಷ್ಟೊತ್ತಿಗಾಗಲೇ ನಿಗದಿತ ಸಮಯ ಮೀರಿದೆ ಎಂದು ಚುನಾವಣಾಧಿಕಾರಿಗಳು ಬಾಗಿಲನ್ನು ಬಂದ್ ಮಾಡಿದ್ದರಿಂದ 9 ಜನ ಸದಸ್ಯರು ವಾಪಸ್ ಹೋದ ಘಟನೆ ನಡೆಯಿತು. ಕಾಂಗ್ರೆಸ್ 14 ಸ್ಥಾನ ಹೊಂದಿದ್ದರೂ ಪಕ್ಷದಲ್ಲಿನ ಒಳಜಗಳದಿಂದ ಅಧಿಕಾರದಿಂದ ವಂಚಿತವಾಯಿತು.

# ಹರಿಹರದಲ್ಲಿ ಗೃಹ ರಕ್ಷಕ ದಳದಿಂದ ಕೋವಿಡ್ ಜಾಗೃತಿ, ಪಥ ಸಂಚಲನ



ಹರಿಹರ, ನ.7- ನಗರದ ಗೃಹ ರಕ್ಷಕ ದಳದ ಹರಿಹರ ಘಟಕದ ವತಿಯಿಂದ ಕೋವಿಡ್-19 ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಜಾಗೃತಿ ಪಥಸಂಚಲನವನ್ನು ಹಮ್ಮಿಕೊಳ್ಳಲಾಗಿತ್ತು. ನಗರ ಠಾಣೆಯ ಎಎಸ್‌ಐ ಅಂತೋಣಿ ಚಾಲನೆ ನೀಡಿದರು.

ನಗರದಲ್ಲಿ ಪ್ರಮುಖ ಬೀದಿಗಳಲ್ಲಿ ಪಥಸಂಚಲನ ಹಾಗೂ ಕೋವಿಡ್-19 ರೋಗವು ಒಬ್ಬರಿಂದ ಒಬ್ಬರಿಗೆ ಹರಡುವುದರಿಂದ ಮಾಸ್ಕನ್ನು ಧರಿಸಿ ಜೀವ ಉಳಿಸಿಕೊಳ್ಳಿ ಹಾಗೂ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಿ ಎಂದು ಘೋಷಣೆ ಕೂಗುತ್ತಾ ಸಂಚರಿಸಲಾಯಿತು.

ಈ ವೇಳೆ ಮಾಸ್ಕ್ ಧರಿಸದೇ ಇರುವವರಿಗೆ ಮಾಸ್ಕ್ ವಿತರಿಸುವ ಮೂಲಕ ನಗರದಲ್ಲಿ ಜಾಗೃತಿಯನ್ನು ಮೂಡಿಸಿದರು. ಜಾಗೃತಿ ಜಾಥಾ ನಗರ ಪೊಲೀಸ್ ಠಾಣೆಯಿಂದ ಪ್ರಾರಂಭಗೊಂಡು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಮುಖ್ಯ ಸರ್ಕಲ್, ಶೋಭಾ ಟಾಕೀಸ್ ವೃತ್ತ ನಂತರ ಚನ್ನಮ್ಮ ಸರ್ಕಲ್ ಶಿವಮೊಗ್ಗ ರಸ್ತೆ ಮುಖಾಂತರ ತರಕಾರಿ ಮಾರುಕಟ್ಟೆ ಜನಸಂದಣಿಯ ರಸ್ತೆಗಳಲ್ಲಿ ಸಂಚರಿಸಿ ಜನರಲ್ಲಿ ಜಾಗೃತಿಯನ್ನು ಮೂಡಿಸಿದರು. ಪಥಸಂಚಲನವು ಗೃಹರಕ್ಷಕ ದಳ ಕಚೇರಿಗೆ ಮುಕ್ತಾಯಗೊಂಡಿತು.

ಈ ಸಂದರ್ಭದಲ್ಲಿ ಗೃಹರಕ್ಷಕ ದಳ ಸದಸ್ಯರಾದ ಗುರುನಾಥ್, ಎಸ್. ಕೇಶವ, ಕೆ.ಎಚ್. ಪ್ರಕಾಶ್, ಗಣೇಶ್, ಪಿ ಲೋಹಿತ್, ಕಾಶಿನಾಥ್, ಎ.ಹೆಚ್. ರಾಧ, ಎ.ಹೆಚ್. ಮಂಜುಳ, ಸಾವಿತ್ರಮ್ಮ ಮತ್ತಿತರರು ಭಾಗವಹಿಸಿದ್ದರು.

# ಜಿಲ್ಲೆಯಲ್ಲಿ ಫಸಲ್ ಬಿಮಾ ಯೋಜನೆ ಜಾರಿಗೆ ಅಧಿಸೂಚನೆ

ದಾವಣಗೆರೆ, ನ.7- ಜಿಲ್ಲೆಯಲ್ಲಿ ಈ ಸಾಲಿನ ಹಿಂಗಾರು-ಬೇಸಿಗೆ ಹಂಗಾಮುಗಳಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯನ್ನು ಜಾರಿಗೊಳಿಸಿ ಅಕ್ಟೋಬರ್ 15 ರಂದು ಸರ್ಕಾರದ ಆದೇಶದಲ್ಲಿ ಅಧಿಸೂಚನೆ ಮಾಡಲಾಗಿರುತ್ತದೆ.

ಈ ಸಾಲಿನ ಹಿಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಗ್ರಾಮ ಪಂಚಾಯತಿ ಮಟ್ಟಕ್ಕೆ ಮುಸುಕಿನ ಜೋಳ (ನೀರಾವರಿ) ಬೆಳೆ, ಹೊನ್ನಾಳಿ ತಾಲ್ಲೂಕಿಗೆ ಮತ್ತು ಮುಸುಕಿನ ಜೋಳ (ನೀರಾವರಿ) ಮತ್ತು ಕಡಲೆ (ಮಳೆ ಆಶ್ರಿತ) ಬೆಳೆಗಳನ್ನು ಜಗಳೂರು ತಾಲ್ಲೂಕಿಗೆ ಅಧಿಸೂಚನೆ ಮಾಡಲಾಗಿದೆ.

ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (ವಿಮಾ) ಯೋಜನೆಯಡಿ ಹೋಬಳಿ ಮಟ್ಟಕ್ಕೆ ಜೋಳ (ಮಳೆ ಆಶ್ರಿತ), ಜೋಳ (ನೀರಾವರಿ), ಸೂರ್ಯಕಾಂತಿ (ಮಳೆ ಆಶ್ರಿತ), ಸೂರ್ಯಕಾಂತಿ (ನೀರಾವರಿ), ಮುಸುಕಿನ ಜೋಳ (ನೀರಾವರಿ), ರಾಗಿ (ನೀರಾವರಿ), ಹುರುಳಿ (ಮಳೆ ಆಶ್ರಿತ), ಕಡಲೆ (ಮ.ಆ) ಬೆಳೆಗಳಿಗೆ ವಿಮೆ ನೋಂದಾಯಿಸಲು ಅವಕಾಶವಿರುತ್ತದೆ. ಪ್ರತೀ ಹೋಬಳಿಗೆ ಪ್ರತ್ಯೇಕವಾಗಿ ಮೇಲ್ಕಂಡ ಬೆಳೆಗಳಲ್ಲಿ ಅಧಿಸೂಚನೆ ಮಾಡಿರುತ್ತದೆ.

ಅದೇ ರೀತಿ ಸದರಿ ಯೋಜನೆಯಡಿ 2020-21ನೇ ಸಾಲಿನ ಹಿಂಗಾರು ಹಂಗಾಮಿಗೆ ಹೋಬಳಿ ಮಟ್ಟಕ್ಕೆ ತೋಟಗಾರಿಕೆ ಬೆಳೆಗಳಾದ ಟೊಮ್ಯಾಟೋ, ಈರುಳ್ಳಿ (ನೀರಾವರಿ) ಬೆಳೆಗಳಿಗೆ ವಿಮೆಗೆ ನೋಂದಾಯಿಸಲು ದಾವಣಗೆರೆ ತಾಲ್ಲೂಕಿನ ಆನಗೋಡು, ಮಾಯಕೊಂಡ ಹೋಬಳಿ ಹಾಗೂ ಜಗಳೂರು ತಾಲ್ಲೂಕಿನ ಬಿಳಿಚೋಡು, ಜಗಳೂರು, ಸೊಕ್ಕೆ ಹೋಬಳಿಗಳನ್ನು ಅಧಿಸೂಚನೆ ಮಾಡಲಾಗಿದೆ.

ಬೇಸಿಗೆ ಹಂಗಾಮಿಗೆ ಗ್ರಾಮ ಪಂಚಾಯತಿ ಮಟ್ಟಕ್ಕೆ ಭತ್ತ (ನೀರಾವರಿ)ವನ್ನು ದಾವಣಗೆರೆ ತಾಲ್ಲೂಕಿಗೆ ಅಧಿಸೂಚಿಸಲಾಗಿದೆ. ಹೋಬಳಿ ಮಟ್ಟಕ್ಕೆ ಭತ್ತ (ನೀರಾವರಿ), ಸೂರ್ಯಕಾಂತಿ (ನೀರಾವರಿ), ಶೇಂಗಾ (ನೀರಾವರಿ) ಬೆಳೆಗಳನ್ನು ಅಧಿಸೂಚನೆ ಮಾಡಲಾಗಿದೆ. ಹಿಂಗಾರು ಹಂಗಾಮಿಗೆ ಬೆಳೆ ಸಾಲ ಪಡೆದ ಮತ್ತು ಪಡೆಯದ ರೈತರಿಗೆ ಬೆಳೆ ವಿಮೆಗೆ ನೋಂದಾಯಿಸಲು ಮೆಕ್ಕೆಜೋಳ (ನೀ), ಸೂರ್ಯಕಾಂತಿ (ಮ.ಆ) (ನೀ), ಹುರುಳಿ (ಮ.ಆ), ರಾಗಿ (ನೀ), ಜೋಳ (ಮ.ಆ) (ನೀ)ನ. 17 ಕಡೆಯ ದಿನಾಂಕವಾಗಿದೆ. ಈರುಳ್ಳಿ(ನೀ). ಟೊಮ್ಯಾಟೋಗೆ ನ.30 ಹಾಗೂ ಕಡಲೆ (ಮ.ಆ) ನ.16 ಕೊನೆಯ ದಿನವಾಗಿದೆ. ಬೇಸಿಗೆ ಹಂಗಾಮಿಗೆ ಬೆಳೆ ಸಾಲ ಪಡೆದ ಮತ್ತು ಪಡೆಯದ ರೈತರಿಗೆ ಬೆಳೆ ವಿಮೆಗೆ ನೋಂದಾಯಿಸಲು ನೋಂದಾಯಿಸಲು ಭತ್ತ (ನೀ), ಶೇಂಗಾ (ನೀ), ಸೂರ್ಯಕಾಂತಿ(ನೀ), ಟೊಮ್ಯಾಟೋ ಗೆ 01.03.2021 ಕೊನೆಯ ದಿನವಾಗಿದೆ .

ಹೆಚ್ಚಿನ ಮಾಹಿತಿಗೆ ಕೃಷಿ, ಕಂದಾಯ, ಸಹಕಾರ, ತೋಟಗಾರಿಕೆ ಇಲಾಖೆಗಳನ್ನು, ಬೆಳೆ ಸಾಲ ನೀಡುವ ಬ್ಯಾಂಕ್ ಅಥವಾ ಸಹಕಾರಿ ಬ್ಯಾಂಕ್‌ಗಳನ್ನು ಹಾಗೂ ಯೂನಿವರ್ಸಲ್ ಸೋಂಪೋ ಜನರಲ್ ಇನ್‌ಶ್ಯೂರೆನ್ಸ್ ಕಂಪನಿಯ ಗುತ್ಯಪ್ಪ, ಜಿಲ್ಲಾ ಯೋಜನಾ ಸಮನ್ವಯ ಅಧಿಕಾರಿ-9964064451 ಇವರನ್ನು ಸಂಪರ್ಕಿಸಲು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಹುಂಡೈ ಐ20 ಹೊಸ ಆವೃತ್ತಿ



ದಾವಣಗೆರೆ, ನ.7- ಹುಂಡೈ ಕಂಪನಿ ತನ್ನ ಪ್ರೀಮಿಯಂ ಹ್ಯಾಚ್‌ಬ್ಯಾಕ್ ಹುಂಡೈ ಐ20 ಹೊಸ ಆವೃತ್ತಿಯನ್ನು ಕೆ.ಜೆ. ಹುಂಡೈ ಶೋರೂಂನಲ್ಲಿ ಮೊನ್ನೆ ಮಾರುಕಟ್ಟೆಗೆ ಪರಿಚಯಿಸಲಾಯಿತು.

ಯುವ ಸಮುದಾಯವನ್ನು ದೃಷ್ಟಿಯಲ್ಲಿಟ್ಟುಕೊಂಡು ತಯಾರಿಸಿರುವ ಇದು ಸೆಡಾನ್ ಶ್ರೇಣಿಯಲ್ಲಿ ಹಲವಾರು ಹೊಸ ವೈಶಿಷ್ಟ್ಯಗಳನ್ನು ಒಳಗೊಂಡಿದೆ. 2020ರ ದಶಕದ ವಾಹನ ಉದ್ದಿಮೆ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಲಿರುವ ಮೊದಲ ಕಾಂಪ್ಯಾಕ್ಟ್ ಸೆಡಾನ್ ಇದಾಗಿದೆ ಎಂದು ಶೋರೂಂ ಮಾಲೀಕ ಕೆ.ಜೆ.ಅಫಕ್ ರಜ್ವಿ ತಿಳಿಸಿದರು.


ಆಕರ್ಷಕ ವಿನ್ಯಾಸ ಮತ್ತು ಬಣ್ಣಗಳಲ್ಲಿ ಲಭ್ಯ ಇರುವ ಇದು ವಿಶಿಷ್ಟ ವಿನ್ಯಾಸಕ್ಕೆ ಹೆಸರಾದ ಹುಂಡೈ ಜನಪ್ರಿಯತೆಯನ್ನು ಮತ್ತಷ್ಟು ಹೆಚ್ಚಿಸುವ ವಿಶ್ವಾಸವಿದೆ. ಸಮರ್ಪಕ ಇಂಧನ ಬಳಕೆ, ಉತ್ತಮ ಕಾರ್ಯನಿರ್ವಹಣೆಯ ಉತ್ಕೃಷ್ಟವಾದ ಬಿಎಸ್6 ಎಂಜಿನ್ ಒಳಗೊಂಡಿರುವ ಈ ವಾಹನವು ಪೆಟ್ರೋಲ್ ಮತ್ತು ಡೀಸೆಲ್‌ನ 2 ಶ್ರೇಣಿಯಲ್ಲಿ ಲಭ್ಯವಿದ್ದು, ಇದು ಪ್ರತಿ ಲೀಟರ್‌ಗೆ 20-22 ಮೈಲೇಜ್ ಕೊಡುತ್ತದೆ.

ಮಾರುತಿ ಸುಜುಕಿ ಬಲೆನೋ, ಟಾಟಾ ಆಲ್ಟ್ರೋಜ್, ಟೊಯೋಟೋ ಗ್ಲಾನ್ಜಾದೊಂದಿಗೆ ಇದು ಪೈಪೋಟಿಗೆ ಇಳಿಯಬಹುದು ಎಂದು ನಿರೀಕ್ಷಿಸಲಾಗಿದೆ. ಕೊರೊನಾ ಸಂದರ್ಭದಲ್ಲಿ ಹೊಸ ಐ20 ಗ್ರಾಹಕರಲ್ಲಿ ಹೊಸ ಆಸಕ್ತಿ ಹುಟ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಮುಖ್ಯ ವ್ಯವಸ್ಥಾಪಕ ಕಮಲ್ ಪಾಷಾ ಅಭಿಪ್ರಾಯ ವ್ಯಕ್ತಪಡಿಸಿದರು.

ರೂ. 6.79 ಲಕ್ಷದಿಂದ 11.17 ಲಕ್ಷದವರೆಗೆ ಲಭ್ಯವಿರುವ ಈ ಕಾರಿನ ಹೊಸ ಆಕರ್ಷಣೆ ಏನೆಂದರೆ ವೈರ್‌ಲೆಸ್ ಚಾರ್ಜಿಂಗ್, ಗೇರ್ ನಾಬ್‌ಗೆ ಚರ್ಮದ ಹೊದಿಕೆ, ಐಬ್ಲ್ಯು ಆಡಿಯೋ ರಿಮೋಟ್ ಫೋನ್ ಆ್ಯಪ್, ಯುಎಸ್‌ಬಿ ಚಾರ್ಜರ್, ಸ್ಪೀಡೋ ಮೀಟರ್ ಹಾಗೂ ಸ್ಮಾರ್ಟ್‌ಫೋನ್ ಜತೆ ಸಂಪರ್ಕಿಸಬಹುದಾದ 20.25 ಸೆಂ.ಮೀ ಗಾತ್ರದ ಟಚ್ ಸ್ಕ್ರೀನ್ ಸೇರಿದಂತೆ ಇನ್ನು ಮುಂತಾದ ಹೊಸ ಸೌಲಭ್ಯಗಳನ್ನು ಒಳಗೊಂಡಿದೆ.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಆರ್.ಟಿ.ಓ ಅಧಿಕಾರಿ ಶ್ರೀಧರ್ ಮಲ್ಲಾಡ್, ಕೆ.ಜೆ.ಹುಂಡೈ ಸಂಸ್ಥೆಯ ಅಧ್ಯಕ್ಷರಾದ ಕೆ.ಜಾವೀದ್ ಸಾಬ್, ಶ್ರೀಮತಿ ಜಹನಾರ್ ಜಾವೀದ್, ವ್ಯವಸ್ಥಾಪಕ ನಿರ್ದೇಶಕ ಕೆ.ಜೆ.ಅಫಕ್ ರಜ್ವಿ, ಸಂಸ್ಥೆಯ ನಿರ್ದೇಶಕ ಕೆ.ಜೆ.ಅಬ್ರಾಹರ್ ಮತ್ತಿತರರು ಉಪಸ್ಥಿತರಿದ್ದರು.

# ಕಿರಣ್ ಕುಮಾರ್ ಅವರಿಗೆ ಪಿಹೆಚ್‌ಡಿ



ದಾವಣಗೆರೆ, ನ. 7- ನಗರದ ಜಿ.ಎಂ.ಐ.ಟಿ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಹೆಚ್.ಎಸ್. ಕಿರಣ್ ಕುಮಾರ್ ಅವರು ಮಂಡಿಸಿದ ಮಹಾಪ್ರಬಂಧಕ್ಕೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಹೆಚ್‌ಡಿ ಪದವಿ ನೀಡಿದೆ.

ಕಿರಣ್ ಕುಮಾರ್ ಅವರು, ಯುಬಿಡಿಟಿ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಡಾ. ಬಿ. ಲೋಕೇಶಪ್ಪ ಅವರ ಮಾರ್ಗದರ್ಶನದಲ್ಲಿ 'ಸ್ಟಡೀಸ್ ಆನ್ ಟ್ರೀಟ್‌ಮೆಂಟ್ ಆಫ್ ಟ್ಯಾನರಿ ವೇಸ್ಟ್ ವಾಟರ್ ಬೈ ಎಲೆಕ್ಟ್ರೋ-ಕೋಯಾಗುಲೇಷನ್' ವಿಷಯ ಕುರಿತು ಪ್ರಬಂಧ ಮಂಡಿಸಿದ್ದರು. ಕಿರಣ್ ಕುಮಾರ್, ದಿ|| ಶಿವಕುಮಾರ್ ಹೆದ್ನೆ ಮತ್ತು ಯಶೋಧ ದಂಪತಿ ಪುತ್ರ.

# ಕವನ-ಪ್ರಬಂಧ ಸ್ಪರ್ಧೆ ಅವಧಿ ವಿಸ್ತರಣೆ

ದಾವಣಗೆರೆ, ನ.7- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ ಆಶ್ರಯದಲ್ಲಿ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ರಾಜ್ಯ ಮಟ್ಟದಲ್ಲಿ ಉಚಿತ ಕವನ ಹಾಗೂ ಲಿಖಿತ ಪ್ರಬಂಧ ಸ್ಪರ್ಧೆಗೆ ಆಹ್ವಾನಿಸಲಾಗಿದ್ದು, ಇದೇ ದಿನಾಂಕ 25 ರವರೆಗೆ ಅವಧಿ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಕಲಾಕುಂಚ ಮಹಿಳಾ ವಿಭಾಗದ ಸಹ ಕಾರ್ಯದರ್ಶಿ ಸಾವಿತ್ರಿ ಜಗದೀಶ್-9481217224 ಸಂಪರ್ಕಿಸಲು ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

# ಕದಳಿ ಮಹಿಳಾ ವೇದಿಕೆಯ ಸದಸ್ಯೆಯರ ಮಕ್ಕಳ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ನ.7- ಕದಳಿ ಮಹಿಳಾ ವೇದಿಕೆ ವತಿಯಿಂದ ವೇದಿಕೆಯ ಸದಸ್ಯನಿಯರ ಪ್ರತಿಭಾವಂತ ಮಕ್ಕಳನ್ನು ಗೌರವಿಸಲಾಗುವುದು ಎಂದು ಕಾರ್ಯದರ್ಶಿ ಮಮತಾ ನಾಗರಾಜ್ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 90ಕ್ಕೂ ಹೆಚ್ಚು ಅಂಕಗಳನ್ನು ಪಡೆದವರಿಗೆ, ಸಿಜಿಪಿಎ 9 ಪಾಯಿಂಟ್ ಗಳಿಗೂ ಹೆಚ್ಚು ಪಡೆದವರಿಗೆ, ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಶೇ. 70 ಕ್ಕೂ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಅರ್ಹ ವಿದ್ಯಾರ್ಥಿಗಳು ಇದೇ ದಿನಾಂಕ 30ರೊಳಗೆ ಶ್ರೀಮತಿ ಪೂರ್ಣಿಮಾ ಬಿ.ಪಿ. ಪ್ರಸನ್ನಕುಮಾರ್, 'ಬಸವ ಕೃಪ', ಮನೆ ಸಂಖ್ಯೆ 2044, 2ನೇ ಮುಖ್ಯ ರಸ್ತೆ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ (ಮೊ. 8618546784, 9986915292) ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಬಹುದು.

# ಶರಣ ಸಂಸ್ಕೃತಿ ಯಶಸ್ವಿ : ಮುರುಘಾ ಶರಣರಿಗೆ ಭಕ್ತರಿಂದ ಸನ್ಮಾನ



ದಾವಣಗೆರೆ, ನ.7- ಕೊರೊನಾದ ನಡುವೆಯೂ ಚಿತ್ರದುರ್ಗ ಮುರುಘಾ ಮಠದಲ್ಲಿ ಶರಣ ಸಂಸ್ಕೃತಿ ಉತ್ಸವವನ್ನು ಸರಳವಾಗಿ ಅಚ್ಚುಕಟ್ಟಾಗಿ ಯಶಸ್ವಿಯಾಗಿ ನಡೆಸಿಕೊಟ್ಟ ಮುರುಘಾ ಮಠದ ಶೂನ್ಯ ಪೀಠಾಧ್ಯಕ್ಷರಾದ ಡಾ.ಶಿವಮೂರ್ತಿ ಶರಣರನ್ನು ದಾವಣಗೆರೆ ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್, ಕರ್ನಾಟಕ ದಲಿತ ಸೇನಾ ಸಮಿತಿ ರಾಜ್ಯಾಧ್ಯಕ್ಷ ಟಿ.ಬಸವರಾಜ್ ಅವರು ಗೌರವಿಸಿ ಸನ್ಮಾನಿಸಿದರು.

# ಹಿಂಗಾರಿನಲ್ಲೂ ರೈತರಿಂದ ಸ್ವಯಂ ಬೆಳೆ ಸಮೀಕ್ಷೆ

ಬೆಂಗಳೂರು, ನ. 7 - ಮುಂಗಾರು ಬೆಳೆ ಸಮೀಕ್ಷೆ ಶೇ.100 ರಷ್ಟು ಯಶಸ್ವಿಯಾದ ಬೆನ್ನಲ್ಲೆ ಹಿಂಗಾರು ಬೆಳೆಯನ್ನು ಸಮೀಕ್ಷೆ ನಡೆಸಲಾಗುವುದು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.


ಇಲಾಖಾಧಿಕಾರಿಗಳ ಜೊತೆ ಮಹತ್ವದ ಚರ್ಚೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈತರೇ ತಮ್ಮ ಬೆಳೆ ಜಮೀನಿನ ಸಮೀಕ್ಷೆಯನ್ನು ತಾವೇ ಆಯಪ್ ಮೂಲಕ ನಡೆಸಿದ್ದು, ಇದೇ ಮಾದರಿಯಲ್ಲಿಯೇ ಹಿಂಗಾರು ಬೆಳೆ ಸಮೀಕ್ಷೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಡಿಸೆಂಬರ್ ಮೊದಲ ವಾರದಲ್ಲಿ ಹಿಂಗಾರು ಬೆಳೆ ಸಮೀಕ್ಷೆ ರೈತರ ಆಪ್ ಬಿಡುಗಡೆಯಾಗಲಿದ್ದು, ಶೀಘ್ರದಲ್ಲಿಯೇ ದಿನಾಂಕ ಪ್ರಕಟಿಸುವುದಾಗಿ ಹಾಗೂ ಮುಂಗಾರು ಬೆಳೆ ಸಮೀಕ್ಷೆ ಯಶಸ್ವಿಯಾದಂತೆ ಹಿಂಗಾರು ಬೆಳೆ ಸಮೀಕ್ಷೆಯನ್ನು ಯಶಸ್ವಿಗೊಳಿಸ ಬೇಕೆಂದು ಸಚಿವರು ಮನವಿ ಮಾಡಿದ್ದಾರೆ.

ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) Civil ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399

House For Rent
2200 Sq ft. Duplex! 3 Master bed rooms
Pooja, kitchen, Dining, 2 living spaces, Large balcony
TO LET
1100 sq ft. Shop, 700 sq ft. OFFICE SPACE
Prime location: 1st Main Road, 167/1, K.B. Extension, Davanagere.
93419 80398, 98454 97452

ಭೂಮಿಕ ಮ್ಯಾಟ್ರಿಮೊನಿ
Bhoomika Matrimony
Lingayath community




ಲಿಂಗಾಯತ ವಧು-ವರಗಳಿಗಾಗಿ ಸಂಪರ್ಕಿಸಿ
ಹೆಡ್ ಆಫೀಸ್: ವಿದ್ಯಾನಗರ, ನೂತನ ಕಾಲೇಜ್ ರೋಡ್, ಕಾಫಿ ಡೇ ಹತ್ತಿರ, ದಾವಣಗೆರೆ.
ಬ್ರಾಂಚ್ ಆಫೀಸ್: ಪಿ.ಜೆ.ಇ.ಟಿ. ರೋಡ್, ಹೇಮಾವತಿ ಹಾಸ್ಟೆಲ್ ಹತ್ತಿರ, ದಾವಣಗೆರೆ.
Website : www.bhoomikamatrimony.com
77603 16576, 90080 55813

Vijay para Medical College
ವಿಜಯ್ ಪ್ಯಾರಾ ಮೆಡಿಕಲ್ ಕಾಲೇಜು
Davangere
ಪ್ರವೇಶ ಪ್ರಕಟಣೆ-2020-21

| Courses | Duration | Qualification |
|---|---|---|
| DMLT-[Lab Technician] | 3 Years | SSLC Pass |
| DHT-[Health Inspector] | 3 Years | SSLC Pass |
| DMIT-[X-ray Technician] | 3 Years | SSLC Pass |
| D.O.T-[Operation Theatre] | 3 Years | SSLC Pass |

SC. ST.ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೌಲಭ್ಯ
ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ
ಪ್ರವೇಶಕ್ಕಾಗಿ ಸಂಪರ್ಕಿಸಿ
ಗೋಲ್ಡನ್ ಪಬ್ಲಿಕ್ ಸ್ಕೂಲ್ ಹತ್ತಿರ, D.C.M.ಟೌನ್‌ಶಿಪ್ ದಾವಣಗೆರೆ Mob:7760155550

ಸರ್ವರಿಗೂ ಸುಸ್ವಾಗತ



ಶ್ರೀ ಸಿದ್ದೇಶ್ವರ ಸಮುದಾಯ ಭವನದ ಉದ್ಘಾಟನಾ ಸಮಾರಂಭ
ಕೃಪಾಶೀರ್ವಾದ :
ಶ್ರೀ ತರಳಬಾಳು ಜಗದ್ಗುರು ಲಿಂ. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು
ಸಾನ್ನಿಧ್ಯ : ಜಗದ್ಗುರು ಶ್ರೀ ಅಭಿನವ ಶಿವಾನಂದ ಮಹಾಸ್ವಾಮಿಗಳು
ಶ್ರೀ ಶಿವಾನಂದ ಬೃಹನ್ಮಠ, ಗದಗ.
ದಿನಾಂಕ : 09.11.2020ರ ಸೋಮವಾರ ಸಮಯ : ಬೆಳಗ್ಗೆ 11.00 ಕ್ಕೆ ಸ್ಥಳ : ಸಿದ್ದೇಶ್ವರ ದೇವಸ್ಥಾನ, ರಾಣೇಬೆನ್ನೂರು.
"ಶರಣರ ಬರುವೆಮಗೆ ಪ್ರಾಣ ಜೀವಾಳವಯ್ಯ"
ಶ್ರೀ ಸಿದ್ದೇಶ್ವರ ದೇವಸ್ಥಾನ ಸೇವಾ ಸಮಿತಿ (ರಿ). ರಾಣೇಬೆನ್ನೂರು ಮತ್ತು ಸಮಸ್ತ ಸದ್ಭಕ್ತರು
ಮಾಸ್ಕ್ ಕಡ್ಡಾಯ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು

# ಲವ್ ಜಿಹಾದ್ ಮಟ್ಟ ಹಾಕಲು ಕಠಿಣ ಕಾನೂನು ರೂಪಿಸಲು ಸಿದ್ಧ



## ಹರಪನಹಳ್ಳಿಯಲ್ಲಿ ಸಚಿವ ಶ್ರೀರಾಮುಲು

ಹರಪನಹಳ್ಳಿ, ನ. 7- ರಾಜ್ಯದಲ್ಲೂ ಸಹ ಲವ್ ಜಿಹಾದ್ ಮಟ್ಟ ಹಾಕಲು ಕಠಿಣ ಕಾನೂನು ರೂಪಿಸಲು ಸಲಹೆ ಪಡೆದುಕೊಳ್ಳಲಾಗುತ್ತಿದೆ. ಶೀಘ್ರದಲ್ಲೇ ಚರ್ಚಿಸಿ ಸೂಕ್ತ ಪರಿಹಾರ ನೀಡಲು ರಾಜ್ಯ ಸರ್ಕಾರ ಸಿದ್ದವಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಶ್ರೀರಾಮುಲು ಹೇಳಿದರು.

ಬಿಜೆಪಿ ಮುಖಂಡ ಕೋಡಿಹಳ್ಳಿ ಭೀಮಪ್ಪ ಅವರ ನಿವಾಸದಲ್ಲಿ ಸುದ್ಧಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯಾರ್ಥಿಗಳ ಸುರಕ್ಷತೆಗೆ ಮೊದಲ ಆದ್ಯತೆ ನೀಡಿ ಕಾಲೇಜು ತರಗತಿಗಳನ್ನು ಪ್ರಾರಂಭಿಸಲು ಹಾಗೂ ಅವರಿಗೆ ವಸತಿ ನಿಲಯಗಳಲ್ಲಿ ತಂಗಲು ಕೋವಿಡ್ ನಿಯಮಗಳನ್ವಯ ಸಕಲ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ಇದೇ ದಿನಾಂಕ 17ಕ್ಕೆ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಆದೇಶ ನೀಡಿದೆ. ಈಗಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಶೇ.50ರಷ್ಟು ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲಾಗುವುದು.


ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮೆಟ್ರಿಕ್ ಪೂರ್ವ ವಸತಿ ನಿಲಯಗಳನ್ನು ಬಳಸಿಕೊಳ್ಳಲಾಗುವುದು. ವಸತಿ ನಿಲಯದ ವಿದ್ಯಾರ್ಥಿಗಳಿಗೆ ಕೋವಿಡ್‌ನಿಂದ ರಕ್ಷಿಸಲು ಸ್ಯಾನಿಟೈಸರ್, ವೈದ್ಯರು, ನರ್ಸ್ ಹಾಗೂ ತುರ್ತು ಚಿಕಿತ್ಸೆಗೆ ವಸತಿ ನಿಲಯದಲ್ಲಿ ಸಕಲ ಸಿದ್ದತೆ ಮಾಡಿಕೊಳ್ಳಲು ಕ್ರಮ ಜರುಗಿಸಲಾಗಿದೆ ಎಂದರು.

ಅಕ್ಕ-ಪಕ್ಕದ ರಾಜ್ಯಗಳಲ್ಲಿ ಶಾಲೆ ಪ್ರಾರಂಭಿಸಿದ ಪರಿಣಾಮ ಹೆಚ್ಚು ವಿದ್ಯಾರ್ಥಿಗಳು ಕೊರೊನಾ ಸೋಂಕಿಗೆ ತುತ್ತಾಗಿದ್ದಾರೆ. ಇದನ್ನು ಮನಗಂಡು ಕಾಲೇಜು ಶಿಕ್ಷಣವನ್ನು ಮಾತ್ರ ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆ.

1.50 ಲಕ್ಷಕ್ಕೂ ಅಧಿಕ ಕಾಲೇಜ್ ವಿದ್ಯಾರ್ಥಿಗಳಿದ್ದಾರೆ. ಅವರಿಗೆಲ್ಲಾ ವೈಫೈ ತಂತ್ರಾಂಶದ ಮೂಲಕ ಆನ್‌ಲೈನ್ ಶಿಕ್ಷಣ ನೀಡಲು ಲ್ಯಾಪ್‌ಟ್ಯಾಪ್ ನೀಡುವ ಚಿಂತನೆಯಿದೆ. ಮಕ್ಕಳ ಜೀವ ಮುಖ್ಯವಾಗಿದ್ದು ಅವರ ಸುರಕ್ಷತೆ ಪ್ರಮುಖವಾಗಿದೆ ಎಂದರು.

ಮುಖಂಡರಾದ ಜಿ.ನಂಜನಗೌಡ, ಕೋಡಿಹಳ್ಳಿ ಭೀಮಪ್ಪ, ಟಿ.ಉಮಾಕಾಂತ, ತೆಲಗಿ ಮಂಜುನಾಥ, ದ್ಯಾಮಜ್ಜಿ ಆನಂದ ಹಾಗೂ ಇತರರು ಉಪಸ್ಥಿತರಿದ್ದರು.

# ಆನ್ಲೈನ್ ಕಲಾಪ ಹಂಚಿಕೊಳ್ಳದಿರಿ



ನವದೆಹಲಿ, ನ. 7 – ಆನ್‌ಲೈನ್ ಮೂಲಕ ನಡೆಸಲಾಗುವ ಕೋರ್ಟ್ ಕಲಾಪಗಳ ವಿಡಿಯೋಗಳನ್ನು ಅನಧಿಕೃತವಾಗಿ ಹಂಚಿಕೊಳ್ಳಬಾರದು ಎಂದು ವಕೀಲರು ಹಾಗೂ ಕಕ್ಷಿದಾರರಿಗೆ ಸುಪ್ರೀಂ ಕೋರ್ಟ್ ಎಚ್ಚರಿಕೆ ನೀಡಿದೆ.

ಸುಪ್ರೀಂ ಕೋರ್ಟ್‌ನಲ್ಲಿ ಕಕ್ಷಿದಾರರ ಪರವಾಗಿ ಅರ್ಜಿ ದಾಖಲಿಸಲು ಅನುಮತಿ ಪಡೆದಿರುವ ಅಡ್ವೊಕೇಟ್ಸ್ - ಆನ್ - ರೆಕಾರ್ಡ್ (ಎ.ಒ.ಆರ್.)ಗಳಿಗೆ ಸುಪ್ರೀಂ ಕೋರ್ಟ್ ಈ ಎಚ್ಚರಿಕೆ ನೀಡಿದೆ.

ವಿಚಾರಣೆಗೆ ಹಾಜರಾಗುವ ಲಿಂಕ್‌ಗಳು ಹಾಗೂ ವಿಡಿಯೋಗಳನ್ನು ಹಂಚಿಕೊಳ್ಳಬಾರದು. ಆದರೂ, ವಕೀಲರು ತಮಗೆ ನೀಡಲಾದ ಲಿಂಕ್ ಹಂಚಿಕೊಂಡಿರುವುದು ಕಂಡು ಬಂದಿದೆ. ಇಬ್ಬರಿಗಿಂತ ಹೆಚ್ಚು ವಕೀಲರು ಆನ್‌ಲೈನ್ ಮೂಲಕ ನಡೆಸಲಾಗುವ ಕಲಾಪಗಳಲ್ಲಿ ಪಾಲ್ಗೊಂಡಿರುವುದು ಕಂಡು ಬಂದಿದೆ ಎಂದು ತಿಳಿಸಲಾಗಿದೆ.

# ಶಿರಮಗೊಂಡನಹಳ್ಳಿ ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರಾಗಿ ರವಿಕುಮಾರ್



ದಾವಣಗೆರೆ,ನ.7- ಶಿರಮಗೊಂಡನಹಳ್ಳಿ ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ಜೆ .ರವಿಕುಮಾರ್, ಉಪಾಧ್ಯಕ್ಷರಾಗಿ ಹಾಲಮ್ಮ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ಜೋ ಬಿಡೆನ್ ಅಮೆರಿಕದ ಅಧ್ಯಕ್ಷ

(1ನೇ ಪುಟದಿಂದ) ದಾಟಿದ್ದಾರೆ. ಬಿಡೆನ್ ಪರ ಈಗ 290 ಮತಗಳಿವೆ.

56 ವರ್ಷದ ಸೆನೆಟರ್ ಕಮಲಾ ಹ್ಯಾರಿಸ್ ಅವರು ಅಮೆರಿಕದ ಪ್ರಥಮ ಕಪ್ಪು ವರ್ಣೀಯ ಉಪಾಧ್ಯಕ್ಷೆಯಾಗಲಿದ್ದಾರೆ. ಬಿಡೆನ್ ಹಾಗೂ ಹ್ಯಾರಿಸ್ ಅವರು ಜನವರಿ 20ರಂದು ಅಮೆರಿಕದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಗೆಲುವಿನ ನಂತರ ಮಾತನಾಡಿರುವ ಬಿಡೆನ್, ನನಗೆ ಮತದಾನ ಮಾಡಿದ ಹಾಗೂ ಮತದಾನ ಮಾಡದ ಎಲ್ಲರಿಗೂ ನಾನು ಅಧ್ಯಕ್ಷನಾಗಿರುತ್ತೇನೆ. ನೀವು ನನ್ನ ಮೇಲೆ ಇರಿಸಿರುವ ನಂಬಿಕೆ ಉಳಿಸಿಕೊಳ್ಳುತ್ತೇನೆ ಎಂದಿದ್ದಾರೆ.

1992ರಲ್ಲಿ ಜಾರ್ಜ್ ಬುಷ್ ಅವರು ಮೊದಲ ಅವಧಿ ನಂತರ ಪರಾಭವಗೊಂಡಿದ್ದರು. ಟ್ರಂಪ್ ಸಹ ಅದೇ ಸಾಲಿಗೆ ಸೇರಿದ್ದಾರೆ.

ಪೆನ್ಸಿಲ್ವೇನಿಯಾ 20 ಮತಗಳನ್ನು ಹೊಂದಿದೆ. ಅಲ್ಲಿ ಬಿಡೆನ್ ಗೆಲುವಿನ ಮುನ್ನಡೆ ಸಾಧಿಸಿದ ನಂತರ, ಅಧ್ಯಕ್ಷರಾಗಲು ಬೇಕಾದ 270 ಮತಗಳ ಗಡಿಯನ್ನು ದಾಟಿದಂತಾಗಿದೆ. ಬಿಡೆನ್ ಗೆದ್ದಿರುವುದಾಗಿ ಅಮೆರಿಕದ ಪ್ರಮುಖ ಮಾಧ್ಯಮಗಳು ಘೋಷಿಸಿವೆ.

ಪೆನ್ಸಿಲ್ವೇನಿಯಾ, ಅರಿಜೋನಾ, ನೆವಾಡಾ ಹಾಗೂ ಜಾರ್ಜಿಯಾಗಳಲ್ಲಿ ಇನ್ನೂ ಮತಗಳ ಎಣಿಕೆ ಮುಂದುವರೆದಿದೆ. ಈ ನಾಲ್ಕು ರಾಜ್ಯಗಳಲ್ಲಿ ಬಿಡೆನ್ ಮುನ್ನಡೆ ಹೊಂದಿದ್ದಾರೆ. ಈ ಮುನ್ನಡೆ ಬದಲಾಗುವ ಸಾಧ್ಯತೆ ಇಲ್ಲ ಎಂದು ಮಾಧ್ಯಮಗಳು ತಿಳಿಸಿವೆ.

ಈ ನಡುವೆ, ಅಧ್ಯಕ್ಷ ಟ್ರಂಪ್ ಅವರು ಚುನಾವಣಾ ಅವ್ಯವಹಾರ ನಡೆದಿದೆ ಎಂದು ಪುನರುಚ್ಚರಿಸಿದ್ದಾರೆ. ಆದರೆ, ತಮ್ಮ ಆರೋಪಗಳಿಗೆ ಅವರು ಇದುವರೆಗೂ ಯಾವುದೇ ಸಾಕ್ಷಿಗಳನ್ನು ಒದಗಿಸಿಲ್ಲ.

# ಪಟಾಕಿ ನಿಷೇಧಕ್ಕೆ ಪರಿಹಾರ ಕೊಡದಿದ್ದರೆ ಧರಣಿ

## ಬಿಜೆಪಿ ಹಿರಿಯ ನಾಯಕನ ಎಚ್ಚರಿಕೆ

ನವದೆಹಲಿ, ನ. 7 – ಪಟಾಕಿಗಳ ಮೇಲೆ ನಿಷೇಧ ಹೇರಿರುವ ದೆಹಲಿ ಸರ್ಕಾರ, ನಷ್ಟಕ್ಕೆ ಗುರಿಯಾಗಿರುವ ಪಟಾಕಿ ವರ್ತಕರಿಗೆ ಪರಿಹಾರ ನೀಡದೇ ಹೋದರೆ ಧರಣಿ ನಡೆಸುವುದಾಗಿ ಬಿಜೆಪಿ ಹಿರಿಯ ನಾಯಕ ವಿಜಯ್ ಗೋಯಲ್ ಎಚ್ಚರಿಸಿದ್ದಾರೆ.

ಪಟಾಕಿ ವರ್ತಕರನ್ನು ಭೇಟಿ ಮಾಡಿದ ನಂತರ ಮಾತನಾಡಿರುವ ಅವರು, ದೆಹಲಿ ಸರ್ಕಾರ ಹಾಗೂ ಪೊಲೀಸರು ಅಕ್ಟೋಬರ್‌ನಲ್ಲೇ ಪಟಾಕಿ ಮಾರಾಟಕ್ಕೆ ಅನುಮತಿ ನೀಡಿದ್ದಾರೆ. ನಿಷೇಧ ಹೇರುವಷ್ಟರಲ್ಲಿ ವರ್ತಕರು ಅದಾಗಲೇ ಪಟಾಕಿ ಖರೀದಿಸಿದ್ದಾರೆ ಎಂದು ತಿಳಿಸಿದ್ದಾರೆ.

ಕೊರೊನಾ ಹಾಗೂ ಮಾಲಿನ್ಯದ ಹಿನ್ನೆಲೆಯಲ್ಲಿ ದೆಹಲಿ ಸರ್ಕಾರ ನವೆಂಬರ್ 7ರಿಂದ 30ರ ನಡುವೆ ಪಟಾಕಿಗಳ ಮೇಲೆ ನಿಷೇಧ ಹೇರಿದೆ.


**ಜಮೀನು ಮಾರಾಟಕ್ಕೆ (45 ಲಕ್ಷಕ್ಕೆ)**
1 ಎಕರೆ, ಗ್ರಾಮ : ಚಿಕ್ಕಬೂದಿಹಾಳ್, ದಾವಣಗೆರೆ ತಾಲ್ಲೂಕು (ಮುಂದೆ ಲೇಔಟ್ ಆಗುವಂತಹ) ಸಿಮೆಂಟ್ ರೋಡಿಗೆ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
(ನಮ್ಮ ವ್ಯವಹಾರ ಕಮೀಷನ್ ಆಧಾರದ ಮೇಲೆ)

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಬಾಡಿಗೆಗೆ**
JCB ಮತ್ತು TATA HITACHI SAINRAI ನಮ್ಮಲ್ಲಿ ಬಾಡಿಗೆಗೆ ದೊರೆಯುತ್ತದೆ.
ಗಂಟೆಗೆ ರೂ.800 ರಿಂದ 850/-
ಸಂಪರ್ಕಿಸಿ:
88618 81865, 89716 96902


**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
**ಡಾ. ಇ.ಆರ್. ಸಿದ್ದೇಶಿ**
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಬೇಕಾಗಿದ್ದಾರೆ**
Auditor Office / Accountant Officeನಲ್ಲಿ ಕೆಲಸ ಮಾಡಿದ ಅನುಭವವಿರುವ Male / Female candidate Full Time ಕೆಲಸ ಮಾಡಲು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
ಮೊ. 97392-46046

**ಶಾಮನೂರು ಹತ್ತಿರ, ಡಾಲರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
30x40 North, 30x54 North, 30x50 West, 40x58 South, 30x54 North East Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು, ಸೈಟುಗಳು ಮಾರಾಟಕ್ಕಿವೆ**
30x50 North ಮನೆ, 30x40 East ಮನೆ, 50x80 South, 50x80 East, 30x50 East, 40x60 East
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110


## ಲಕ್ಷ್ಮಿರಂಗನಾಥ ಮೂರ್ತಿಗೆ ಇಂದು ಬಾಳೆಹಣ್ಣು ಅಲಂಕಾರ



ರಟ್ಟಿಹಳ್ಳಿ ತಾಲ್ಲೂಕಿನ ಹಳ್ಳೂರು ಗ್ರಾಮದ ಬೆಟ್ಟದ ಮೇಲಿನ ಶ್ರೀ ಲಕ್ಷ್ಮಿ ರಂಗನಾಥ ಉದ್ಭವಮೂರ್ತಿಗೆ ಇಂದು ಹೂವು-ಬಾಳೆಹಣ್ಣು ಅಲಂಕಾರ ಮಾಡಲಾಗಿತ್ತು.


**ಮನೆ ಲೀಸ್‌ಗಿದೆ**
ರಾಜೀವ್ ಗಾಂಧಿ ಬಡಾವಣೆ ವಿದ್ಯಾಜ್ಯೋತಿ ಕಾನ್ವೆಂಟ್ ಹತ್ತಿರ 20x30 ಪಶ್ಚಿಮ ದಿಕ್ಕಿನ 2 ಬೆಡ್‌ರೂಂ ಹೊಂದಿರುವ ಮನೆ ಭೋಗ್ಯಕ್ಕಿದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
99029 99615, 94813 08990

**ಮನೆ ಬಾಡಿಗೆಗೆ/ಲೀಸ್‌ಗಿವೆ**
ಡಿಸಿಎಂ ಟೌನ್‌ಶಿಪ್, ಡೋರ್ ನಂ. 91/99/537, ತರಳಬಾಳು ಕೃಪ, 1ನೇ ಮೇನ್, 5ನೇ ಕ್ರಾಸ್‌ನಲ್ಲಿ ಆಧುನಿಕ ಸೌಲಭ್ಯವುಳ್ಳ ಸಿಂಗಲ್ ಮತ್ತು ಡಬಲ್ ಬೆಡ್‌ರೂಂ ಮನೆಗಳು ಬಾಡಿಗೆಗೆ/ಲೀಸ್‌ಗಿವೆ. ಸಂಪರ್ಕಿಸಿ :
9886464267, 9480712538

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆಯ 12ನೇ ಕ್ರಾಸ್ ಡೋರ್ ನಂ 2000/72, 30x50 ರ ಗ್ರೌಂಡ್ ಫ್ಲೋರ್‌ನಲ್ಲಿರುವ 2BHK ಮನೆ ಬಾಡಿಗೆಗೆ ಇದೆ. (ಸ್ವಂತ ಬೋರ್ ವೆಲ್ ಹಾಗೂ ನಗರ ಪಾಲಿಕೆ ನೀರಿನ ವ್ಯವಸ್ಥೆಇದೆ)
ಸಂಪರ್ಕಿಸಿ:
74068 91782, 63662 01126

**ಸೈಟುಗಳು ಮಾರಾಟಕ್ಕಿವೆ**
30x36 ಉತ್ತರ, 30x40 ಪಶ್ಚಿಮ, 40x50 ಪೂರ್ವ ವಿನಾಯಕ ಬಡಾವಣೆಯಲ್ಲಿ, 30x40 ದಕ್ಷಿಣ, 30x50 ಉತ್ತರ ಗ್ಲಾಸ್ ಹೌಸ್ ಹತ್ತಿರ.
ಶಾಮನೂರು ಧನ್ಯಕುಮಾರ್, ಏಜೆಂಟ್
97415 62589
ಸ್ವಾಮಿ, ಏಜೆಂಟ್
97421 44715

**ಸೈಟು ಬೇಕಾಗಿದೆ**
P.B.ರಸ್ತೆಯ ಪೈಲ್ವಾನ್ ಚನ್ನಬಸಪ್ಪ ನಗರದಲ್ಲಿ 30x40 ಅಳತೆಯ ಸೈಟ್ ಬೇಕಾಗಿದೆ. ಕೊಡಲಿಚ್ಚಿಸುವ ಆಸಕ್ತರು ತಕ್ಷಣ ಸಂಪರ್ಕಿಸಿ
93531 83384

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆಯಲ್ಲಿ 30x40, 30x50, 40x40, 40x60, ಆಂಜನೇಯ ಬಡಾವಣೆಯಲ್ಲಿ 35x50, ಆವರಗೆರೆ ಉತ್ತಮಚಂದ್ ಬಡಾವಣೆಯಲ್ಲಿ 30x60, ಬಸವೇಶ್ವರ ಲೇ ಔಟ್‌ನಲ್ಲಿ 40x60 ಅಳತೆಯ ಸೈಟುಗಳು ಮಾರಾಟಕ್ಕಿವೆ.
78996 81386, 99866 17483

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮನೆಗಳು ಮಾರಾಟಕ್ಕಿವೆ**
ಬಂಟ್ಸ್ ಸಮುದಾಯ ಭವನದ ಹತ್ತಿರ, ಕುಂದುವಾಡ ರಸ್ತೆಯಲ್ಲಿ 30×40, ಮಹಾಲಕ್ಷ್ಮಿ ಬಡಾವಣೆಯಲ್ಲಿ 30×40 ಮನೆಗಳು ಮಾರಾಟಕ್ಕಿವೆ.
99866 17483, 78996 81386

**ಸೈಟು ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 80x100, 60x50 ಉತ್ತರ, 40x60 ಪೂರ್ವ, 50x80 ದಕ್ಷಿಣ, 80x60 ದಕ್ಷಿಣ, 30x50 ಪೂರ್ವ, 30x40 ದಕ್ಷಿಣ, 30x40 ಉತ್ತರ, 40x60 ಪಶ್ಚಿಮ, 50x80 ಪಶ್ಚಿಮ ಇನ್ನೂ ಅನೇಕ.
ಬೂಸ್ನೂರ್ ಕಿರಣ್ (ಏಜೆಂಟ್)
98440-63409, 97315-63409
(ಮನೆ ಬಾಡಿಗೆಗೆ, ಲೀಸ್ ಗೆ ಸಿಗುತ್ತದೆ)

**ಮನೆ ಕೈ ತೋಟ ಹಾಗೂ ಜಮೀನಿಗೆ ಉಪಯೋಗಿಸಲು ಉತ್ತಮವಾದ ಕಾಂಪೋಸ್ಟ್ ಗೊಬ್ಬರ ದೊರೆಯುತ್ತದೆ.**
ಸಂಪರ್ಕಿಸಿ : ದಾವಣಗೆರೆ.
ಮೊ. 93411-71212

**ಮನೆ ಬಾಡಿಗೆ ಇದೆ**
ವಿನಾಯಕ ನಗರ 2ನೇ ಕ್ರಾಸ್ 'ಬಿ' ಬ್ಲಾಕ್, ರಿಂಗ್ ರೋಡ್, ಸಂಗೊಳ್ಳಿ ರಾಯಣ್ಣ ಸರ್ಕಲ್ ಹತ್ತಿರ 2BHK, ಹಾಲ್. ಕಿಚನ್ ಇರುವ ಎರಡನೇ ಮಹಡಿಯಲ್ಲಿ ಮನೆ ಬಾಡಿಗೆಗಿದೆ.
99863 27715
95356 64359

**ಬೇಕಾಗಿದ್ದಾರೆ**
ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಸಸ್ಯಹಾರಿ ಅಡುಗೆ ಮಾಡಲು ಬೇಕಾಗಿದ್ದಾರೆ. (ಒಬ್ಬರಿಗೆ ಮಾತ್ರ ಅಡುಗೆ ಮಾಡಬೇಕು)
ಮೊ. : 94813 63681

**ಮನೆ ಬಾಡಿಗೆಗೆ**
ಸುಸಜ್ಜಿತ ಸಿಂಗಲ್ ಬೆಡ್ ರೂಂ ಮನೆ "ಸುಮಂತ್ ನಿಲಯ", 3ನೇ ಮೇನ್, 4ನೇ ಕ್ರಾಸ್, ವಿನೋಬನಗರ, ದಾವಣಗೆರೆ ಇಲ್ಲಿ ಬಾಡಿಗೆಗಿದೆ.
ಸಂಪರ್ಕಿಸಿ :
87623 92005

**ಹೊಸ ಮನೆ ಮಾರಾಟಕ್ಕಿದೆ**
30×50 ಪಶ್ಚಿಮ ದಿಕ್ಕಿನ ಸೈಟ್‌ನಲ್ಲಿ 13 ಚದುರದಲ್ಲಿ ಎಲ್ಲಾ ಆಧುನಿಕ ವ್ಯವಸ್ಥೆ ಇರುವ, ವಾಸ್ತು ಪ್ರಕಾರ ಕಟ್ಟಿರುವ 2 ಬೆಡ್‌ರೂಂ ವಾಸದ ಮನೆಗಳು ಬಾಲಾಜಿ ಲೇ ಔಟ್‌ನಲ್ಲಿ ಮಾರಾಟಕ್ಕಿವೆ. ವಿಚಾರಿಸಿ :
98448 82366

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ ತರಳಬಾಳು ಬಡಾವಣೆ ಕಾಫಿ ಡೇ ಹತ್ತಿರ ಮೊದಲ ಮಹಡಿಯಲ್ಲಿ 1 ಮತ್ತು 2 BHK ಮನೆ, 2ನೇ ಮಹಡಿಯಲ್ಲಿ ಅಟ್ಯಾಚ್ಡ್ ರೂಂ ಬಾಡಿಗೆಗೆ ಇದೆ.
94497 59471

**ಸೈಟು ಮಾರಾಟಕ್ಕೆ**
ಶಿವ-ಪಾರ್ವತಿ ಲೇಔಟ್, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ
SPL : 34x54, 40x35, 30x54, 50x100.
JHP : 40x60, 30x50, 30x40, 90x60, 55x70.
ಬೂಸ್ನೂರ್ ಕಿರಣ್ (ಏಜೆಂಟ್)
97315-63409, 98440-63409
(ಮನೆ ಬಾಡಿಗೆಗೆ, ಲೀಸ್ ಗೆ ಸಿಗುತ್ತದೆ)

**ಆಯಾ ಕೆಲಸಕ್ಕೆ ಬೇಕಾಗಿದ್ದಾರೆ**
ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಆಯಾ ಕೆಲಸಕ್ಕೆ ಮಹಿಳೆಯರು (ಇಬ್ಬರು) ಬೇಕಾಗಿದ್ದಾರೆ.
ನೇರ ಸಂದರ್ಶನಕ್ಕೆ ಸಂಪರ್ಕಿಸಿ :
ಫೋ. 08192-282228
86186-62929

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಜೈನ್ ಸೌಹಾರ್ದ ಸಹಕಾರಿ ನಿಯಮಿತಕ್ಕೆ ಅಕೌಂಟೆಂಟ್ ಹಾಗೂ ಮ್ಯಾನೇಜರ್ ಬೇಕಾಗಿದ್ದಾರೆ. ಬಿ.ಕಾಂ ಪದವೀಧರರಿಗೆ ಆದ್ಯತೆ.
ಆಸಕ್ತರು ಸಂಪರ್ಕಿಸಿ :
98443 59130

**ಮನೆಗಳು ಮಾರಾಟಕ್ಕೆ**
ಸರಸ್ವತಿ ನಗರ ಡುಪ್ಲೆಕ್ಸ್ ಮನೆ 30x60 (ಪೂರ್ವ), S.S.ಲೇಔಟ್ 30x40 (ಉತ್ತರ) ಜಯನಗರ 30x50 (ಪೂರ್ವ), ಸರಸ್ವತಿ 20x30 (ಪೂರ್ವ), S.S. ಲೇಔಟ್ ಡುಪ್ಲೆಕ್ಸ್, 30x50 (ಉತ್ತರ) ಮನೆಗಳು ಮಾರಾಟಕ್ಕಿವೆ.
98804 40602

**ಟೈಪಿಸ್ಟ್ ಬೇಕಾಗಿದ್ದಾರೆ**
ಕನ್ನಡದಲ್ಲಿ ತ್ವರಿತವಾಗಿ ಟೈಪ್ ಮಾಡಲು ಕಂಪ್ಯೂಟರ್ ಟೈಪಿಸ್ಟ್ ಬೇಕಾಗಿದ್ದಾರೆ.
ಸ್ಥಳ: ಹೊಸ ಕೋರ್ಟ್ ಎದುರು, ದಾವಣಗೆರೆ.
ಸಂಪರ್ಕಿಸಿ:
94482 33070, 98449 97093

**ಮಾರಾಟಕ್ಕಿದೆ**
ವಿನೋಬನಗರ ರಿಂಗ್ ರಸ್ತೆ, ಭೂತಪ್ಪ ದೇವಸ್ಥಾನದ ಹತ್ತಿರ, 2 BHK 16x64 ಅಳತೆಯ 2 ಅಂತಸ್ತಿನ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
99646 56869
99868 16645

**ಸೈಟ್ ಮತ್ತು ಅಪಾರ್ಟ್‌ಮೆಂಟ್ ಬಾಡಿಗೆಗೆ, ಮಾರಾಟಕ್ಕೆ ಇದೆ**
ಎಸ್.ಎಸ್. ಲೇ ಔಟ್, ಮಹಾಲಕ್ಷ್ಮಿ ಲೇ ಔಟ್, ಸಿದ್ದವೀರಪ್ಪ ಬಡಾವಣೆ, KHB ಕಾಲೋನಿ, ಜೆ.ಹೆಚ್. ಪಟೇಲ್ ನಗರ, ಬನಶಂಕರಿ ಬಡಾವಣೆ 30×50, 30×48, 20×30, 50×50, 50×70
94481-85946

**Admission Started**
with sanitized Room
Veta Export
Spoken English
93439 44659
99028 60360

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ
ರಾಮಧೂತ ಎಂಟರ್‌ಪ್ರೈಸಸ್
97388 27452
74110 25934

**ಮನೆ ಬಾಡಿಗೆಗಿದೆ**
ದೇವರಾಜ್ ಅರಸ್ 'ಎ' ಬ್ಲಾಕ್ ಮೊದಲನೇ ಮಹಡಿಯಲ್ಲಿ ಮುನ್ಸಿಪಲ್ ಹಾಗೂ ಬೋರ್‌ವೆಲ್ ವ್ಯವಸ್ಥೆಯುಳ್ಳ ಮನೆ ಬಾಡಿಗೆಗಿದೆ.
ಸಂಪರ್ಕಿಸಿ:
99012 47050

**ಮನೆಗಳು ಲೀಜಿಗೆ ಇವೆ**
ಸಿಂಗಲ್ ಬೆಡ್‌ರೂಂ, ಡಬಲ್ ಬೆಡ್‌ರೂಂ ಆಂಜನೇಯ ಬಡಾವಣೆಯಲ್ಲಿ ಹೊಸ ಮನೆಗಳು (ಸಸ್ಯಹಾರಿಗಳಗೆ ಮಾತ್ರ)
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ/ಲೀಸ್ ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್ ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
99726-75759

**ಕೆಲಸಕ್ಕೆ ಬೇಕಾಗಿದ್ದಾರೆ**
ಫೀಲ್ಡ್ ವರ್ಕ್ ಮಾಡಲು ಯುವಕರು & ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ.
Location : ದಾವಣಗೆರೆ & ಚಿತ್ರದುರ್ಗ
ವಿದ್ಯಾರ್ಹತೆ : ಪದವಿ
ಮೊ: 90667 66580

**ಮಾರಾಟಕ್ಕೆ**
ಭೂಮಿಕ ಲೇಔಟ್ ಮನೆ-30×40, ಭಗೀರಥ ಸರ್ಕಲ್ ಮನೆ-30×40, ಸರಸ್ವತಿ ಬಡಾವಣೆ ಮನೆ-20×35, SS ಲೇಔಟ್ ಮನೆ-30×40 (35 ಸಾವಿರ ಬಾಡಿಗೆ ಬರುವಂತಹ ಮನೆ), SS ಲೇಔಟ್ ಸೈಟ್-30×40, ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು) 30×40, ನಿಟ್ಟುವಳ್ಳಿಯಲ್ಲಿ ಸೈಟ್-23×45
78996 36597, 99165 25828

**ಜನರೇಟರ್ ಬೇಕಾಗಿದೆ**
20KV, ಡೀಸೆಲ್ ಜನರೇಟರ್ ಬೇಕಾಗಿದೆ. ಆಸಕ್ತರು ಸಂಪರ್ಕಿಸಿ
94491 51216
MMP TYRE Retraders
ಮಾಕನೂರು ಕ್ರಾಸ್ ಹತ್ತಿರ, N.H.4, ಕುಮಾರ ಪಟ್ಟಣಂ-581 123

**TO-LET**
2BHK HOUSE AT 1st FLOOR (VEG ONLY) B.T.GALLI, SRI CHOWDAMBIKA DEVI TEMPLE ROAD, DAVANAGERE-577001
97392 65666

**ಮನೆ ಮಾರಾಟಕ್ಕಿದೆ**
30x40 ಅಳತೆಯ 2 ಬೆಡ್ ರೂಂವುಳ್ಳ ಪೂರ್ವ ದಿಕ್ಕಿನ ಬೋರ್ ವ್ಯವಸ್ಥೆಯುಳ್ಳ ಸುಸಜ್ಜಿತ ಮನೆ ಮಾರಾಟಕ್ಕಿದೆ. KHB ಕಾಲೋನಿ # 2850, ಲೋನ್ ವ್ಯವಸ್ಥೆ ಇರುತ್ತದೆ. ಆಸಕ್ತರು ಸಂಪರ್ಕಿಸಿ.
ಶ್ರೀಕಾಂತ್
99163 23302

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಸೀಮೆಎಣ್ಣೆ ಬಂಕ್ ಎದುರು, ಮೊದಲನೇ ಮಹಡಿಯಲ್ಲಿ ಡಬಲ್ ಬೆಡ್ ರೂಂ, 2ನೇ ಮಹಡಿಯಲ್ಲಿ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ.
73495 98347, 94481 25056

**ಸೈಟುಗಳು ಮಾರಾಟಕ್ಕೆ**
ಸಿದ್ದವೀರಪ್ಪ ಬಡಾವಣೆ 30x50 (ಉತ್ತರ), ಎಂ.ಸಿ.ಸಿ. 'ಬಿ' ಬ್ಲಾಕ್ 44x60 (ಪೂರ್ವ), ವಿನಾಯಕ ಬಡಾವಣೆ 40x50 (ಪೂರ್ವ), ಶಿವ ಪಾರ್ವತಿ ಲೇಔಟ್ 30x44 (ಪೂರ್ವ) S.S. ಲೇಔಟ್ 40x60 (ದಕ್ಷಿಣ) ಸೈಟುಗಳು ಮಾರಾಟಕ್ಕಿವೆ.
98804 40602

**Wanted**
Sales Person 5 No's
PUC, Any Degree
Accountant - 5 No's
Qualifiction - BBM, MBA, B.Com, M.Com
Hullumane Properties & Power Pvt Ltd
95135 03000

**ತಕ್ಷಣ ಬೇಕಾಗಿದ್ದಾರೆ**
ದೋಸೆ ಭಟ್ಟರು ಹಾಗೂ ತಿಂಡಿ ಭಟ್ಟರು ಬೇಕಾಗಿದ್ದಾರೆ. ಊಟ, ವಸತಿ ವ್ಯವಸ್ಥೆ ಇರುತ್ತದೆ. ಸಮಯ: ಬೆಳಿಗ್ಗೆ 6 ರಿಂದ ಮಧ್ಯಾಹ್ನ 3ರವರಗೆ
ಸಂಪರ್ಕಿಸಿ:
63641 23846

**ಶ್ರೀ ಗಣೇಶ್ ಮ್ಯಾನ್ ಪವರ ಸರ್ವೀಸ್**
ಮನೆ/ ಫ್ಯಾಕ್ಟರಿಯಲ್ಲಿರುವ ನೀರಿನ ಸಂಪ್ ತೊಳೆಯಲು ಮನೆ/ಆಫೀಸ್ ಸಾಮಾನುಗಳನ್ನು ಶಿಫ್ಟ ಮಾಡಲು, ಮನೆ ಕ್ಲೀನಿಂಗ್/ ಪಾರ್ಕ್ ಕ್ಲೀನ್ ಮಾಡಲು, ಸಮಾರಂಭಗಳಲ್ಲಿ ಊಟ ಬಡಿಸಲು, ಅಡುಗೆ ಮಾಡಲು ಕೆಲಸಗಾರರು ಸಿಗುತ್ತಾರೆ.
97312 67182
98446 68781

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ತಾಲ್ಲೂಕು ಕುಕ್ಕುವಾಡ ಗ್ರಾಮದಲ್ಲಿ ಫೈನಲ್ ಅಪ್ರೋವಲ್ ಡೋರ್ ನಂಬರ್ ಇರುವ 20x30 ಅಳತೆಯ ಸೈಟ್‌ಗಳು ಮಾರಾಟಕ್ಕಿವೆ
ಆಸಕ್ತರು ಸಂಪರ್ಕಿಸಿ:
97409 48256, 94481 39079

**Required**
Receptionist, Operation Theatre Nursing staff
94488 86026
81238 95187
94495 80761

**2 BHK HOUSE FOR RENT**
East face Ground floor 2581/5, 4th main North Sridhar Aquarium Cross, M.C.C. A block, Davangere-4.
95356 59259, 94489 24513

**ಬೇಕಾಗಿದ್ದಾರೆ**
ಕ್ಯಾಟಲ್ ಫೀಡ್ ಹಾಗೂ ಪೇಪರ್ ಭಾಗ/ಕವರ್ ಮಾರಾಟ ಮಾಡಲು ಗ್ರಾಮಾಂತರ, ತಾಲ್ಲೂಕುಗಳಲ್ಲಿ ಮಾರಾಟ ಪ್ರತಿನಿಧಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ :
94834 77544, 90193 66266

**ಜಾಗ ಮಾರಾಟಕ್ಕೆ ಇದೆ**
ದಾವಣಗೆರೆ ಜಗಳೂರು ರಸ್ತೆ, ಆಲೂರುಹಟ್ಟಿ ಹತ್ತಿರ ಇರುವ 1 ಎಕರೆ ಎನ್.ಎ. (ಕೈಗಾರಿಕೆ) ಜಾಗ ಮಾರಾಟಕ್ಕಿದೆ. 80 ತ್ಯಾಗದ ಮರ, 55x26 ಅಡಿ ಶೆಡ್ ಹಾಗೂ ಬೋರ್‌ವೆಲ್ ಸೌಕರ್ಯ ಮತ್ತು 24x7 ಕರೆಂಟ್ ಸೌಲಭ್ಯ ಇದೆ. ಆಸಕ್ತರು ಸಂಪರ್ಕಿಸಿ :
ಮೊ: 83102 42294

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**FOR SALE**
Activa Honda, FZ Yamaha Bike Full Recondition with Paint
M: 94812 47552

**ಬಂಗಲೆ ಸೈಟ್ ಮಾರಾಟಕ್ಕಿದೆ**
ದಾವಣಗೆರೆಯ ಬೈಪಾಸ್ ಮತ್ತು ಗಾಜಿನ ಮನೆ ಹತ್ತಿರ 40x71, ಡೋ.ನಂ. 1717/5, ರಸ್ತೆ, ನೀರು, ಕರೆಂಟು, ಡ್ರೈನೇಜ್ ಎಲ್ಲಾ ಪರ್ಮಿಷನ್ ಪಡೆದಿರುವ ಪೂರ್ವಕ್ಕಿರುವ ಸೈಟು ಮಾರಾಟಕ್ಕಿದೆ ವಿಚಾರಿಸಿ
ಎಸ್.ಜಿ. ಕೃಷ್ಣಮೂರ್ತಿ
86182 19879, 85539 20876

**ಮನೆ ಬಾಡಿಗೆಗಿದೆ**
ದಾವಣಗೆರೆ ಸ್ವಾಮಿ ವಿವೇಕಾನಂದ ಬಡಾವಣೆ 1ನೇ ಮೇನ್, # 2054/5, ಶಿವಶಕ್ತಿ ನಿಲಯದಲ್ಲಿ 3BHK ಮನೆ ಬಾಡಿಗೆಗೆ ಇದೆ. ಬೋರ್ & ಕಾರ್ಪೋರೇಷನ್ ನೀರಿನ ಸೌಲಭ್ಯ, ಸೋಲಾರ್ ವ್ಯವಸ್ಥೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
99869 70987
81519 81964

**SHOP FOR RENT**
Shop measuring 14'X24' is for rent in MCC B BLOCK, 3rd Main,3rd Cross,Davanagere.
Contact:
99641 45161

**ವಾಸ್ತು ಮನೆ, ಶಾಪ್ ಬಾಡಿಗೆ**
ಶಾಪ್, ಗ್ರೌಂಡ್ ಫ್ಲೋರ್ ಪೂರ್ವ ಮುಂಬಾಗಿಲಿನ 2 & 3 ಬೆಡ್ ರೂಂ, ನೀರಿನ ಸೌಕರ್ಯ, ಪಾರ್ಕಿಂಗ್, Semi Furnished ಇದೆ. # 408, ಸಮೃದ್ಧಿ ನಿಲಯ, ಪಿ.ಜೆ.ಬಡಾವಣೆ, ಮೋದಿ ಕಾಂಪೌಂಡ್ ಹತ್ತಿರ.
93807 97651
95386 41980

**ಮನೆ ಬಾಡಿಗೆಗೆ ಇದೆ**
2BHK, 2ನೇ ಮಹಡಿ, ಪೂರ್ವ ಬಾಗಿಲು ವಿದ್ಯಾ ನಂದನ ಸ್ಕೂಲ್ ಹತ್ತಿರ, ಸರಸ್ವತಿ ನಗರ.
97405 04217
74117 79793

**ಮನೆ ಬಾಡಿಗೆಗೆ ಇದೆ**
ಶಿವಕುಮಾರ ಸ್ವಾಮಿ ಬಡಾವಣೆ 2ನೇ ಹಂತ, 2ನೇ ಮೇನ್, 7ನೇ ಕ್ರಾಸ್, ಫಸ್ಟ್ ಫ್ಲೋರ್, 2BHK (ಸಸ್ಯಹಾರಿಗಳಿಗೆ ಮಾತ್ರ) #1387/30, ಹಳೇ ಶಾಂತಿನಿಕೇತನ ಸ್ಕೂಲ್ ಹತ್ತಿರ
ವಿಶ್ವನಾಥ್
94497 29760

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ, ಬೋರ್‌ವೆಲ್ ಹಾಗೂ ಕಾರ್ಪೋರೇಷನ್ ನೀರು ಇರುವ ಮನೆ 4ನೇ ಮೇನ್, 7ನೇ ಕ್ರಾಸ್ ವಿದ್ಯಾನಗರ ಪಾರ್ಕ್ ಪಕ್ಕ ಇರುವ ಮನೆ ಖಾಲಿ ಇದೆ.
95917 47333
97416 78794

**ಬೇಕಾಗಿದ್ದಾರೆ**
ಮನೆಯಲ್ಲಿಯೇ ಇದ್ದು ಮನೆ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಸಂಬಳ - 10,000
ಸಂಪರ್ಕಿಸಿ:
94488 86026

**ಮನೆ ಬಾಡಿಗೆಗಿದೆ**
ಮಹಡಿ ಮನೆ, ಡಬಲ್ ಬೆಡ್ ರೂಂ, ಸಸ್ಯಹಾರಿಗಳಿಗೆ ಮಾತ್ರ ನಂ. 3815, 4ನೇ ಕ್ರಾಸ್, 18ನೇ ಮೇನ್, ಬಾಪೂಜಿ ಸ್ಕೂಲ್ ಹತ್ತಿರ, ಕುವೆಂಪು ನಗರ, ಎಂಸಿಸಿ ಬಿ ಬ್ಲಾಕ್, ದಾವಣಗೆರೆ-04
94802 49340

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟೈಸರ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ
97388 27452
74110 25934

**ಮನೆ ಬಾಡಿಗೆಗಿದೆ**
M.C.C. 'A' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್, ಮನೆ ನಂ-280, ಮುದ್ದಳ್ಳಿ ತೋಟ, ದಾವಣಗೆರೆ.
63601 63822

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್ ನಲ್ಲಿ ಇನ್ ವೆಂಟರಿ ಮ್ಯಾನೇಜ್ ಮೆಂಟ್, ಬಿಲ್ಲಿಂಗ್ ಹಾಗೂ ಪಿಕಿಂಗ್ ಪ್ಯಾಕಿಂಗ್ ಮಾಡಲು ಪಾರ್ಟ್ ಟೈಂ / ಫುಲ್ ಟೈಂ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. PF, ESI, OT ಇರುತ್ತದೆ. ಸಂಪರ್ಕಿಸಿ:
91080 51921

**ಬೇಕಾಗಿದ್ದಾರೆ**
ಬ್ಯೂಟಿಷಿಯನ್ ಬೇಕಾಗಿದ್ದಾರೆ.
ಮಾರ್ವಲಸ್ ಯೂನಿಸೆಕ್ಸ್ ಸಲೂನ್
98862 70435
63615 41448

**Commercial Space for Rent**
330 sq feets, East Facing, 1st floor, 4th main, 4th cross, Near Ram & Co, Circle, P.J. Extension, Davangere. (Commercial only)
78927 68527

**Room For Rent**
# 5628/D-23, "Shivaratnna" 20x15 sq ft, 4th Main, 6th croos (Lift) Near Indoor Stadium, S.S. Badavane 'B' Block Room with attached bathroom and kitchen
Contact:
94489 29509

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ. ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಸುವರ್ಣಾವಕಾಶ**
ನಿರುದ್ಯೋಗಿ ಯುವಕರಿಗೆ ಪಾರ್ಟ್ ಟೈಮ್/ ಫುಲ್ ಟೈಮ್ ಮಾರ್ಕೆಟಿಂಗ್ ಮಾಡಿ ದಿನ ಒಂದಕ್ಕೆ 100/- ರೂಪಾಯಿಯಿಂದ 2000/- ವರೆಗೆ ಸಂಪಾದಿಸಿ.
Contact:
81235 16806

**2BHK House To Let**
2BHK House with 24 Hrs water Supply & Spacious Rooms is Available for Rent. # 2009/204, "KAVI" Taralabalu Badavane 3rd Stage, 17th main, 5th cross Ranganatha badavane, Davanagere.
98440 67192
98446 00690

**WANTED**
Lady Tele Callers with Computer Knowledge
Contact : GLOBAL ENTERPRISES
Mudhagowdara Building, Ram & Co Circle, Davangere.
94484 57151

**ವಾಹ್ ಚಾಯ್ !! ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**Herbal Hand Sanitizer**
No Chemicals, No Spirit, Made with Natural Aroma Oils
Contact : Holly Wood Aroma Clinic
78922 32568, 08192 224252

**ನೇರ ಪರೀಕ್ಷೆಗಳು**
S.S.L.C, PUC, Technical & Non Technical Courses, Pharmacy & BHMS (Government & Private College)
ಸಂಪರ್ಕಿಸಿ: ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789
87620 58369

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ವೇಳೆ ಕೆಲಸ ಮಾಡಲು ರೂಂ ಬಾಯ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿರಿ:
90085 33290

**'ಸಿದ್ಧ' ನವೋದಯ ಕೋಚಿಂಗ್ ಸೆಂಟರ್-ದಾವಣಗೆರೆ**
* 5ನೇ ತರಗತಿ ಮಕ್ಕಳಿಗೆ ಇಂದಿನಿಂದ ಆನ್‌ಲೈನ್‌ನಲ್ಲಿ ತರಗತಿ ಪ್ರಾರಂಭ.
* 4,6 ಮತ್ತು 7ನೇ ತರಗತಿಯ ಮಕ್ಕಳು ಸಹ ಅಡ್ಮಿಷನ್ ಮಾಡಿಸಬಹುದು.
ಸಂಪರ್ಕಿಸಿ : ಚಂದ್ರಕಾಂತ ಪಿ. ಮುರುಗಿ
99807 26426, 98455 62991

**WANTED**
SALES MAN / SALES GIRLS, ASSISTANT SALES MAN
ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**Fully Furnished House For Rent in sarswvasthi Nagar**
2nd Floor, with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**WALL PAPER**
@ offer Price
10 ₹ per Sq.Ft
(600 - 900 per Roll)
Contact :
INTERIOR HIVE
98860-04771
63635-61331

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**NGO - ವಿದ್ಯಾಸಂಸ್ಥೆ, ಮಹಿಳಾ ಸಂಘ, ಸ್ವ-ಸಹಾಯ ಸಂಘಗಳ ನವೀಕರಣ, TRUST Registration ಮತ್ತು ಆಡಿಟ್‌ಗಾಗಿ**
ಸಂಪರ್ಕಿಸಿ:
MEGHANA ASSOCIATES (R)
(M) : 99809 16126

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ದೂರ ಶಿಕ್ಷಣ ಪರೀಕ್ಷೆಗಳು**
UGC, AICT & DEB Recognisde University
S.S.L.C. PUC, B.A, B.Com, B.Sc, B.C.A, M.A, M.Com, M.Sc, B.Lib, M.Lib, M.B.A, M.C.A. Diploma Course, B.Tech, Para Medical Course & All Courses
77609 55550, 96200 28627

**GST Registration, INCOME TAX & GST CASES, Project Reports, and for Account Maintenances.**
Contact :
MEGHANA ASSOCIATES (R)
(M) : 99809 16126

# ಜನಪದರು ಅಕ್ಷರಸ್ಥರಲ್ಲದಿದ್ದರೂ ಕಾವ್ಯ ಪ್ರಯೋಗ ಪರಿಣಿತರು

ದಾವಣಗೆರೆ, ನ.7- 'ಜಾನಪದ ಸಾಹಿತ್ಯ' ಅತ್ಯಮೂಲ್ಯವಾದ ಮಾನವೀಯ ಮೌಲ್ಯವುಳ್ಳ ಶತ ಶತಮಾನಗಳಿಂದ ಜನರ ಬಾಯಿಂದ ಬಾಯಿಗೆ ಹರಿದು, ಎಲ್ಲ ಕನ್ನಡಿಗರ ಮನದಾಳದಲ್ಲಿ ಮನೆ ಮಾಡಿರುವ ಸಾಹಿತ್ಯ ಎಂದು ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನಿತಾ ಹೆಚ್. ದೊಡ್ಡಗೌಡರ್ ತಿಳಿಸಿದರು.



ನಗರದ ಗ್ರಂಥ ಸರಸ್ವತಿ ಪ್ರತಿಭಾ ರಂಗವು ರಾಜ್ಯೋತ್ಸವದ ನಿಮಿತ್ತ ಹಮ್ಮಿಕೊಂಡಿದ್ದ ಅಂತರ್ಜಾಲ ಕನ್ನಡ ಕಬ್ಬ, ಉಗಾದಿ ಹಬ್ಬ ಕಾರ್ಯಕ್ರಮದಲ್ಲಿ ಪಾಲ್ಗೊಂಡು 'ಜಾನಪದ ಸಾಹಿತ್ಯದಲ್ಲಿರುವ ಮೌಲ್ಯಯುತ ಅಂಶಗಳು' ವಿಷಯ ಕುರಿತು ಉಪನ್ಯಾಸ ನೀಡಿದರು.

ಜಾನಪದ ಸಾಹಿತ್ಯದಲ್ಲಿ 'ಸ್ತ್ರೀ' ಹೇಗೆ ತನ್ನ ದೈನಂದಿನ ದಿನಗಳಲ್ಲಿ ಸಂಸ್ಕಾರವುಳ್ಳ ಜೀವನ ಸಾಗಿಸಿ, ಹುಟ್ಟಿದ ಮನೆಗೂ, ಕೊಟ್ಟ ಮನೆಗೂ ಹೆಸರು ತರುವಂತೆ ಬಾಳಿದ್ದಳು ಎಂಬುದನ್ನು ಜಾನಪದ ಗೀತೆಗಳೊಂದಿಗೆ ಎಳೆಎಳೆಯಾಗಿ ವಿಮರ್ಶಿಸಿ, ಜಾನಪದ ಸಾಹಿತ್ಯದಲ್ಲಿ ಯಾವ ಸಾಲಿನಲ್ಲಿಯೂ ದ್ವೇಷ, ಅಸೂಯೆ, ಸ್ವಾರ್ಥ ಇರದೇ, ಬರೀ ಸ್ತ್ರೀಯಲ್ಲಿ ತ್ಯಾಗ, ಪ್ರೀತಿ, ಕರುಣೆಯ ಪ್ರತಿರೂಪದ ದರ್ಶನವಾಗುತ್ತದೆ ಎಂದವರು ಉದಾಹರಣೆಯೊಂದಿಗೆ ಪ್ರತಿಪಾದಿಸಿದರು.

ಜಾನಪದ ಸಾಹಿತ್ಯದಲ್ಲಿ ಹೆಣ್ಣು ತನ್ನ ತವರು, ತಂದೆ- ತಾಯಿಗಳ ಮೇಲಿರುವ ಪ್ರೀತಿ, ಅಣ್ಣ-ತಮ್ಮಂದಿರ ಮೇಲಿನ ಅಭಿಮಾನದ ಜೊತೆಗೆ, ಗಂಡನ ಮನೆಯ ಕರ್ತವ್ಯ ಪ್ರಜ್ಞೆ, ಪರಿಸರ ಹಾಗೂ ಪ್ರಾಣಿ - ಪಕ್ಷಿಗಳೊಂದಿಗಿನ ಅವಿನಾಭಾವ ಸಂಬಂಧದ ಮಾಧುರ್ಯವನ್ನು ಜಾನಪದ ಗೀತೆಗಳ ಸಾಲುಗಳನ್ನು ಮಧುರವಾಗಿ ಹಾಡುತ್ತಾ ವಿವರಿಸಿದರು. ಇದೆಲ್ಲದರ ಜೊತೆಗೆ 'ಕೆರೆಗೆ ಹಾರ' ಸಾಹಿತ್ಯದಲ್ಲಿರುವ ಸಾಮಾಜಿಕ ಕಳಕಳಿಯನ್ನು ವರ್ಣಿಸಿದರು.

ಜಾನಪದ ಸಾಹಿತ್ಯ ಎಲ್ಲ ಪಠ್ಯ ಪುಸ್ತಕಗಳಲ್ಲಿ ಗೀತೆಗಳ ಮೂಲಕ, ಲೇಖನಗಳ ಮೂಲಕ, ನಮ್ಮ ಇಂದಿನ ಪೀಳಿಗೆಯವರಿಗೆ ಅದರ ಅರಿವು ಮೂಡಿಸುವ ಪ್ರಯತ್ನವನ್ನು ಶಿಕ್ಷಣ ವ್ಯವಸ್ಥೆ ಮಾಡಿದಾಗ ಆ ಸಾಹಿತ್ಯದ ವರ್ಗಾವಣೆ ಮುಂದಿನ ಪೀಳಿಗೆಯವರಿಗೂ ಕೊಂಡೊಯ್ಯಬಹುದು ಎಂದು ಅನಿತಾ ಅವರು ಅಭಿಪ್ರಾಯಪಟ್ಟರು.


ಕು. ಅನನ್ಯ ಸ್ವಾಗತಿಸಿದರು. ಶ್ರೀಮತಿ ಯಶಾ ದಿನೇಶ್ ಸುಮಧುರವಾಗಿ ಕನ್ನಡ ಗೀತೆಯನ್ನು ಹಾಡಿದರು. ಇದೇ ಕಾರ್ಯಕ್ರಮದಲ್ಲಿ ಬಳ್ಳಾರಿಯ ಚಿಂತನಕಾರ್ತಿ ಸುಮಂಗಳ ಶಿವಕುಮಾರ್ ಬಳಿಗಾರ್ ಅವರು 'ಗುಬ್ಬಿ ಎರವರ ಮನೆಯ ತನ್ನದೆಂಬಂತೆ' ವಿಷಯ ಕುರಿತು ಉಪನ್ಯಾಸ ನೀಡಿದರು.

# ಭದ್ರಾ ಜಲಾಶಯದ ನೀರನ್ನು ಸದ್ಬಳಕೆ ಮಾಡಿಕೊಳ್ಳುವ ಕುರಿತಂತೆ ನೀರಾವರಿ ತಜ್ಞ ಪ್ರೊ. ನರಸಿಂಹಪ್ಪ ಸಲಹೆ

ದಾವಣಗೆರೆ, ನ.7- ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮತಿ ಪವಿತ್ರ ರಾಮಯ್ಯ ಅವರು ಇಂದು ನಗರದಲ್ಲಿರುವ ನೀರಾವರಿ ತಜ್ಞ ಪ್ರೊ. ನರಸಿಂಹಪ್ಪ ಅವರನ್ನು ಭೇಟಿ ಮಾಡಿ, ಸನ್ಮಾನಿಸಿದರು.

ಭೇಟಿಯ ಸಂದರ್ಭ ತುಂಗಾ ಮತ್ತು ಭದ್ರಾ ಜಲಾಶಯಗಳ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಹಾಗೂ ಅದರ ಬಗ್ಗೆ ಸಾಕಷ್ಟು ಮಾಹಿತಿ ಹೊಂದಿರುವ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಂಡರು.

ಭದ್ರಾ ಜಲಾಶಯದ ನೀರನ್ನು ಯಾವ ರೀತಿ ಸದ್ಬಳಕೆ ಮಾಡಿಕೊಳ್ಳಬೇಕು, ರೈತರಿಗೆ ಯಾವ ರೀತಿಯಲ್ಲಿ ಪ್ರಾಧಿಕಾರ ಕೆಲಸ ಮಾಡಬೇಕು, ರೈತರಿಗೆ ಎಷ್ಟರ ಮಟ್ಟಿಗೆ ಪ್ರಾಧಿಕಾರ ಅನುಕೂಲ ಮಾಡಿ ಕೊಡಬೇಕು, ಜಮೀನಿನ ಕೊನೆಯ ಭಾಗದವರೆಗೂ ನೀರನ್ನು ಯಾವ ಯೋಜನೆಗಳ ಮೂಲಕ ಅನ್ನದಾತನಿಗೆ ತಲುಪಿಸಬೇಕು, ಜಲಾಶಯದ ಕಾಲುವೆಗಳನ್ನು ಯಾವ ರೀತಿ ಉನ್ನತಿಕರಿಸಬೇಕು, ನೀರು ಪೋಲಾಗದಂತೆ ಹೇಗೆ ಕ್ರಮ ವಹಿಸಬೇಕು, ಪ್ರಾಧಿಕಾರವನ್ನು ಯಾವ ರೀತಿಯಲ್ಲಿ ರೈತ ಸ್ನೇಹಿಯಾಗಿಸಬೇಕು, ಸರ್ಕಾರದಿಂದ ಬರುವ ಅನುದಾನವನ್ನು ಹೇಗೆ ಸದ್ಬಳಕೆ ಮಾಡಿಕೊಳ್ಳಬೇಕು, ಯಾವ ಕಾಮಗಾರಿಗಳು ಪ್ರಾಧಿಕಾರದಿಂದ ಹೆಚ್ಚಾಗಿ ಮಾಡಿದರೆ ರೈತರು ಬೆಳೆ ಬೆಳೆಯಲು ಹೆಚ್ಚಾಗಿ ಅನುಕೂಲವಾಗುತ್ತದೆ ಎಂಬುದರ ಬಗ್ಗೆ ಇನ್ನೂ ಹಲವಾರು ಪ್ರಮುಖ ವಿಚಾರಗಳ ಬಗ್ಗೆ ತಮ್ಮ ಮನದಾಳದ ಅನುಭವವನ್ನು ಹಂಚಿಕೊಂಡರು.



ಪ್ರೊ|| ನರಸಿಂಹಪ್ಪ ಅವರನ್ನು ಸನ್ಮಾನಿಸಿದ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪವಿತ್ರ ರಾಮಯ್ಯ

ಇದಕ್ಕೆ ಪ್ರತಿಕ್ರಿಯಿಸಿದ ಭದ್ರಾ ಕಾಡಾ ಅಧ್ಯಕ್ಷರು, ನೀವು ಕೊಟ್ಟ ಎಲ್ಲಾ ಸಲಹೆಗಳನ್ನು ಖಂಡಿತಾ ಕಾರ್ಯ ರೂಪಕ್ಕೆ ತರುತ್ತೇನೆ. ನಿಮ್ಮ ಅನುಭವ ನಮಗೆ ಅತೀವ ಸ್ಫೂರ್ತಿ ತಂದಿದೆ. ರೈತ ಪರ ಹೋರಾಟದ ಹಿನ್ನೆಲೆಯಿಂದ ಬಂದ ನನಗೆ ನಿಮ್ಮಂತವರ ಮಾರ್ಗದರ್ಶನದಿಂದ ಇನ್ನಷ್ಟು ಹೆಚ್ಚಿನ ಕೆಲಸ ಮಾಡಲು ಉತ್ಸುಕವಾಗುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್, ಶಾಮನೂರು ಹೆಚ್.ಆರ್. ಲಿಂಗರಾಜ್ ಅವರುಗಳು ತಮ್ಮ ಭಾಗದ ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದರು. ಇದರೊಂದಿಗೆ ಕಳೆದಸುಮಾರುವರ್ಷಗಳಿಂದದುರಸ್ತಿಯಾಗದೇ ಇರುವ ಕಾಲುವೆಗಳ ಬಗ್ಗೆ, ಹೊಲಗಾಲುವೆ ನಿರ್ಮಿಸಿಕೊಡುವ ಬಗ್ಗೆ ಇನ್ನು ಹಲವಾರು ಪ್ರಮುಖ ಸಮಸ್ಯೆಗಳ ಬಗ್ಗೆ ಮಾಹಿತಿ ಹಂಚಿಕೊಂಡರು. ಜೊತೆಗೆ ಎಲ್ಲಾ ರೀತಿಯ ಸಲಹೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

# ಸರ್ವಜ್ಞ ಒಬ್ಬ ಮೇರು ಕವಿ, ದಾರ್ಶನಿಕ

## ಹಿರಿಯ ಸಂಶೋಧಕ ಡಾ.ಬುರುಡೆಕಟ್ಟೆ ಮಂಜಪ್ಪ



ದಾವಣಗೆರೆ, ನ.7- ಸರ್ವಜ್ಞ ಒಬ್ಬ ಮೇರು ಕವಿ, ದಾರ್ಶನಿಕ. ಬಸವಾದಿ ಪ್ರಥಮರ ಮುಂದಿನ ವಾರಸು ದಾರ ಎಂದು ಕರೆಯಲಾಗುತ್ತದೆ ಎಂದು ಹಿರಿಯ ಸಂಶೋಧಕ ಡಾ. ಬುರುಡೆಕಟ್ಟೆ ಮಂಜಪ್ಪ ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 65ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಅಂತರ್ಜಾಲ ಮೂಲಕ ಬಿತ್ತರಗೊಂಡ 6ನೇ ದಿನದ ಕನ್ನಡ ನುಡಿ ಹಬ್ಬ ಕಾರ್ಯಕ್ರಮದಲ್ಲಿ 'ಸರ್ವಜ್ಞರ ಬದುಕು-ಬರಹ' ಕುರಿತು ಅವರು ಉಪನ್ಯಾಸ ನೀಡಿದರು.

ತ್ರಿಪದ ಕವಿ, ತ್ರಿಪದಿ ಸಾರ್ವಭೌಮ ಕವಿ ಎನಿಸಿಕೊಳ್ಳುವ ಸರ್ವಜ್ಞರು ಜಾನಪದ ಪ್ರಕಾರದ ತ್ರಿಪದಿಗೆ ಮೇರು ಸ್ಥಾನ ಕಲ್ಪಿಸಿದವರು ಎಂದು ಹೇಳಿದರು.

ಕಪ್ಪೆ ಆರ್ಯಭಟನ ಶಾಸನದಲ್ಲಿ ತ್ರಿಪದಿ ಮೊದಲ ಬಾರಿಗೆ ಉಲ್ಲೇಖವಾಗಿದೆ. ಅತ್ಯಂತ ಕೆಳಮಟ್ಟದ ವ್ಯಕ್ತಿಯನ್ನು ಶ್ರೇಷ್ಟ ಮಟ್ಟದಲ್ಲಿ ನೋಡುವಂತಹ ಮಹಾ ದಾರ್ಶನಿಕ ಸರ್ವಜ್ಞ ಎಂದು ಅವರು ಬಣ್ಣಿಸಿದರು.

ಸಿದ್ದವೀರಣ್ಣಾರ್ಯ ಎಂಬುವವರು ಹಸ್ತ ಪ್ರತಿಯ ಸಂಪಾದಕರು. ಅವರು ಸರ್ವಜ್ಞರ ತ್ರಿವಿಧಗಳು ಎಂಬ ಸುಮಾರು 250 ವಚನಗಳನ್ನು ಸಂಪಾದಿಸಿದ್ದಾರೆ. ಆದರೆ 1560ರ ರಲ್ಲಿ ಸರ್ವಜ್ಞರ ವಚನಗಳು ದೊರೆತಿರುವುದರಿಂದ ಇವರ ಕಾಲಘಟ್ಟ ಸಾಮಾನ್ಯವಾಗಿ 1520 ಇರಬಹುದು ಎಂದು ದೊರೆತಿರುವ ಕೆಲವು ಆಧಾರಗಳ ಮೂಲಕ ನಿರ್ಣಯಿಸಲಾಗಿದೆ ಎಂದರು.

ತಾಲ್ಲೂಕು ಕ.ಸಾ.ಪ. ಅಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷೀಯ ನುಡಿಗಳನ್ನಾಡುತ್ತಾ, ಸರ್ವಜ್ಞನೆಂಬುವರು ಗರ್ವದಿಂದಾದವನೇ ಸರ್ವರೊಳು ಒಂದೊಂದು ನುಡಿ ಕಲಿತು ವಿದ್ಯೆಯ ಪರ್ವತವೇ ಆದ ಸರ್ವಜ್ಞ ಎಂದು ಮಹಾನ್ ಕವಿಯನ್ನು ಸ್ಮರಣೆ ಮಾಡುವುದರ ಜೊತೆಗೆ ಅವರ ಆದರ್ಶದ ತ್ರಿಪದಿಗಳು ಅಂದಿನ ಕಾಲಕ್ಕೆ ಅಲ್ಲದೇ, ಇಂದಿನ ವರ್ತಮಾನ ಕಾಲಕ್ಕೂ ಸಂಜೀವಿನಿಗಳಾಗಿವೆ ಎಂದು ಹೇಳಿದರು.

ಆರಂಭದಲ್ಲಿ ಕದಳಿ ಮಹಿಳಾ ವೇದಿಕೆಯ ಶಾರದಾಂಬ ತಂಡದ ಸೌಮ್ಯ ಸತೀಶ್, ನಿರ್ಮಲ ಶಿವಕುಮಾರ್, ನಂದಿನಿ ಗಂಗಾಧರ್ ಸುಗಮ ಸಂಗೀತ ನಡೆಸಿಕೊಟ್ಟರು. ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ.ದಿಳ್ಯಪ್ಪ ಸ್ವಾಗತಿಸಿದರು.

# ಅತಿಯಾದ ಅನ್ ಲೋಡಿಂಗ್ ಹಣ ವಸೂಲಿ ತಡೆಗೆ ಮನವಿ

ದಾವಣಗೆರೆ, ನ.7- ಅತಿಯಾದ ಅನ್ ಲೋಡಿಂಗ್ ಹಣ ವಸೂಲಿ ತಡೆಯುವಂತೆ ಆಗ್ರಹಿಸಿ ಜಿಲ್ಲಾ ಲಾರಿ ಮಾಲೀಕರ ಮತ್ತು ಟ್ರಾನ್ಸ್ ಪೋರ್ಟ್ ಏಜೆಂಟರ ಸಂಘದ ನೇತೃತ್ವದಲ್ಲಿ ನಗರದಲ್ಲಿ ಇಂದು ಲಾರಿ ಮಾಲೀಕರು ಉಪವಿಭಾಗಾಧಿಕಾರಿಗಳ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.



ಜಿಲ್ಲೆಯಲ್ಲಿ ಸುಮಾರು 400 ಲಾರಿಗಳಿದ್ದು, ದಿನ ನಿತ್ಯ ಎಲ್ಲಾ ರೀತಿಯ ಸರಕುಗಳನ್ನು ದಾವಣಗೆರೆಗೆ ಮತ್ತು ದಾವಣಗೆರೆಯಿಂದ ವಿವಿಧ ಪ್ರದೇಶಗಳಿಗೆ ಸಾಗಾಣಿಕೆ ಮಾಡುತ್ತಿದ್ದು, ಈ ಹಿಂದೆ ಲಾರಿ ಮಾಲೀಕರು ಸರಕುಗಳ ಅನ್ ಲೋಡಿಂಗ್ ಗೆ ಯಾವುದೇ ಹಣ ನೀಡುತ್ತಿರಲಿಲ್ಲ. ಆದರೆ ಇತ್ತೀಚೆಗೆ ನಗರದಲ್ಲಿ ಎಲ್ಲಾ ತರಹದ ಸರಕಿನ ಮಾಲೀಕರು ಅತಿಯಾದ ಅನ್ ಲೋಡಿಂಗ್ ಹಣವನ್ನು ವಸೂಲಿ ಮಾಡುತ್ತಿರುವುದಾಗಿ ಸಂಘದ ಅಧ್ಯಕ್ಷ ಸೈಯದ್ ಸೈಫುಲ್ಲಾ ಆರೋಪಿಸಿದರು.

ಹಳೇ ದಾವಣಗೆರೆ ಚೌಕಿಪೇಟೆಯ ದವಸ-ಧಾನ್ಯದ ಅಂಗಡಿಗಳ ಮುಂದೆ ಹೋಗಲು ಸ್ಥಳವಿಲ್ಲದಿದ್ದಲ್ಲಿ ಲಾರಿಯನ್ನು ಬೇರೆಡೆ ನಿಲ್ಲಿಸಿ ಅದರಲ್ಲಿನ ಸರಕನ್ನು ಲಘು ವಾಹನಗಳಲ್ಲಿ ನಮ್ಮ ಖರ್ಚಿನಿಂದ ತಲುಪಿಸಲೆಂದು ದೌರ್ಜನ್ಯವೆಸಗುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರಲ್ಲದೇ, ಇನ್ನು ಮುಂದೆ ಲಾರಿ ಮಾಲೀಕರು ಯಾವುದೇ ರೀತಿಯಲ್ಲಿ ಅನ್‌ಲೋಡಿಂಗ್ ಹಣ ನೀಡುವುದಿಲ್ಲ. ಇಂದಿನಿಂದ ನಗರದಲ್ಲಿ ಅನ್ ಲೋಡಿಂಗ್ ಬಂದ್ ಮಾಡಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ನೇತಾಜಿ ರಾವ್, ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ, ಉಪಾಧ್ಯಕ್ಷ ಭೀಮಣ್ಣ, ಮಹಾಂತೇಶ್ ಒಣರೊಟ್ಟಿ, ದಾವಣಗೆರೆ ಲೋಕಲ್ ಮತ್ತು ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಎಮ್. ದಾದಾಪೀರ್, ಸೋಗಿ ಮುರಿಗೇಶ್, ಅಹ್ಮದ್, ಮಧ್ಯ ಕರ್ನಾಟಕ ಲಾರಿ ಮಾಲೀಕರ ಮತ್ತು ಟ್ರಾನ್ಸ್ ಪೋರ್ಟ್ ಏಜೆಂಟ್ ಸಂಘದ ಕಾರ್ಯದರ್ಶಿ ಬೆಳ್ಳೂಡಿ ಶಿವಕುಮಾರ್, ಕಾರ್ಯದರ್ಶಿ ಇಮಾಮ್ ಹುಸೇನ್, ಫೈರೋಜ್, ಅಶು, ಮನ್ಸೂರ್ ಸೇರಿದಂತೆ ಇತರರು ಇದ್ದರು.

# ಇಂದು ಸ್ವರಚಿತ ಅಂತರ್ಜಾಲ ಗೀತ ಗಾಯನ

ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಜಿಲ್ಲಾ ಘಟಕದ ವತಿಯಿಂದ ಕರ್ನಾಟಕ ರಾಜ್ಯೋತ್ಸವದ ನಿಮಿತ್ತ ಅಂತರ್ಜಾಲದಲ್ಲಿ ಕನ್ನಡ ಹಬ್ಬ ಸ್ವರಚಿತ ಗೀತ ಗಾಯನ ಕಾರ್ಯಕ್ರಮವು ಇಂದು ಬೆಳಿಗ್ಗೆ 11.30 ಕ್ಕೆ ನಡೆಯಲಿದೆ.

ಹರಿಹರದ ಹಿರಿಯ ಸಾಹಿತಿ ಶ್ರೀಮತಿ ಲಲಿತಮ್ಮ ಡಾ. ಚಂದ್ರಶೇಖರ್ ಉದ್ಘಾಟನಾ ನುಡಿಗಳನ್ನು, ದಾವಣಗೆರೆ ವನಿತಾ ಸಾಹಿತ್ಯ ವೇದಿಕೆಯ ಶ್ರೀಮತಿ ಮಲ್ಲಮ್ಮ ನಾಗರಾಜ್ ಆಶಯ ನುಡಿಗಳನ್ನು ಆಡಲಿದ್ದಾರೆ. ಹಿರಿಯ ಸಾಹಿತಿ ಶ್ರೀಮತಿ ಅರುಂಧತಿ ರಮೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಿ, 'ಮನದ ಮಾತು' ಕುರಿತು ಹಾಗೂ ಸಿರಿಗನ್ನಡ ವೇದಿಕೆ ಮಹಿಳಾ ಘಟಕದ ರಾಜ್ಯ ಸಂಚಾಲಕರಾದ ಶ್ರೀಮತಿ ಪದ್ಮಾ ಶ್ರೀಧರ್ 'ಮಹಿಳೆ, ಸಮಾಜ ಮತ್ತು ಸಾಹಿತ್ಯ' ಕುರಿತು ಮಾತನಾಡುವರು. ಭಾವಗೀತೆಯ ವಿಶ್ಲೇಷಣೆಯನ್ನು ಹಿರಿಯ ಸಾಹಿತಿ ಶ್ರೀಮತಿ ಭಾಗ್ಯಲಕ್ಷ್ಮಿ ಅಮೃತಾಪುರ ಮಾಡಲಿದ್ದಾರೆ.

ಸ್ವರಚಿತ ಗೀತ ಗಾಯನದಲ್ಲಿ ಪಾಲ್ಗೊಳ್ಳುವ ಕವಿಮನಗಳು : ಶ್ರೀಮತಿ ಸುನಿತಾ ಪ್ರಕಾಶ್, ಶ್ರೀಮತಿ ಗಿರಿಜಾ ಸಿದ್ದಲಿಂಗಪ್ಪ, ಶ್ರೀಮತಿ ಕೋಮಲ ವಸಂತಕುಮಾರ್, ಶ್ರೀಮತಿ ಡಾ. ರೂಪಾ ಶಶಿಕಾಂತ್, ಶ್ರೀಮತಿ ಸುನಿತಾ ರಾಜು, ಶ್ರೀಮತಿ ಸೀತಾ ನಾರಾಯಣ್, ಶ್ರೀಮತಿ ಉಮಾದೇವಿ ಐ.ಕೆ.

ಕರ್ನಾಟಕ ಲೇಖಕಿಯರ ಸಂಘದ ಜಿಲ್ಲಾಧ್ಯಕ್ಷರಾದ ಶ್ರೀಮತಿ ವೀಣಾ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸುವರು. ಹಿರಿಯ ಸಾಹಿತಿ ಶ್ರೀಮತಿ ಸತ್ಯಭಾಮ ಮಂಜುನಾಥ್ ವಂದಿಸುವರು.

## ಶಾಲೆ ಹೆಚ್ಚೇ

ಶಾಲೆ ಶಾಲೆ ಶಾಲೆ
ಮಕ್ಕಳಿಗೆ ಮತ್ತೆ ಶಾಲೆ
ಆರೋಗ್ಯಕ್ಕಿಂತ ಹೆಚ್ಚೆ ಶಾಲೆ
ಬೇಡ ಪ್ರಯಾಸದ ಪ್ರಯತ್ನ

ಮಕ್ಕಳಿಗೆ ದೂರ ದೂರ
ಇರಬೇಕೆಂದು
ಅರ್ಥವಾಗದ ವಿಷಯವಿದು
ಅಂತರ್ಜಾಲ ವಿದ್ಯಾಭ್ಯಾಸ
ಮುಂದುವರಿಯಲಿ ಸ್ವಲ್ಪ ದಿವಸ

ಪೋಷಕರಿಗೆ ಬುದ್ಧಿ ಹೇಳಿ
ಬಾಲಕಾರ್ಮಿಕ ಪದ್ಧತಿ ನಿಷೇಧಿಸಿ
ಕೂಲಿಗೆ ಕಳಿಸುವವರಿಗೆ
ಕಠಿಣ ಶಿಕ್ಷೆ ನೀಡಿ
ಮನೆಯಲ್ಲೇ ವಿದ್ಯಾಭ್ಯಾಸ
ಕೊಡಿಸಲು ಸಲಹೆ ಕೊಡಿ

ಅಂತರ್ಜಾಲದಲ್ಲಿ ಸಮಸ್ಯೆ ಇದೆ
ಆದರೆ ಆರೋಗ್ಯಕ್ಕಿಂತ ಹೆಚ್ಚೆ
ಮಕ್ಕಳೇ ಮನೆಗೆ ಮಾಣಿಕ್ಯ
ಅವರ ಆರೋಗ್ಯ
ಕಾಪಾಡುವುದು ಎಲ್ಲರ ಹೊಣೆ

**- ಕೋಮಲ ವಸಂತ ಕುಮಾರ್**

# ಬಿಎಸ್-6 ಇಂಧನದಲ್ಲಿ ವ್ಯತ್ಯಾಸವಿಲ್ಲ

## ಜಿಲ್ಲಾ ಪೆಟ್ರೋಲಿಯಂ ಡೀಲರ್ಸ್ ಅಸೋಸಿಯೇಷನ್ ಸ್ಪಷ್ಟನೆ

ದಾವಣಗೆರೆ, ನ.7- ಸರ್ಕಾರಿ ಸ್ವಾಮ್ಯ, ಖಾಸಗಿ ಸೇರಿದಂತೆ ಎಲ್ಲಾ ಪೆಟ್ರೋಲ್ ಬಂಕ್‌ಗಳಲ್ಲಿ ಮಾರಾಟವಾಗುತ್ತಿರುವ ಬಿಎಸ್-6 ಇಂಧನದಲ್ಲಿ ಯಾವುದೇ ವ್ಯತ್ಯಾಸವಿಲ್ಲ ಎಂದು ಜಿಲ್ಲಾ ಪೆಟ್ರೋಲಿಯಂ ಡೀಲರ್ಸ್ ಅಸೋಸಿಯೇಷನ್ ಸ್ಪಷ್ಟಪಡಿಸಿದೆ.

ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ, ಹಿಂದೂಸ್ತಾನ್ ಪೆಟ್ರೋಲಿಯಂ ಮತ್ತು ಖಾಸಗಿ ಕಂಪನಿಗಳಾದ ರಿಲಯನ್ಸ್, ಎಸ್ಸಾರ್, ಎಂಆರ್‌ಪಿಎಲ್, ಶೆಲ್‌ಗಳಲ್ಲಿ ಮಾರಾಟ ಮಾಡುತ್ತಿರುವ ಬಿ. ಎಸ್-6 ಇಂಧನ ಒಂದೇ ಆಗಿದ್ದು, ಇದರಲ್ಲಿ ಸಾರ್ವಜನಿಕರಿಗೆ ಯಾವುದೇ ಗೊಂದಲ ಬೇಡ ಎಂದು ಅಸೋಸಿಯೇಷನ್ ಅಧ್ಯಕ್ಷ ಎ. ಬಿ. ಶಂಭುಲಿಂಗಪ್ಪ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಫೆ. 2020ರಿಂದ ಸರ್ಕಾರಿ ಒಡೆತನದ ಆಯಿಲ್ ಮಾರ್ಕೆಟಿಂಗ್ ಕಂಪನಿಗಳಿಂದ ಬಿಎಸ್-6 ಇಂಧನವನ್ನು ಎಲ್ಲಾ ಇಂಧನ ಕೇಂದ್ರಗಳಲ್ಲಿ ಸರಬರಾಜು ಮಾಡಲಾಗುತ್ತಿದೆ. ಏಪ್ರಿಲ್ 2020ರಿಂದ ಖಾಸಗಿ ಕಂಪನಿಗಳೂ ಅಧಿಕೃತವಾಗಿ ಬಿಎಸ್-6 ಇಂಧನ ಮಾರಾಟ ಪ್ರಾರಂಭಿಸಿವೆ. ಕರ್ನಾಟಕ ಒಂದೇ ಟರ್ಮಿನಲ್, ಡಿಪೋದಿಂದಲೇ ಎಲ್ಲಾ ಕಡೆಗೆ ಇಂಧನ ಪೂರೈಕೆಯಾಗುತ್ತಿದೆ.

ಗ್ರಾಹಕರು ಸಹ ಎಲ್ಲಾ ಇಂಧನ ಕೇಂದ್ರಗಳಲ್ಲಿ ಇಂಧನದ ಗುಣಮಟ್ಟ, ಪ್ರಮಾಣ ಪರಿಶೀಲಿಸಲು ಸಂಪೂರ್ಣ ಅಧಿಕಾರ ಉಳ್ಳವರಾಗಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅಸೋಸಿಯೇಷನ್‌ನ ಡಿ.ಎಸ್. ಸಿದ್ದಣ್ಣ, ವಿನಯಕುಮಾರ್ ಇದ್ದರು.

# 50 ಬಡ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆಯ ತರಬೇತಿ

ದಾವಣಗೆರೆ, ನ.7- ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆ ವತಿಯಿಂದ ಮೆಡಿಕಲ್ ಆಕಾಂಕ್ಷಿಗಳಿಗೆ ಸುವರ್ಣ ಅವಕಾಶ ನೀಡಲು ಉದ್ದೇಶಿಸಿದ್ದು, ಇದೇ ದಿನಾಂಕ 23ರಿಂದ ನೀಟ್ ಪರೀಕ್ಷೆಗೆ ತರಬೇತಿ ನೀಡಲಾಗುವುದು ಎಂದು ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿ'ಸೌಜಾ ತಿಳಿಸಿದರು.

ಸಿದ್ದಗಂಗಾ ವಿದ್ಯಾಸಂಸ್ಥೆಯ ಸಂಸ್ಥಾಪಕ ಎಂ.ಎಸ್. ಶಿವಣ್ಣನವರ ಸ್ಮರಣಾರ್ಥ ಹಾಗೂ ಸಂಸ್ಥೆಯು 50 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವದ ಸವಿನೆನಪಿಗಾಗಿ 50 ಮಂದಿ ಬಡ ಮಕ್ಕಳಿಗೆ ಉಚಿತವಾಗಿ ಮತ್ತು ಬೇರೆ ಮಕ್ಕಳಿಗೆ ನಿಗದಿತ ಶುಲ್ಕ ಪಡೆದು ಉಚಿತವಾಗಿ ನೀಟ್ ಪರೀಕ್ಷೆ ನೀಡಲಾಗುವುದು. ಆದ್ದರಿಂದ ದ್ವಿತೀಯ ಪಿಯುಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ತೇರ್ಗಡೆಯಾಗಿರುವ ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

ಕೊರೊನಾ ಸೋಂಕಿನ ಕಾರಣಕ್ಕೆ ಈಗಾಗಲೇ ನಡೆದಿರುವ ನೀಟ್ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳು ಬಂದಿಲ್ಲ. ಹೀಗಾಗಿ ಕೆಲ ಮಕ್ಕಳು ವೈದ್ಯಕೀಯ ಶಿಕ್ಷಣದ ಸೀಟ್‌ಗಳಿಂದ ವಂಚನೆಯಾಗುವ ಸಾಧ್ಯತೆ ಇದೆ. ಇನ್ನೂ ಐದಾರೂ ತಿಂಗಳಲ್ಲಿ ನೀಟ್ ಪರೀಕ್ಷೆ ನಡೆಯಲಿದ್ದು, ಅದಕ್ಕೆ ವಿದ್ಯಾರ್ಥಿಗಳನ್ನು ತಯಾರುಗೊಳಿಸಬೇಕೆಂಬ ಉದ್ದೇಶದಿಂದ ಈ ತರಬೇತಿ ನೀಡಲಾಗುತ್ತದೆ ಎಂದವರು ವಿವರಿಸಿದರು.

ದ್ವಿತೀಯ ಪಿಯುಸಿಯಲ್ಲಿ 400ಕ್ಕೂ ಹೆಚ್ಚು ಅಂಕ ಪಡೆದ ಸಾಮಾನ್ಯ ವರ್ಗದ, 350ಕ್ಕೂ ಹೆಚ್ಚು ಅಂಕ ಪಡೆದ ಇತರೆ ಹಿಂದುಳಿದ ವರ್ಗದ, 300ಕ್ಕೂ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳು ರಾಜ್ಯದ ಯಾವುದೇ ಮೂಲೆಯಿಂದ ಬಂದರೂ ತರಬೇತಿ ನೀಡಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ನಿರ್ದೇಶಕ ಡಿ.ಎಸ್. ಜಯಂತ್, ಪಿಯು ಪ್ರಾಂಶುಪಾಲರಾದ ಗಾಯತ್ರಿ ಚಿಮ್ಮಡ್, ಪ್ರಾಧ್ಯಾಪಕರುಗಳಾದ ಎಲ್.ವಿ. ಸುಬ್ರಹ್ಮಣ್ಯ, ಕೆ.ಸಿ. ಸಿದ್ದಪ್ಪ, ಯು.ಡಿ. ಲಕ್ಷ್ಮಿನಾರಾಯಣ ಸೇರಿದಂತೆ ಇತರರು ಇದ್ದರು.

# ನಗರದಲ್ಲಿಂದು ಗೀತಗಾಯನ ಶಿಬಿರ ಉದ್ಘಾಟನೆ

ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್ (ಬೆಂಗಳೂರು) ಹಾಗೂ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಫೇಸ್‌ಬುಕ್ ಲೈವ್‌ಗಾಗಿ ಗೀತಗಾಯನ ತರಬೇತಿ ಶಿಬಿರದ ಉದ್ಘಾಟನಾ ಚಿತ್ರೀಕರಣ ಸಮಾರಂಭ ಇಂದು ಬೆಳಿಗ್ಗೆ 10.35 ಕ್ಕೆ ಆರ್.ಹೆಚ್. ಗೀತಾಮಂದಿರದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿ ಉದ್ಘಾಟಿಸುವರು. ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಮಾಧುರಿ ಶೇಷಗಿರಿ, ಸುಬ್ರಹ್ಮಣ್ಯ ನಾಡಿಗೇರ, ಕೆ.ಹೆಚ್. ಮಂಜುನಾಥ್ ಆಗಮಿಸುವರು.

# ವೀರಶೈವ ಮಹಾಸಭಾಕ್ಕೆ ಟಿಂಕರ್ ಮಂಜಣ್ಣ ಸಂಚಾಲಕ



ದಾವಣಗೆರೆ, ನ.7- ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಸಂಚಾಲಕರನ್ನಾಗಿ ಟಿಂಕರ್ ಮಂಜಣ್ಣ ಅವರನ್ನು ನೇಮಕ ಮಾಡಲಾಗಿದೆ ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ದೇವರಮನೆ ಶಿವಕುಮಾರ್ ತಿಳಿಸಿದ್ದಾರೆ.

# ಬನಶಂಕರಿ ಬಡಾವಣೆ ಅಭಿವೃದ್ಧಿಗೆ ಆದ್ಯತೆ : ಮೇಯರ್

ದಾವಣಗೆರೆ, ನ.7- ನಗರದ ಬೈಪಾಸ್ ರಸ್ತೆ ಪಕ್ಕದ ಬನಶಂಕರಿ ಬಡಾವಣೆಯನ್ನು ವಿಶೇಷ ಅನುದಾನದಡಿ ಅಭಿವೃದ್ಧಿಪಡಿಸಲಾಗುವುದು. ಇಲ್ಲಿನ ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ ಶೀಘ್ರವೇ ಕ್ರಮ ಕೈಗೊಳ್ಳುವುದಾಗಿ ನಗರ ಪಾಲಿಕೆ ಮಹಾಪೌರರಾದ ಬಿ.ಜಿ. ಅಜಯ್ ಕುಮಾರ್ ಭರವಸೆ ನೀಡಿದ್ದಾರೆ.



ಬನಶಂಕರಿ ಬಡಾವಣೆಗೆ ನಿನ್ನೆ ಭೇಟಿ ನೀಡಿದ ಮೇಯರ್ ಅಜಯ್ ಕುಮಾರ್ ಅವರು, ಬಡಾವಣೆಯಲ್ಲಿನ ಮೂಲಭೂತ ಸೌಲಭ್ಯಗಳ ಕೊರತೆಗಳನ್ನು ವೀಕ್ಷಿಸಿದರು.

ಈ ವೇಳೆ ಮಾತನಾಡಿದ ಅವರು, ಇಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಕಂಡು ಬರುತ್ತಿದೆ. ಹಾಗಾಗಿ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ. ಬಡಾವಣೆಯ ಜನರಿಗೆ ಸಾಕಷ್ಟು ತೊಂದರೆಯಾಗಿದೆ. ಈ ಬಗ್ಗೆ ಇಲ್ಲಿನ ನಿವಾಸಿಗಳು ಸಮಸ್ಯೆ ನಿವಾರಣೆಗೆ ಮನವಿ ಸಲ್ಲಿಸಿ ದ್ದಾರೆ. ಅತೀ ಶೀಘ್ರದಲ್ಲಿ ಸೌಲಭ್ಯ ಕಲ್ಪಿಸಲಾ ಗುವುದು. ಈ ಭಾಗದಲ್ಲಿ ಚಿಕ್ಕ ಬಡಾವಣೆ ನಿರ್ಮಾಣವಾಗಿದೆ. ಕೆಲ ಸೌಲಭ್ಯಗಳು ಸಮರ್ಪಕವಾಗಿಲ್ಲ ಎಂದು ತಿಳಿಸಿದರು.

ರಾಮ್ ಅಂಡ್ ಕೋ ವೃತ್ತದಲ್ಲಿ ಮರಗಳ ತೆರವು ಕುರಿತು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಅಲ್ಲಿ ಹಿಂದೆ ಸ್ಮಾರ್ಟ್ ಸಿಟಿಯವರು ಫುಟ್‌ಪಾತ್ ದೊಡ್ಡದಾಗಿ ಮಾಡಿದ್ದಾರೆ. ಇದರಿಂದಾಗಿ ರಸ್ತೆ ಸಂಚಾರ ಚಿಕ್ಕದಾಗಿದೆ. ಅದನ್ನು ತೆರವು ಮಾಡಿ ಹಿಂದೆ ಹಾಕಬೇಕು. ಅಂದರೆ ಫುಟ್ ಪಾತ್ ಅನ್ನು ಚಿಕ್ಕದಾಗಿ ಮಾಡಿದಾಗ ಸರ್ಕಲ್ ದೊಡ್ಡದಾಗುತ್ತದೆ. ವೃತ್ತದ ಬಳಿ 3-4 ಮರಗಳಿವೆ. ಅಲ್ಲಿನ ನಿವಾಸಿಗಳು ಮರ ಕಡಿದು ಸಾರ್ವಜನಿಕರ ಸುಗಮಸಂಚಾರಕ್ಕೆಅನುಕೂಲಮಾಡಿಕೊಡಬೇಕೆಂದು ಮನವಿ ಮಾಡುತ್ತಿದ್ದಾರೆ. ಮರ ಕಡಿದಾಗ ಪಕ್ಕದಲ್ಲಿ ಗಿಡ ನೆಡ ಬೇಕಿದೆ. ಅತ್ಯಂತ ಉತ್ತಮ ತಳಿಯ ಸಸಿಗಳಿವೆ. ಒಳ್ಳೆಯ ಸಸಿಗಳನ್ನೇ ನೆಡಲಾಗುವುದು ಎಂದವರು ಹೇಳಿದರು.

ಮೈಸೂರು ನಗರದಂತೆ ದಾವಣಗೆರೆಯನ್ನು ಅಭಿವೃದ್ಧಿ ಮಾಡಲಾಗುವುದು. ಬಜೆಟ್‌ನಲ್ಲಿ ಘೋಷಿಸಿರುವಂತೆ 1 ಲಕ್ಷ ಸಸಿ ನೆಡುವ ಕಾರ್ಯಕ್ಕೆ ಮುಖ್ಯಮಂತ್ರಿಗಳಿಂದ ಚಾಲನೆ ಕೊಡುವ ಉದ್ದೇಶವಿದೆ. ಅದಕ್ಕಾಗಿ ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲಿದ್ದೇವೆ. ಜನರ ಮನೆ ಬಾಗಿಲಿಗೆ ನಗರ ಪಾಲಿಕೆ ಉದ್ದೇಶವನ್ನು ಶೀಘ್ರದಲ್ಲೇ ಕಾರ್ಯಗತ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಉಪ ಮೇಯರ್ ಸೌಮ್ಯ ನರೇಂದ್ರ, ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಾದ ಎಸ್.ಟಿ. ವೀರೇಶ್, ಪ್ರಸನ್ನ ಕುಮಾರ್, ಗೌರಮ್ಮ ಗಿರೀಶ್, ಜಯಮ್ಮ ಗೋಪಿನಾಯ್ಕ್, ಪಾಲಿಕೆ ಸದಸ್ಯರಾದ ನಾಗರಾಜ್, ಆಯುಕ್ತ ವಿಶ್ವನಾಥ್ ಮುದಜ್ಜಿ, ಬನಶಂಕರಿ ಬಡಾವಣೆಯ ಸಮಿತಿ ಅಧ್ಯಕ್ಷ ಶಿವಕುಮಾರ್ ಸೇರಿದಂತೆ ಇತರರು ಇದ್ದರು.

## ಕಸಾಪ : ಕನ್ನಡ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಕನ್ನಡ ಭಾಷೆ : ಅಸ್ಮಿತೆ ಮತ್ತು ಬಹುಮುಖಿ ಸಾಧ್ಯತೆ' ವಿಷಯದ ಬಗ್ಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರದ ಕನ್ನಡ ಪ್ರಾಧ್ಯಾಪಕ ಡಾ. ಪ್ರಕಾಶ್ ಹಲಗೇರಿ ಅವರು ಮಾತನಾಡುವರು. ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYgಮುಖಾಂತರ ಕಾರ್ಯಕ್ರಮವನ್ನು ವೀಕ್ಷಿಸಬಹುದು.

# ಕೆಲಸ ಕೊಡಿಸುವುದಾಗಿ ನಂಬಿಸಿ ವಂಚನೆ

ದಾವಣಗೆರೆ, ನ.7- ದೊಡ್ಡ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ 3 ಲಕ್ಷ ರೂ. ವಂಚಿಸಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಗರದ ನಿಜಲಿಂಗಪ್ಪ ಬಡಾವಣೆಯ ಎಂ.ಎಸ್. ಅಬ್ದುಲ್ ಬಷೀರ್ ವಂಚ ನೆಗೊಳಗಾದವರು. ಈತ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಮ್ಯಾನೇಜರ್ ಕೆಲಸ ಮಾಡುತ್ತಿದ್ದು, 2 ತಿಂಗಳ ಹಿಂದೆ ಬೆಂಗಳೂರಿನ ಹೈಕೋರ್ಟ್ ಹತ್ತಿರ ಬಾಗಲಕೋಟೆಯ ಜಿಯಾವುಲ್ಲಾ ಎಂಬಾತ ಪರಿಚಿತನಾಗಿ, ನಿರುದ್ಯೋಗಿಗಳಿಗೆ ಕೆಲಸ ಕೊಡಿಸುವ ಕೆಲಸ ಮಾಡುತ್ತಿದ್ದು, ಬೆಂಗಳೂರಿನಲ್ಲಿ ಕೈ ತುಂಬಾ ಸಂಬಳ ಸಿಗುವ ದೊಡ್ಡ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿದ್ದ.

ಮೊಬೈಲ್ ನಂಬರ್ ಸಹ ಪಡೆದಿದ್ದ ಜಿಯಾವುಲ್ಲಾ ಒಂದು ತಿಂಗಳ ನಂತರ ಬಷೀರ್ ಅವರಿಗೆ ದೂರವಾಣಿ ಮುಖೇನ ಕರೆ ಮಾಡಿ ಬೆಂಗಳೂರಿನ ನನ್ನ ಸ್ನೇಹಿತನ ಕಂಪನಿಯಲ್ಲಿ ಎರಡು ಕೆಲಸ ಖಾಲಿ ಇದ್ದು, ಒಂದರಿಂದ ಒಂದೂವರೆ ಲಕ್ಷದವ ರೆಗೆ ಸಂಬಳ ಸಿಗುತ್ತದೆ. ಯಾರಾದರೂ ಇದ್ದರೆ ತಿಳಿಸುವಂತೆ ನಾಟಕವಾಡಿದ್ದಾನೆ.

ಇದನ್ನೇ ನಂಬಿದ ಬಷೀರ್ ಬಿ.ಎ ಆರ್ಕಿಟೆಕ್ಚರ್ ವ್ಯಾಸಂಗ ಮಾಡಿದ್ದ ತನ್ನ ಮಗನಿಗೆ ಹಾಗೂ ಡಿಪ್ಲೋಮಾ ಮಾಡಿದ್ದ ತನ್ನ ಸಹೋದರನ ಮಗನಿಗೆ ಕೆಲಸಕ್ಕೆ ಸೇರಿಸಲು ಹೇಳಿದಾಗ, ಒಬ್ಬರಿಂದ ತಲಾ 3 ಲಕ್ಷವನ್ನು ಡಿಪಾಸಿಟ್ ಕಟ್ಟುವಂತೆ ಜಿಯಾವುಲ್ಲಾ ತಿಳಿಸಿದ್ದು, ಅದಕ್ಕೆ ಒಪ್ಪಿದಾಗ ದಾವಣಗೆರೆಗೆ ಬಂದು ಭೇಟಿಯಾಗಿದ್ದ ಜಿಯಾವುಲ್ಲಾ ಇಬ್ಬರಿಂದ ತಲಾ ಒಂದೂವರೆ ಲಕ್ಷದಂತೆ 3 ಲಕ್ಷ ಪಡೆದು ಸಂದರ್ಶನಕ್ಕೆ ಕಂಪನಿಯಿಂದ ದಿನಾಂಕ ನಿಗದಿಯಾಗುವುದೆಂದು ತಿಳಿಸಿ ಹೋಗಿದ್ದಾನೆ. ತದನಂತರ ಜಿಯಾವುಲ್ಲಾ ನೀಡಿದ್ದ ದೂರವಾಣಿಗೆ ಸಂಪರ್ಕಿಸಿದಾಗ ಸ್ವಿಚ್ ಆಫ್ ಬಂದಿದ್ದು, ಮೋಸ ಹೋಗಿರುವ ಬಗ್ಗೆ ತಿಳಿದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಈ ಸಂಬಂಧ ದೂರು ದಾಖಲಿಸಿಕೊಂಡಿರುವ ಠಾಣೆಯ ಪೊಲೀಸ್ ಇನ್ಸ್ ಪೆಕ್ಟರ್ ಮುಸ್ತಾಕ್ ಅಹಮದ್ ತನಿಖೆ ಕೈಗೊಂಡು ಆರೋಪಿ ಪತ್ತೆಗೆ ಬಲೆ ಬೀಸಿದ್ದಾರೆ.

# ಜಗಳೂರಿನಲ್ಲಿ ನಾಳೆಯಿಂದ ಉಚಿತ ದಂತ ಚಿಕಿತ್ಸಾ ಶಿಬಿರ

ಜಗಳೂರು,ನ.7 -ಕೋವಿಡ್-19 ಗುಣಮುಖರಾಗಿರುವವರಿಗೆ ಉಚಿತ ದಂತ ಪರೀಕ್ಷೆ ಶಿಬಿರವನ್ನು ಇಲ್ಲಿನ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಪಕ್ಕದ ಶ್ರೀ ಕೆ.ಎಂ. ಕಲ್ಲಯ್ಯ ಸ್ಮಾರಕ ಆರೋಗ್ಯ ಕೇಂದ್ರದಲ್ಲಿ ನಾಡಿದ್ದು ದಿನಾಂಕ 9ರಿಂದ ಇದೇ ದಿನಾಂಕ 13 ರವರೆಗೆ ಏರ್ಪಡಿಸಲಾಗಿದೆ. ದಿ. ಶ್ರೀಮತಿ ಗೌರಮ್ಮ ವಿಶ್ವನಾಥ ಅವರ ಜನ್ಮದಿನದ ಪ್ರಯುಕ್ತ 5 ದಿನಗಳ ಕಾಲ ಈ ಶಿಬಿರ ನಡೆಯಲಿದ್ದು, ಕೋವಿಡ್ ನಿಂದ ಗುಣಮುಖರಾದವರು ಮೊ. 9036577528, 9826915042 ರಲ್ಲಿ ಸಂಪರ್ಕಿಸಿ ಹೆಸರು ನೋಂದಾಯಿಸಬಹುದು ಎಂದು ಡಾ. ಹಾಲಸ್ವಾಮಿ ಕಂಬಾಳಿಮಠ್, ಡಾ. ದೀಪಶ್ರೀ ಕಂಬಾಳಿಮಠ್ ತಿಳಿಸಿದ್ದಾರೆ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte